ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"ಮೊದಲನೇ ಖಂಡ, ಹೆಸರು, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ಈ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ).—"೧೯೮೭ನೇ ಇಸವಿಯ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"೧೯೮೭ನೇ ಇಸವಿಯ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1987ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ವಿಧೇಯಕ

ಪರ್ಯಾಲೋಚನ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ಮುಖ್ಯವಾದಂತಹ ಅಂಗಗಳು ಇವೆ ಮೊದಲನೇಯದು ಅಂದರೆ, ಬಹಳ ವೇಗವಾಗಿ ಬೆಳೆಯುತ್ತಿರತಕ್ಕಂಥ ನಗರಗಳ ಅಭಿವೃದ್ಧಿ ಯೋಜನೆಗಳ ಬಗ್ಗೆ ಮತ್ತು ಅವುಗಳನ್ನು ಒಂದು ನಿಯಂತ್ರಿತ ರೀತಿಯಲ್ಲಿ ಇಡಬೇಕೆನ್ನುವ ಬಗ್ಗೆ ಈ ಪ್ರಸ್ತಾವದಲ್ಲಿ ತಿಳಿಸಲಾಗಿದೆ. ಈಗ ಹುಬ್ಬಳ್ಳಿ, ಧಾರವಾಡ, ಕಾರವಾರ, ಮೈಸೂರು, ಮತ್ತಿತರ ನಗರಗಳು ಏನು ವೇಗವಾಗಿ ಬೆಳೆಯುತ್ತಿವೆ ಆ ನಗರ ಪ್ರದೇಶಗಳನ್ನು ಒಂದು ನಿಯಂತ್ರಿತ ರೀತಿಯಲ್ಲಿ, ಶಾಸನಬದ್ಧವಾಗಿ ಇಡಬೇಕೆನ್ನುವ ಬಗ್ಗೆ ವಿವಾದಗಳು ಏನೂ ಇಲ್ಲ. ಆದರೆ ಈ ಕೆಲಸವನ್ನು ಮಾಡತಕ್ಕಂಥ ಕಾನೂನು ನಮ್ಮಲ್ಲಿ ಇಲ್ಲ. ಅದಕ್ಕೋಸ್ಕರವಾಗಿ ಈ ಮಸೂದೆಯನ್ನು ತಂದಿದ್ದೇವೆ. ಎರಡನೇಯದಾಗಿ ಇದರಲ್ಲಿ ಅಡಕವಾಗಿರತಕ್ಕಂಥ ಪ್ಲಾನಿಂಗ್ ಅಥಾರಿಟಿ, ಡೆವಲಪ್‌ಮೆಂಟ್ ಅಥಾರಿಟಿ, ಇಂಪ್ರೂವ್‌ಮೆಂಟ್ ಬೋರ್ಡ್ ಆಕ್ಟ್. ಇವೆಲ್ಲಾ ಒಂದೇ ಒಂದು ಸಂಸ್ಥೆಯಲ್ಲಿ ಇರತಕ್ಕಂಥಾದ್ದು ಈಗ ಬೇರೆ ಬೇರೆ ಇದೆ. ಇವೆರಡನ್ನು ಸೇರಿಸಿ, ಒಂದೇ ಒಂದು ಅಧಿಕಾರವನ್ನು ಉಪಯೋಗಿಸತಕ್ಕಂಥ ಚಲಾಯಿಸತಕ್ಕಂಥ ಒಂದು ವಿಷಯ ಕೂಡ ಇದರಲ್ಲಿ ಅಡಕವಾಗಿದೆ. ಅವುಗಳು ಮುಖ್ಯವಾದುದು, ಮಿಕ್ಕವುಗಳು ಅಷ್ಟು ಇಂಪಾರ್ಟೆಂಟ್ ಅಲ್ಲ. ಆದುದರಿಂದ ದಯವಿಟ್ಟು ಮಾನ್ಯ ಸದಸ್ಯರುಗಳೆಲ್ಲರೂ ತಮ್ಮ ಬೆಂಬಲವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್.—ಈ ಮಸೂದೆಯಲ್ಲಿ ಅನೇಕ ಅಂಗಗಳು ಅಡಕವಾಗಿವೆ. ಮಾನ್ಯ ಸಚಿವರು ಹೇಳಿದ ಹಾಗೆ ಕರ್ನಾಟಕ ರಾಜ್ಯದಲ್ಲಿ ಅನೇಕ ನಗರಪ್ರದೇಶಗಳು ಬರುತ್ತಿವೆ. ಹೊಸದಾಗಿ ಅವುಗಳಿಗೆ ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ವ್ಯವಸ್ಥಿತವಾದ ರೀತಿಯಲ್ಲಿ ನಗರಗಳು ಬೆಳೆಯಬೇಕೆನ್ನುವ ಅಭಿಪ್ರಾಯ ಇರುವುದನ್ನು ಹೇಳಿದ್ದಾರೆ. ರಾಜ್ಯದಲ್ಲಿ ನಗರಪ್ರದೇಶಗಳು ಅಡ್ಡಾದಿಡ್ಡಿಯಾಗಿ ಬೆಳೆಯುತ್ತಾ ಇದೆ. ಇದನ್ನು ನಾವು ಕಾಣುತ್ತಾ ಇದ್ದೇವೆ. ಅಂತೆಯೇ ಅರ್ಬನ್ ಏರಿಯಾಗಳು ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಬೆಳೆಯುತ್ತಾ ಇದೆ. ಇದರಲ್ಲಿ ಮತ್ತೆ ಜಮೀನು ಇರುವ ಕಡೆ ಪಟ್ಟಭದ್ರಹಿತಗಳು ಮತ್ತು ಸ್ವಾರ್ಥಸಾಧಕರು ತಮಗೆ ಅನುಕೂಲ ಮಾಡಿಕೊಳ್ಳಬೇಕೆಂಬ ಪ್ರಯತ್ನ ನಡೆಸುತ್ತಿರುವುದು ನಿಜ. ಯಾವುದೇ ಯೋಜನೆ ಇಲ್ಲದೆ, ಅಡ್ಡಾದಿಡ್ಡಿಯಾಗಿ ಬೆಳೆದರೆ, ಅಲ್ಲಿ ರಸ್ತೆ, ಒಳಚರಂಡಿ ವ್ಯವಸ್ಥೆ ನೀರು ಮುಂತಾದ ಸೌಲಭ್ಯಗಳು ಸಿಗುವುದು ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಈ ಮಸೂದೆ ಬೇಕಾಗಿದೆ. ನಾನು ಬೇಡ ಎನ್ನುವುದಿಲ್ಲ. ಆದರೆ ಇಲ್ಲಿ ಎರಡು ಮೂರು ಅಂಶಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ ಮೊದಲನೆಯದಾಗಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯ ಕಾನ್‌ಸ್ಟಿಟ್ಯೂಷನ್ ಇದರಲ್ಲಿ ಇದೆ. ಅಲ್ಲಿ ಕ್ಲಾಸ್ ೩ (೩)ನಲ್ಲಿ ಏನು ಹೇಳಿದ್ದಾರೆಂದರೆ.

The Authority shall consist of the following members, namely.–

(a) the Chairman.

ಚೇರ್ಮನ್ ಬೇಕಾದರೆ ಅಫಿಶಿಯಲ್ ಆಗಿರಬಹುದು ಅಥವಾ ನಾನ್ ಅಫಿಶಿಯಲ್ ಮೆಂಬರ್ ಆಗಿರಬಹುದು.

(b) a town planner who shall be an officer of the Department of Town planning not below the rank of an Assistant Director of Town Planning.

(c) an engineer who shall be an officer of the Karnataka Engineering Service not below the rank of an Executive Engineer.

(d) members of the Karnataka Legislative Assembly representing a part of whole of the urban area

(e) a representative of the Karnataka Urban Water Supply and Drainage Board.

(f) a representative of the Karnataka Electricity Board

(g) Commissioner of the Corporation of Municipal Commissioner or Chief Officer of the Municipal Coucil Ex-Officio

(h) Deputy Commissioner of the District Ex-Officio

(i) an elected member of the local authority concerned

(j) the Superintendent of Police of the District, ex-Officio

(k) an Officer from the Karnataka Health and Family Welfare Department not below the rank of a District Health Officer

(l) the Commissioner, Ex-Officio.

ಇದರಲ್ಲಿ ಒಟ್ಟು ೧೩ ಜನ ಇದ್ದಾರೆ ಕೆಲವು ಸಲ ೧೩ ಆಗಬಹುದು. ಏಕೆಂದರೆ Members of the Karnataka Legislative Assembly representing a part of whole of the urban area, ಎಂದು ಹೇಳಿದ್ದೀರಿ. ಅರ್ಬನ್ ಏರಿಯಾದಲ್ಲಿ ಒಂದಕ್ಕಿಂತ ಜಾಸ್ತಿ ಕ್ಷೇತ್ರ ಇದ್ದರೆ. ಇಬ್ಬರು ಶಾಸಕರು ಬರಬಹುದು ನಮ್ಮ ಮಾನ್ಯ ಬೊಮ್ಮಾಯಿಯವರ ಹುಬ್ಬಳ್ಳಿ ಧಾರವಾಡ ಕ್ಷೇತ್ರದಲ್ಲಿ ಏನಾಗಿದೆ ಎಂದರೆ ಒಂದು ಭಾಗ ನಗರಕ್ಕೆ ಸೇರಿ ಬಿಟ್ಟಿದೆ. ಇನ್ನೊಂದು ಭಾಗ ಬೇರೆಯವರಿಗೆ

ಹೋಗಿದೆ. ಆಗ ಇಬ್ಬರು ಎಂ.ಎಲ್.ಎ. ಗಳು ಬರಬಹುದು. ಏನೇ ಆಗಲಿ. ಪ್ರಶ್ನೆ ಏನೆಂದರೆ ಇವರೆಲ್ಲಾ ಅಧಿಕಾರಿಗಳು ಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಬೇಡವಾದ ಅಧಿಕಾರಿಗಳನ್ನು ಸೇರಿಸಿದ್ದಾರೆ. The Superintendent of Police of the District, Ex-Officio ಎಂದೆಲ್ಲಾ ಇದೆ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಏಕೆ ಪೋಲೀಸ್ ಆಫೀಸರ್ ಬೇಕು ಎಂದು ನನಗೆ ಗೊತ್ತಿಲ್ಲ. ಇವರನ್ನು ಹಾಕುವ ಪ್ರಮೇಯವೇ ಇರಲಿಲ್ಲ. ಈ ಅಥಾರಿಟಿಯಂವರಿಗೆ ಲಾ ಅಂಡ್ ಆರ್ಡರ್ ಪ್ರಶ್ನೆಯೇ ಬರುವುದಿಲ್ಲ. ಅರ್ಬನ್ ಸಂತ್ತವುಂತ್ತ ರೆವಿನ್ಯೂ ಲೇಔಟ್ ಆಗ ತೊಡಗಿದರೆ ಅನಧಿಕೃತ ನಿರ್ಮಾಣಗಳಾದರೆ, ಸಂಬಂಧಪಟ್ಟವರು ಬೇಡಪ್ಪ ಕಟ್ಟಬೇಡಿ ಎಂದು ಹೇಳಿದರು ಪರಿಣಾಮವಾಗದಿದ್ದಾಗ ಪೋಲೀಸರಿಗೆ ಹೇಳಬೇಕಾಗುತ್ತದೆ. In the question of planning, there is no necessity of Police Officer. ಅವರನ್ನು ಸೇರಿಸುವುದು ನ್ಯಾಯವೂ ಅಲ್ಲ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿರುವ ಕಾನ್‌ಸ್ಟಿಟ್ಯೂಷನ್ ಆಧಾರದ ಮೇಲೆಯೇ ಇದನ್ನು ಮಾಡಿದ್ದಾರೆ ಅನ್ನಿಸುತ್ತದೆ, ಅಲ್ಲಿ ಪೋಲೀಸ್ ಆಫೀಸರ್ ಇದ್ದರೆ ಅಲ್ಲೂ ತೆಗೆದು ಹಾಕಿ ಅನ್ನುತ್ತೇನೆ.

You have stated as only "Ex-officio Commissioner." If he is the Commissioner of Urban Development Authority then there is no problem. You have to make it clear as to who is the Commissioner? There are other Commissioners like Deputy Commissioner of Corporation etc., We do not know as to who is the Commissioner referred to here.

SRI A. LAKSHMISAGAR.—We have said that in the caae of major municipalities, it is the City Municipal Commissioner.

SRI M. S. KRISHNAN.—It is already there in sub-clause (3) (g), where n it is mentioned as "Commissioner of the Corporation or Municipal Commissioner or Chief Officer of the Municipal Council Ex-Officio". But in sub-clause (3) (l) of Section 3, it is mentioned as "The Commissioner, Ex-Officio" It is not clear as to who is this Commissioner ? There cannot be a Commissioner in vacuum. This Commissioner is somebody who is a non-entity. I don't know who he is. Even if it is the Commissioner of Urban Development Authority, there is nothing like a Commissioner of Urban Development Authority.

(SMT. MANORAMA MADHWARAJ in the Chair)

In an enactment like this, if you do not specifically mention as to who is this Commissioner, you will be posing a question tomorrow to the judiciary and the Courts. That is why I want the Hon'ble Minister to make it very specific and absolutely clear. Another most important question is that here. you have loaded with officers excepting for the Legislative Assembly Members and the Chairmam who may be either from your party or some other party or from no Party ನಾನ್ ಅಫಿಷಿಯಲ್ ಮೆಂಬರು ಅಂದರೆ ಇಬ್ಬರು ವಿಧಾನ ಸಭಾ ಶಾಸಕರು ಹಾಗೂ ಒಬ್ಬರು ನಾನ್ ಅಫಿಷಿಯಲ್ ಮೆಂಬರ್ ಸೇರಿ ಎರಡು ಪ್ಲಸ್ 1 ಮೂರು ಆಗಬಹುದು ಅಥವಾ ಎರಡು ಆಗಬಹುದು ಉಳಿದವರೆಲ್ಲಾ ಅಫಿಷಿಯಲ್ ಮೆಂಬರ್ಸ್. So, the maximum number of non-official mumbers is only two or three out of 12 persons. Rest-

are all official members. Is it principally correct ? I would say that it is not principally correct. ಹಿಂದಿನ ಕಾನೂನನ್ನು ತೆಗೆದು ನೋಡಿ ಹೆಚ್ಚಿನ ಪ್ರಾತಿನಿಧ್ಯವನ್ನು ನಾನ್ ಅಫಿಷಿಯಲ್ ಮೆಂಬರ್ಸ್‌ಗೆ ಕೊಟ್ಟಿದ್ದೀರಿ. ಬೆಂಗಳೂರು ನಗರದ ಅನೇಕ ಜನ ಪ್ರಜೆಗಳಿಗೆ ಕೊಟ್ಟಿದ್ದೀರಿ, ಕಾರ್ಪೊರೇಷನ್ನಿನವರಿಗೆ ಕೊಟ್ಟಿದ್ದೀರಿ, ಅಸೆಂಬ್ಲಿ ಮೆಂಬರ್‌ಗೆ ಕೊಟ್ಟಿದ್ದೀರಿ ಲೇಬರ್ ಲೀಡರ್‌ಗೆ ಕೊಟ್ಟಿದ್ದೀರಿ. ಬಿ. ಡಿ. ಎ. ಆ್ಯಕ್ಟ್ ನೋಡಿದರೆ ಗೊತ್ತಾಗುತ್ತದೆ ಕಾರ್ಮಿಕ ವರ್ಗದ ಪ್ರತಿನಿಧಿ ಒಬ್ಬರಿಗೆ ಕೊಟ್ಟಿದ್ದೀರಿ. ಹಿಂದೆ ತಾವು ಅಸೆಂಬ್ಲಿಯಲ್ಲಿ ಇರಲಿಲ್ಲ. ನಾನು ಇದ್ದೆ. ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಅವರು ಮೊದಲನೇ ಸಾರಿ ಈ ಬಿಲ್ಲನ್ನು ಪೈಲಟ್ ಮಾಡಿದರು. ಆಗ ಇದೊಂದು ದೊಡ್ಡ ಪ್ರಶ್ನೆ ಬಂತು ನಗರಗಳಲ್ಲಿ ಟ್ರೇಡರ್ಸ್, ಮರ್ಚೆಂಟ್ಸ್ ಒಂದು ಕ್ಲಾಸ್ ಏನಿದ್ದಾರೆ ಇವರು ತಮ್ಮನ್ನು ತಾವು ರಕ್ಷಣೆ ಮಾಡಿಕೊಂಡು ಹೋಗುವ ಒಂದು ಶಕ್ತಿಯನ್ನು ಪಡೆದಿದ್ದಾರೆ, ಮಧ್ಯಮ ವರ್ಗದ ಬುದ್ಧಿಜೀವಿಗಳು ಆಫೀಸ್ ಗೋಯಿಂಗ್ ಎಂಪ್ಲಾಯೀಸ್ ವರ್ಕಿಂಗ್ ಕ್ಲಾಸ್ ಮಾಡಿದ್ದಾರೆ ಇವರನ್ನು ದುಡಿಯುವವರು ಎಂದು ಹೇಳಬಹುದು ಇವರ ಪ್ರತಿನಿಧಿ ಕೂಡ ಒಬ್ಬರು ಇರಬೇಕು. ಬರೇ ಶ್ರೀಮಂತರು ಮಾತ್ರವಲ್ಲ ದುಡಿಯುವವರ ಪ್ರತಿನಿಧಿ ಇರಬೇಕು, ಕಾರ್ಮಿಕ ವರ್ಗದಲ್ಲಿ ಯಾರನ್ನಾದರೂ ಹಾಕಲೇಬೇಕೆಂದು ಒತ್ತಾಯ ಮಾಡಿದ ಮೇಲೆ ಕಾರ್ಮಿಕ ವರ್ಗದವರಲ್ಲಿ ಒಬ್ಬರನ್ನು ಹಾಕಿದರು. ಇಲ್ಲಿಯೂ ಸಹಾ ಒಬ್ಬ ಪ್ರತಿನಿಧಿಯನ್ನು ಹಾಕಬೇಕು ಎಂದು ನಾನು ಈಗಲೂ ಒತ್ತಾಯ ಮಾಡುತ್ತೇನೆ. ಬಹು ಭಾಗ ಜನರು ಬಡವರು ಅಲ್ಲಿರುವುದು. ನಗರದಲ್ಲಿ ಸ್ವಲ್ಪ ಜನ ಮಾತ್ರ ಶ್ರೀಮಂತರು ಇರಬಹುದು, ಶ್ರೀಮಂತರು ಅವರ ಹಿತವನ್ನು ಕಾಪಾಡಿಕೊಳ್ಳುತ್ತಾರೆ. ಮತ್ತು ಅವರು ಬೇಕಾದ ಕಡೆಯಿಂದ ಪ್ರಭಾವ ಬೀರುತ್ತಾರೆ. ಬೆಂಗಳೂರು ನಗರದಲ್ಲಿ ಮಾಡಿಕೊಟ್ಟ ಮೇಲೆ ಸಣ್ಣ ಸಣ್ಣ ನಗರದಲ್ಲಿ, ಉಪನಗರಗಳಲ್ಲಿ ಮಾಡಿ ಕೊಡುವುದಕ್ಕೆ ಆಗುವುದಿಲ್ಲ ಎಂದರೆ ಅದನ್ನು ನಂಬುವುದಕ್ಕೆ ಸಾಧ್ಯವೇ ಇಲ್ಲ. ಅಲ್ಲಿ ಯಾರು ಕಷ್ಟ ಪಡುತ್ತಿದ್ದಾರೆ, ಅಂಥವರ ಪ್ರತಿನಿಧಿಗಳು ಯಾರಾದರೂ ಇರಬೇಕು ಎಂದು ಹೇಳುತ್ತೇನೆ. ಆರ್ಗನೈಜೇಷನ್ ಸೆಕ್ಷನ್‌ನಲ್ಲಿ ವರ್ಕಿಂಗ್ ಕ್ಲಾಸ್ ಇರುತ್ತದೆ. ಆ ತರಹ ಪ್ರತಿನಿಧಿಯನ್ನು ಸೇರಿಸಬೇಕು ಎಂದು ನನ್ನ ಅಭಿಪ್ರಾಯ. ಅದು ಇಲ್ಲದೇ ಹೋದರೆ ನ್ಯಾಯವಾಗಿರುವುದಿಲ್ಲ ಎಂದು ನನಗನ್ನಿಸುತ್ತದೆ. ಅಸೆಂಬ್ಲಿ ಮೆಂಬರ್ಸ್ ಜನಗಳೇ ಅದನ್ನೆಲ್ಲಾ ಮಾಡುತ್ತಾರೆ ಎನ್ನುವ ಅಭಿಪ್ರಾಯ ಇರಬಹುದು. ತಮಗೆ ಗೊತ್ತಿರುವ ಹಾಗೆ ಅಸೆಂಬ್ಲಿ ಮೆಂಬರ್ಸ್ ಎಲ್ಲರನ್ನೂ ಪ್ರತಿನಿಧಿಸಬೇಕಾಗುತ್ತದೆ. ಸೆಕ್ಷನಲ್ ಇಂಟರೆಸ್ಟ್ ಸಾಧ್ಯವಾಗುವುದಿಲ್ಲ. ಸೆಕ್ಷನಲ್ ಇಂಟರೆಸ್ಟ್ ಇರಬೇಕಾಗಿತ್ತು. ಅದು ಬೇಕಾಗಿರ ತಕ್ಕಂಥದ್ದು. ಏಕೆಂದರೆ ನಗರದಲ್ಲಿ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಸಬೇಕು. ಇನ್ನೊಂದು ವಿಷಯವನ್ನು ಅನುಭವದ ಮೇಲೆ ಹೇಳುತ್ತೇನೆ. ಬಿಡಿಎ. ನಲ್ಲಿ ಒಂದು ಪ್ರಶ್ನೆ ಬಂತು. ಅದೇನೆಂದರೆ ಆಗ ಮಾನ್ಯ ಬಸವಯ್ಯನವರು ಅಧ್ಯಕ್ಷರಾಗಿದ್ದರು. ನಾನು ಆಗಲೇ ಇದ್ದೆ ಇ. ಡಬ್ಲ್ಯೂ. ಎಸ್. (ಎಕನಾಮಿಕಲಿ ವೀಕರ್ ಸೆಕ್ಷನ್)ಗೆ ಮನೆಗಳನ್ನು ಕಟ್ಟಬೇಕೋ ಅಥವಾ ಹೈಯರ್ ಇನ್‌ಕಂ ಗ್ರೂಪ್‌ಗೆ ಮನೆಯನ್ನು ಕಟ್ಟಬೇಕೋ ಅಥವಾ ಅವರಿಗೆ ಯಾವ ತರಹ ಸೈಟನ್ನು ಕೊಡಬೇಕು, ಇ. ಡಬ್ಲ್ಯೂ. ಎಸ್. ಗೆ ಮಾಡಬೇಕೇ, ಎಂ. ಐ. ಜಿ. ಗೆ ಮಾಡಬೇಕೇ, ಎಲ್. ಐ. ಜಿ. ಗೆ ಮಾಡಬೇಕೇ ಅಥವಾ ಯಾರ್‍ಯಾರಿಗೆ ಎಷ್ಟೆಷ್ಟು ಮಾಡಬೇಕು ಎನ್ನುವ ಒಂದು ವಾದ ಬಂತು. ದುರಾದೃಷ್ಟವಶಾತ್ ಇ. ಡಬ್ಲ್ಯೂ. ಎಸ್. ಗೆ ಸೈಟುಗಳನ್ನು ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಕೊನೆಗೆ ಅವರು ಸೈಟುಗಳನ್ನು ಮಾರಾಟ ಮಾಡಿಕೊಂಡು ಬಿಡುತ್ತಾರೆ. ಅವರು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ ಮತ್ತೆ ಗುಡಿಸಲುಗಳನ್ನು ಕಟ್ಟುತ್ತಾರೆ. ಇಲ್ಲದೇ ಹೋದರೆ ಮನೆಗಳನ್ನು ಕಟ್ಟಿ ಬೇರೆಯವರಿಗೆ ಪರಭಾರೆ ಮಾಡುತ್ತಾರೆ. ಆಗ ಅದನ್ನು ಯಾರೋ ತೆಗೆದುಕೊಂಡು ಬಿಡುತ್ತಾರೆ. ಪ್ಲಾನ್ ರೀತ್ಯಾ ಮನೆಗಳನ್ನು ಕಟ್ಟಿರುವುದಿಲ್ಲ, ಆಡ್ಡಾದಿಡ್ಡಿ ಮಾಡಿರುತ್ತಾರೆ. ಆದ್ದರಿಂದ ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡಬಾರದು ಎನ್ನುವುದು ಒಬ್ಬರ ವಾದ. ಅದಕ್ಕೆ ಬೆಂಬಲ ಕೊಡುವ ರೀತಿಯಲ್ಲಿ ನಾನ್ ಆಫಿಸಿಯಲ್ ಮೆಂಬರ್‌ಗೆ ಅಫಿಸಿಯಲ್ ಸಹಾ ಹೇಳಿದರು. ಈ ನಗರವೆಲ್ಲಾ ಅವರದೇ. ಮನೆ ಸರಿಯಾಗಿರಬೇಕು. ಅದಕ್ಕೆ ಈಜುಕೊಳ ಇರಬೇಕು. ಟ್ಯಾಂಕ್ ಇರಬೇಕು. ನಮ್ಮ ಮಾನ್ಯ ಜೀವರಾಜ ಆಳ್ವ ಅವರ ಮನೆ ಇರುವ ರೀತಿ ಇರಬೇಕು. ಆ ರೀತಿಯಾಗಿರಬಹುದು ಎಂದು. ಆ ತರಹ ಅವರ ಅಭಿಪ್ರಾಯ ಇರಬಹುದು. ಅದು ಸರಿಯಾದ ಅಭಿಪ್ರಾಯ ಅಲ್ಲ. ಅದನ್ನು ಮಾಡಿದ್ದರೆ ತಪ್ಪು ಎಂದು ನಾನು ಹೇಳುತ್ತಿದ್ದೇನೆ. ಈ ಸಮಾಜದಲ್ಲಿ ಇವತ್ತು ಯಾರು ಹಿಂದೆ. ಉಳಿದಿದ್ದಾರೆ, ಬಡವರಾಗಿದ್ದಾರೆ ಅವರ ಬಗ್ಗೆ ಕಾಳಜಿ ಇದೆ, ಕಳವಳ ಇದೆ ಅನುಕಂಪ ಇದೆ, ಆದ್ದರಿಂದ ಅಂಥವರನ್ನು ಮುಂದೆ ತರಬೇಕು

ಎನ್ನುವ ಅಭಿಪ್ರಾಯ ಇದ್ದರೆ ಇದನ್ನು ತೀರ್ಮಾನ ಮಾಡಲೇಬೇಕು. ಅಂಥವರ ಪ್ರತಿನಿಧಿ ಇರಬೇಕು. ಆ ತರಹ ಪ್ರತಿನಿಧಿ ಇರುವುದಕ್ಕೆ ಅವಕಾಶ ಇರಬೇಕು. ಆದರೆ ಈ ಮಸೂದೆಯಲ್ಲಿ ಅವಕಾಶ ಇಲ್ಲ. ಇದನ್ನು ಅಂದರೆ ಈ ಮಸೂದೆಯನ್ನು ಹೇಸ್ಟಿಯಾಗಿ ತೆಗೆದುಕೊಂಡು ಬಂದಿದ್ದೀರಿ ಎಂಬುದು ನನ್ನ ಅಭಿಪ್ರಾಯ. ಯೋಚನೆ ಮಾಡಿ ಬಿ. ಡಿ. ಎ. ಗೆ ಕಂಪೇರ್ ಮಾಡಿ ಮಾಡಿದ್ದರೆ ಪರಿಸ್ಥಿತಿ ಉತ್ತಮವಾಗುತ್ತಿತ್ತು ಎಂದು ನನಗನ್ನಿಸುತ್ತದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಈಗ ಕೊಡಬೇಕು. ಮಾನ್ಯ ಮಂತ್ರಿಗಳಾಗಲೀ ಸಂಬಂಧಪಟ್ಟ ಆ ಮಂತ್ರಿಗಳಾಗಲೀ ಅವರಿಬ್ಬರಲ್ಲಿ ಯಾರಾದರೂ ಅದನ್ನು ಸೇರಿಸಿಕೊಂಡರೆ ಒಳ್ಳೆಯದು. ಇನ್ನೊಂದು ದೃಷ್ಟಿಯಿಂದ ನಾನ್ ಅಫಿಷಿಯಲ್ ಮೆಂಬರ್ಸ್ ಜಾಸ್ತಿ ಇರಬೇಕು. ಅಫಿಸಿಯಲ್ಸ್ ಕಡಿಮೆ ಇರಬೇಕು. ಏತಕ್ಕೆ ಹೇಳುತ್ತಿದ್ದೇನೆಂದರೆ ಇನ್ನೊಂದು ಕ್ಲಾಸ್ ಇದೆ. ಕ್ಲಾಸ್ ನಂಬರ್ ೮ ಏನು ಹೇಳುತ್ತದೆ ಎಂಬುದನ್ನು ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ.

ಇದರಲ್ಲಿ ಮೊದಲನೇ ಪ್ರಶ್ನೆ ರೈಸ್ ಮಾಡಿದ್ದು on the question of constution. ಎರಡನೆಯದು ಯಾರಾದರೂ ಒಬ್ಬ ಲೇಬರ್ ರೆಪ್ರೆಸೆಂಟೆಟೀವ್ ತರಹ ಟ್ರೇಡ್ ಯೂನಿಯನ್ ಮೆಂಬರ್ ಯಾರನ್ನಾದರೂ ಸೇರಿಸಬೇಕು. ಬಿ. ಡಿ. ಎ. ನವರು ಸೇರಿಸಿದ್ದಾರೆ ಹಿಂದೆ ಈ ಬಗ್ಗೆ ಟ್ರೇಡ್ ಯೂನಿಯನ್ ರವರನ್ನು ಸೇರಿಸಬೇಕೆಂದು ಮಾನ್ಯ ದೇವರಾಜ್ ಅರಸ್ ಅವರ ಕಾಲದಲ್ಲಿ ಸೂಚನೆ ಕೊಟ್ಟಾಗ ಅದನ್ನು ಅವರು ಒಪ್ಪಿಕೊಂಡರು. ಎರಡರಲ್ಲಿ ಇಬ್ಬರಿಗೆ ನೀವು ಅವಕಾಶ ಕೊಡಬಹುದು Working class is a very impoitant class. It is a mrst important class in small towns and in bigger towns also. ಆದ್ದರಿಂದ ಕಾರ್ಮಿಕ ವರ್ಗದವರಿಗೆ ಯಾರನ್ನಾದರೂ ಕೊಡಬೇಕು, ಈ ದೃಷ್ಟಿಯಿಂದ ಹೇಳುತ್ತೇನೆ. ಇನ್ನೊಂದು ನಾನ್ ಅಫಿಷಿಯಲ್ಸ್ ಜಾಸ್ತಿ ಮಾಡಿ ಈಗ ಅಫಿಷಿಯಲ್ಸ್ ಹೆಚ್ಚು ಇದ್ದಾರೆ. ಕ್ಲಾಸ್ ನಂಬರ್ ೮ (೪)ರಲ್ಲಿ ಈ ರೀತಿ ಹೇಳಿದ್ದಾರೆ.

> "All questiens which come up before any meeting of the authority shall be decided by a majority of the votes of the members present and voting and in the event of an equality votes the Chairman or in his absence the person presiding, shall have and exercise a second or casting vote."

ನೀವು ಅಫಿಷಿಯಲ್ಸ್ ಏಕೆ ಜಾಸ್ತಿ ಮಾಡಿದ್ದೀರಿ ? ಅದು "ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ" ಎಂಬಂತೆ ಆಗಿದೆ. ನನ್ನ ಅನುಭವದ ಮೇಲೆ ಮಾತನಾಡುತ್ತಿದ್ದೇನೆ. ಅಧಿಕಾರಿಗಳು ಕೆಟ್ಟವರು ಎಂದು ನಾನು ಹೇಳುತ್ತಿಲ್ಲ. ಅವರ ಮನೋಭಾವ ಅವರು ಬಿಡುವುದಿಲ್ಲ. ನೀವು ಎಷ್ಟೇ ಹೇಳಿ ಅವರು ೩೦ × ೪೦ ಸೈಟ್ ಜಾಸ್ತಿ ಮಾಡಬೇಕು, ೪೦ × ೬೦ ಸೈಟ್ ಜಾಸ್ತಿ ಮಾಡಬೇಕು ೬೦X೮೦ ಸೈಟ್ ಜಾಸ್ತಿ ಮಾಡಬೇಕು ಎಂದು ಹೇಳುತ್ತಾರೆ. ಇದು ಒಂದು ವಾದ, ಹಿಂದೆ ೩೦X೪೦ ಮಾಡಿದ್ದರು ೪೦X೬೦ ಮಾಡೋಣವೆಂದು ಹೇಳುತ್ತಾರೆ. ಮಾನ್ಯ ಬಸವಯ್ಯನವರು ಅಧ್ಯಕ್ಷರಾಗಿದ್ದರು. ಅವರು ಏನು ಹೇಳುತ್ತಾರೆ ಅಂದರೆ ಎಕನಾಮಿಕಲಿ ವೀಕರ್ ಸೆಕ್ಷನ್ಸ್‌ಗೆ ೧೫X೨೦ ಮಾಡೋಣ ಎಂದು ಹೇಳಿದ್ದರು. ಈ ಅಭಿಪ್ರಾಯಕ್ಕೆ ಬಂದಿದ್ದರು. ಇಷ್ಟೇ ಅಭಿಪ್ರಾಯಕ್ಕೆ ಬಂದರೆ ಕಷ್ಟ ಆಯಿತು. ವಾಕ್-ಔಟ್ ಮಾಡಲಿಲ್ಲ, ಜಬರ್‌ದಸ್ತಾಗಿ ಮಾಡುವ ತೀರ್ಮಾನ ಆಯಿತು. ಬೆಂಗಳೂರಿನ ಸುತ್ತಮುತ್ತ ರೆವಿನ್ಯೂ ಸೈಟ್ ಹೋಲ್ಡರ್ಸ್ ಇದ್ದಾರೆ. ರೆವಿನ್ಯೂ ಲಾಕೆಟ್ಸ್ ಇದೆ ನೀವು ನೋಟಿಫಿಕೇಷನ್ ಹೊರಡಿಸಿದ್ದೀರಿ, ರೆವಿನ್ಯೂ ಆಗದಿದ್ದರೂ ಅದನ್ನು ರೆಗ್ಯುಲರೈಸ್ ಮಾಡಿ ಅವರಿಗೆ ಕೊಡಬೇಕೆಂದು ನಮ್ಮ ವಾದ. ಇದನ್ನು ಸರ್ಕಾರ ತತ್ವಶಃ ಒಪ್ಪಿಕೊಂಡಿದೆ. ರೆವಿನ್ಯೂ ಪಾಕೆಟ್ಸ್‌ನವರಿಗೆ ಇವೊತ್ತು ಚಾರ್ಜ್ ಮಾಡುತ್ತಿದ್ದೀರಿ ನಾವು ಡೆವಲಪ್‌ಮೆಂಟ್ ವರ್ಕ್ಸ್ ಮಾಡುತ್ತೇವೆ. ನೀರು ಕೊಡುತ್ತೇವೆ, ಲೈಟ್ ಹಾಕಿಸುತ್ತೇವೆ, ಟಾರ್ ಹಾಕಿಸುತ್ತೇವೆ ಎಂದು ಹೇಳುತ್ತೀರಿ ಆದರೆ ಮಾಡುವುದಿಲ್ಲ. ಇದನ್ನು ಮಾಡಬೇಕಾಗುತ್ತದೆ. ಮಾಡಬೇಕಾದರೆ ತಮಗೆ ದುಡ್ಡು ಕೊಡಬೇಕು. ಯಾರು ತೀರ ನಿರ್ಗತಿಕರು ಅವರಿಗೆ ರಿಯಾಯಿತಿ ಕೊಡಬೇಕು ಒಂದು ಚದರಕ್ಕೆ ಇಷ್ಟು ಕೊಡಬೇಕು, ೧೫ ರೂಪಾಯಿ ಕೊಡಬೇಕು, ೨೦ ರೂಪಾಯಿ ಕೊಡಬೇಕೆಂದು ಹೇಳುತ್ತೀರಿ, ಇದು ಯಾವ ನ್ಯಾಯ ? ಇದು ನಡೆದಿದೆ. ನಮ್ಮ ಅಭಿಪ್ರಾಯದಲ್ಲಿ ಇವೆಲ್ಲಾ ಅಧಿಕಾರಿಗಳು ಜಾಸ್ತಿ ಇರುವಂತಹ ಕಡೆ ಮಾಡಬೇಕು. ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಏರಿಯಾದಲ್ಲಿ ಮಾಡಿದರೆ ಇದರಿಂದ ಖಂಡಿತವಾಗಿ ನಿಮ್ಮ ಗುರಿ ಸಾಧಿಸುವು

ದಕ್ಕೆ ಆಗುವುದಿಲ್ಲ. ಹೀಗೆ ಮಾಡಿದರೆ ನೀವು ಬಡವರಿಗೆ ಅನುಕೂಲ ಮಾಡುವುದಕ್ಕಾಗುವುದಿಲ್ಲ. ಬಡವರ ಬಗ್ಗೆ ನಿಮಗಿರುವ ಅನುಕಂಪ ಕಾರ್ಯಗತವಾಗಬೇಕೇ ಹೊರತು, ಅದು ಕೇವಲ ಕಾಗದದ ಮೇಲೆ ಉಳಿಯಬಾರದು. ಈ ಕಾರಣದಿಂದ ಇದನ್ನು ಬದಲಾವಣೆ ಮಾಡಬೇಕಾಗುತ್ತದೆ. ಮತ್ತೆ ಇಲ್ಲಿ ಎಸ್.ಸಿ.ಯವರಿಗೆ ಒಂದು ಸ್ಥಾನವನ್ನು ಮತ್ತು ಒಂದು ಸ್ಥಾನವನ್ನು ಮಹಿಳೆ ಒಬ್ಬರಿಗೆ ಕೊಡ ಬೇಕೆಂದು ಸರ್ಕಾರದ ವತಿಯಿಂದಲೇ ತಿದ್ದುಪಡಿ ತಂದಿರುವುದು ಸಂತೋಷದ ಸಂಗತಿ.

ಶ್ರೀ ಎಸ್. ಬಂಗಾರಪ್ಪ —ಅದರಲ್ಲಿ ಆರ್ಕಿಟೆಕ್ಟ್ ಒಬ್ಬರಿಗೆ ಸ್ಥಾನ ಕೊಡಬೇಕೆಂದು ತಾವು ಸಲಹೆ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.--ಇದರಲ್ಲಿ ನಾನ್‌ಅಫಿಷಿಯಲ್ ಆರ್ಕಿಟೆಕ್ಟ್‌ಗೆ ಒಂದು ಸ್ಥಾನ ಕೊಟ್ಟರೆ ಒಳ್ಳೆಯದು. ಮುಖ್ಯವಾಗಿ ಇದರಲ್ಲಿ ಅಧಿಕಾರಿಗಳು ಹೆಚ್ಚಾಗಿರುತ್ತಾರೋ ಅಥವಾ ಅಧಿಕಾರೇತರರು ಹೆಚ್ಚಾಗಿರುತ್ತಾರೋ ಎಂಬುದು ಮುಖ್ಯ. ನಾನು ಸರಿಯಾಗಿ ಲೆಕ್ಕ ಹಾಕಿ ನೋಡಿಲ್ಲ. ಇಲ್ಲಿ ಅಧಿ ಕಾರೇತರರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕೆಂದು ಹೇಳುತ್ತೇನೆ. ಇದರಲ್ಲಿ ನೀವು ಲೇಬರ್-ಕ್ಲಾಸ್‌ಗೆ ಏತಕ್ಕೆ ಪ್ರಾತಿನಿಧ್ಯ ಕೊಟ್ಟಿಲ್ಲ. ಅವರಿಗೂ ಕೊಡಿ.

ಶ್ರೀ ಎಂ. ಚಂದ್ರಶೇಖರ್.--ಜನರಲ್ ಆಗಿ ೪ ಸ್ಥಾನಗಳು ಏನಿವೆ, ಅದರಲ್ಲಿ ಒಂದು ಸ್ಥಾನವನ್ನು ಕೊಡಬಹುದು.

ಶ್ರೀ ಎಂ ಎಸ್. ಕೃಷ್ಣನ್.--ಅದನ್ನು ತಾವು ಇದರಲ್ಲಿಸ್ಪೆಸಿಫಿಕ್ ಆಗಿ ಹೇಳಬೇಕು. ಬೆಂಗಳೂರಿನ ಬಿ.ಡಿ.ಎ.ನಲ್ಲಿ ಇವರಿಗೆ ಒಂದು ಸ್ಥಾನ ಕೊಡಲು ಒಪ್ಪಿಕೊಂಡಿದ್ದೀರಿ. ಆದ್ದರಿಂದ ಬೇರೆ ಕಡೆಗಳಲ್ಲಿಯೂ ಸಹ ಏತಕ್ಕೆ ಕೊಡಬಾರದು ? ಈಗ ಮೈಸೂರು, ಹುಬ್ಬಳ್ಳಿ ಮತ್ತು ಧಾರವಾಡ, ಮಂಗಳೂರು ಮುಂತಾದ ನಗರಗಳಲ್ಲಿ ಹೆಚ್ಚಿನ ಕಾರ್ಖಾನೆಗಳನ್ನು ಸ್ಥಾಪಿಸುತ್ತಿರುವುದರಿಂದ ಅಲ್ಲೆಲ್ಲಾ ಹೆಚ್ಚಿನ ಸಂಖ್ಯೆ ಯಲ್ಲಿ ಕಾರ್ಮಿಕರು ಇರುತ್ತಾರೆ. ಆದ್ದರಿಂದ ಎಲ್ಲ ಕಡೆಯೂ ಲೇಬರ್ಸ್‌ಗೆ ಪ್ರಾತಿನಿಧ್ಯ ಕೊಡುವುದು ಒಳ್ಳೆಯದು. ಇವರಿಗೆ ಪ್ರಾತಿನಿಧ್ಯ ಕೊಡದಿರಲು ಬೇರೆ ಏನಾದರೂ ಕಾರಣಗಳು ಇವೆಯೋ ? ಇವರಿಗೆ ಪ್ರಾತಿನಿಧ್ಯ ಕೊಟ್ಟರೆ ರಾಜಕೀಯ ದೃಷ್ಟಿಯಿಂದ ಸಹ ನಿಮಗೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

೨-೩೦ ಪಿ.ಎಂ.

ಇನ್ನೊಂದು ವಿಷಯ ಏನೆಂದರೆ, ದಿ ಪವರ್ಸ್ ಆಫ್ ಡಿಫರೆಂಟ್ ಅಥಾರಿಟಿ ಎಂದು ಹೇಳಿದ್ದಾರೆ. ಅದಕ್ಕಿಂತ ಮುಂಚಿತವಾಗಿ ಇನ್ನೊಂದು ವಿಷಯ ಇದೆ. ಅದೇನೆಂದರೆ, ಇದರಲ್ಲಿ ಡೆಫಿನಿಷನ್ಸ್ ಕೊಟ್ಟಿ ದ್ದಾರೆ. ಆ ಡೆಫಿನಿಷನ್ಸ್‌ನಲ್ಲಿ ಸಿವಿಕ್ ಅಮೆನಿಟೀಸ್ ಎಂದು ಇದೆ.

> "Civic amenity" means a market, a post office, a bank, a fair price shop, a milk booth, a school, a dispensary, a maternity home, a child care centre, a library, a gymnasium a recreation centre run by the government or local authority...".

This is most important thing. 'A recreation centre run by the Government', this has been called into question by the Court. That means, a civic amenity site cannot be given to any institution other than the one run by the Government.

ಶ್ರೀ ಎಂ. ಚಂದ್ರಶೇಖರ್.— ಅದಕ್ಕೆ ಒಂದು ಅಫಿಷಿಯಲ್ ಅಮೆಂಡ್‌ಮೆಂಟ್ ಬರುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.— ನಾನು ಓದದೇ ಹೋಗಿದ್ದರೆ ಅದು ಹೋಗುತ್ತಿತ್ತು. ನಾವು ಊದುವ ಶಂಖ ಊದಬೇಕು.

ಶ್ರೀ ಎಂ. ಚಂದ್ರಶೇಖರ್.— ಇದರ ಬಗ್ಗೆ ಪ್ರಸ್ತಾಪ ಏಕೆ ಎಂದು.

ಶ್ರೀ ಎಂ. ಎಸ್. ಕೃಷ್ಣನ್. — ಅದು ಬಂದಮೇಲೆ ಏನು ಬರುತ್ತದೋ ನೋಡೋಣ. ಇದು ಸೇರಿಕೊಳ್ಳದೇ ಹೋದರೆ ಅದಕ್ಕೆ ಅವಕಾಶ ಮಾಡಿಕೊಡಿ. ಇನ್ನೊಂದು ವಿಷಯವೇನೆಂದರೆ, "Powers of different authorities" ಎಂದು ಇದೆ ಇದರಲ್ಲಿ.

> "The authority may sanction any estimate, call for tenders or enter into any contract or agreement, the value or amount whereof shall not exceed rupees five lakhs in such manner and form as, according to law for the time being in force would bind them if such contract or agreement were on their own behalf, and every such contract or agreement shall be reported to the authority at its next meeting."

ಎಂದು ಇದೆ. ಇದರಲ್ಲಿ ನನ್ನ ಅಭಿಪ್ರಾಯ ಏನೆಂದರೆ, ನನ್ನ ಸ್ವಂತ ಅನುಭವದ ಆಧಾರದ ಮೇಲೆ ಹೇಳುವುದಾದರೆ ಈ ೫ ಲಕ್ಷ...

SRI M. CHANDRASHEKAR.— You are comparing it with Bangalore.

SRI M. S. KRISHNAN.— I am not comparing it with Bangalore. Take city like Mysore, Hubli-Dharwar. Here, at least you have got this BDA. There are CITBs They are supposed to do their jobs. Unfortunately they are not doing thejob. That is why you have brought this Bill, I think. There should have been co-ordination with various other organisations and then you should have brought it has one authority. Ideas may come, along with idea, you must give them enough leeway to see that certain projects are implemented. ಬಹಳ ಕಷ್ಟವಾಗುತ್ತದೆ. ಸಣ್ಣ ಸಣ್ಣ ಕೆಲಸಗಳನ್ನು ಮಾಡುವುದಿಲ್ಲ. ೪-೫ ರೋಡುಗಳನ್ನು ಮಾಡಬೇಕಾದರೆ. ಟಾರ್ ಹಾಕಬೇಕಾದರೆ ಅಷ್ಟೊಂದು ದುಡ್ಡು ಖರ್ಚಾಗುತ್ತದೆ. ಅಥಾರಿಟಿ ಒನ್ಸ್ ಇನ್ ಎ ಮಂತ್ ಮೀಟಿಂಗ್ ಸೇರುತ್ತದೆ. ಅಷ್ಟರಲ್ಲಿ ನೋಟ್ ಹೋಗಬೇಕು, ಸೆಕ್ರೆಟರಿಗೆ ಹೋಗಬೇಕು, ಸಿ.ಇ., ಜೆ.ಇ., ಹೋಗಿ ನಂತರ ಕಮಿಷನರಿಗೆ ಹೋಗಿ ಬರಬೇಕು. ಮತ್ತೆ ಅದು ಹೋಗಿ ಬರುವಷ್ಟರಲ್ಲಿ ಅಥಾರಿಟಿ ಮೀಟಿಂಗ್ ಮುಗಿದುಹೋಗಿ ಬಿಟ್ಟಿರುತ್ತದೆ. ನಂತರ ಇನ್ನೊಂದು ೬ ತಿಂಗಳಾಗುತ್ತದೆ. ಹೀಗಾಗಿ ಏನು ನ್ಯಾಯ ದೊರಕಬೇಕೋ ಆ ನ್ಯಾಯ ಆದಷ್ಟು ಬೇಗ ದೊರೆಯುವುದಿಲ್ಲ. ಆ ದೃಷ್ಟಿಯಿಂದ ಇದನ್ನು ಜಾಸ್ತಿ ಮಾಡಬಹುದು, ಎಷ್ಟು ಜಾಸ್ತಿ ಮಾಡಬೇಕೋ ಮಾಡಿ ಅದನ್ನು ತಮಗೆ ಬಿಟ್ಟಿದ್ದೇವೆ ನಾಟ್ ಎಕ್ಸೀಡಿಂಗ್ ೨೫ ಲ್ಯಾಕ್ಸ್ ಅಂದರೆ ಅದರ ವಹಿವಾಟು ಕೋಟ್ಯಾಂತರ ರೂಪಾಯಿ ನಡೆಯುತ್ತಿದೆ. ಮೈಸೂರಿನಲ್ಲೂ ನಡೆಯುತ್ತಿದೆ. ೨೫ ಲ್ಯಾಕ್ಸ್ ಈಸ್ ನತಿಂಗ್ ಆದ್ದರಿಂದ ಅದನ್ನೂ ಕೂಡ ಜಾಸ್ತಿ ಮಾಡಬೇಕಾಗಿ ಬರುತ್ತದೆ. ನನ್ನ ಸಲಹೆ ಇದನ್ನು ವಾಸ್ತವವಾಗಿ ನೋಡಿ. Amount of work that has been done. ಎಂಬುದನ್ನು ನೋಡಿ ನನ್ನ ಅಭಿಪ್ರಾಯ ಏನೆಂದರೆ, I think this is alsobe increased. Otherwise it will not be able to really discharge itsfunction. ಆ ಮೇಲೆ ಪುನಃ ಮಾಡಬೇಕು ಅಂದರೆ, for everything we have to go to Government. ಮಾನ್ಯ ಚಂದ್ರಶೇಖರ್‌ರವರಿಗೆ ಗೊತ್ತಿದೆ. ಬೆಂಗಳೂರು ನಗರದಲ್ಲಿ ಒಂದು ಲೇಔಟ್ ಮಾಡುತ್ತಿದ್ದರು. ಬಾಣಸವಾಡಿ–ಹೆಣ್ಣೂರು ಲೇಔಟ್ ಒಂದು. ಬಿ.ಟಿ.ಎಂ. ಲೇಔಟ್ ಒಂದು ಬಿ.ಟಿ.ಎಂ.ಲೇಔಟ್‌ನಲ್ಲಿ ಏನು ತಕರಾರು ಬಂತು ಅಂದರೆ, ಟೋಟಲ್ ಎಸ್ಟಿಮೇಟ್ ವಾಸ್ ಸಂ ಫಿಗರ್.... We cannot do it now. We have got the sanction of the Government. Layout is beautiful. ಸ್ಯಾಂಕ್ಷನ್‌ಗೆ ಸರ್ಕಾರಕ್ಕೆ ಬಂತು. ಸರ್ಕಾರಕ್ಕೆ ಬಂದಿದ್ದು, ಒಂದೂವರೆ ವರ್ಷಗಳ ಕಾಲ ಮಂಜೂರಾಗಿ ಬರಲೇ ಇಲ್ಲ. ಸರ್ಕಾರದ ಒಪ್ಪಿಗೆ ಸಿಗಲಿಲ್ಲ. ಇದರ ಬಗ್ಗೆ ಛೇರ್ಮನ್ನರು, ಮತ್ತಿತರರು ಸರ್ಕಾರವನ್ನು ಕೇಳಿದ್ದು ಕೇಳಿದ್ದೆ, ಒತ್ತಡ ತಂದಿದ್ದು ತಂದಿದ್ದೆ. ಏನು ಮಾಡಿದರೂ ಸರ್ಕಾರದಿಂದ ಬರಲೇ ಇಲ್ಲ. ಕೊನೆಗೆ ಅದು ಬಂದಮೇಲೆ ಇಲ್ಲಿ ಎಸ್ಕಲೇಷನ್ ರೇಟ್ ಜಾಸ್ತಿಯಾಗಿದ್ದರಿಂದ,

ಕಂಟ್ರಾಕ್ಟುದಾರರು ಹಳೇ ರೇಟಿನಲ್ಲಿ ಮಾಡುವುದಕ್ಕಾಗುವುದಿಲ್ಲ, ಎಸ್.ಆರ್.ರೇಟ್ ಬದಲಾವಣೆ ಮಾಡಬೇಕು ಎಂದು ಹೇಳಿದಮೇಲೆ, ಅದನ್ನು ಬದಲಾವಣೆ ಮಾಡಿ ಮತ್ತೆ ಸರ್ಕಾರದ ಮಂಜೂರಾತಿಗಾಗಿ ಕಳುಹಿಸಲಾಯಿತು. ಅಲ್ಲಿಂದ ಒಪ್ಪಿಗೆಯಾಗಿ ಬರುವಷ್ಟರಲ್ಲಿ ಮತ್ತೆ ಕಾಸ್ಟ್ ಜಾಸ್ತಿಯಾಯಿತು. ಕೊನೆಗೆ ಇದು ಜನಗಳ ಮೇಲೆ ಬಿತ್ತು. ಈ ರೀತಿಯಾಗಬಾರದು. ಹೆಚ್ಚಿನ ಹಣವನ್ನು ಮಂಜೂರು ಮಾಡುವಂಥ ಅಧಿಕಾರವನ್ನು ಅರ್ಬನ್ ಅಥಾರಿಟಿಗೆ ವಹಿಸಿಕೊಡಬೇಕು. ಇಲ್ಲದೇ ಇದ್ದರೆ, ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಕಷ್ಟವಾಗುತ್ತದೆ ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ೧೬ನೇ ಪುಟ, ಕ್ಲಾಸ್ ೨೦ರಲ್ಲಿ ಬೆಟರ್‌ಮೆಂಟ್ ಟ್ಯಾಕ್ಸ್ ಬಗ್ಗೆ ಹೇಳಿದ್ದೀರಿ.

> LEVY OF BETTERMENT TAX (1) Where as a consequence of execution of any development scheme, the market value of any land in the area comprised in the scheme which is not required for the execution thereof has in the opinion of the Authority, increased or will increase, the Authority shall be entitled to levy on the owner of the land or any person having an interest there in a betterment tax in respect of the increase in value of the land resulting from the execution of such scheme.
>
> (2) Such increase in value shall be the amount by which the value of the land, on the completion of the scheme estimated as if the land were clear of buildings exceeds the value of the land prior to the execution of the scheme estimated in like manner, and the betterment tax shall be one-third of such increase in value:"

ನಾನು ಅರ್ಥ ಮಾಡಿಕೊಂಡಿರುವ ಮಟ್ಟಿಗೆ ಲೇಔಟ್ ಮಾಡದೇ ಇದ್ದರೆ ಒಂದೊಂದು ಸೈಟಿಗೆ ೫ ರೂಪಾಯಿ ಆಗಬಹುದು. ಇದು ಪರ್ ಸ್ಕ್ವೇರ್ ೫ ರೂಪಾಯಿ ಆಗಬಹುದು, ಲೇಔಟ್ ಮಾಡಿದ ಮೇಲೆ ೨೦ ರಿಂದ ೨೫ ಸಾವಿರ ರೂಪಾಯಿವರೆಗೆ ಹೋಗುತ್ತದೆ. ಇದರಲ್ಲಿ ಮೂರನೇ ಒಂದು ಭಾಗ ಎಂದು ತಾವು ಹೇಳುತ್ತೀರಿ. ಈ ರೀತಿ ಮಾಡಿರುವುದರಿಂದ ಇವತ್ತು ಬೆಂಗಳೂರುನಗರದಲ್ಲಿ ನಿವೇಶನಗಳ ಬೆಲೆ ಗಗನಕ್ಕೇರಿದೆ. ಮೊನ್ನೆ ನಾನು ಈ ವಿಚಾರದಲ್ಲಿ ಪ್ರಶ್ನೆ ಕೇಳಿದ್ದೆ, ಅದನ್ನು ಅನ್ ಸ್ಟಾರ್ಡ್ ಮಾಡಿ, ಉತ್ತರ ತೆಗೆದುಕೊಂಡು ಬಂದರು. ೬೫ ರಿಂದ ೮೫ರವರೆಗೆ ಏನು ರೇಟ್ಸ್ ಇತ್ತು ಎಂದು ಕೇಳಿದ್ದೆ,

ಈಗ ಇದರಲ್ಲಿ ಬೆಟರ್‌ಮೆಂಟ್ ಟ್ಯಾಕ್ಸ್ ಫಿಕ್ಸ್ ಮಾಡುವಾಗ ಏನು ಮಾಡಿದ್ದಾರೆ ಎಂದರೆ, ಸದಾಶಿವನಗರದ್ದು ಹೇಳುತ್ತೇನೆ. ೬೦ × ೯೦ ಮತ್ತು ೫೦ × ೮೦ ಸೈಟುಗಳನ್ನು ಮಾಡಿದ್ದಾರೆ. ಅವುಗಳಿಗೇ ಒಂದು ರೀತಿ. ಅದರ ಬಗ್ಗೆ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಇವೊತ್ತು ಎಕನಾಮಿಕಲಿ ವೀಕರ್ ಸೆಕ್ಷನ್‌ಗೆ ಮಾಡುತ್ತಾರೆ, ಲೋ ಇನ್‌ಕಮ್ ಗ್ರೂಪಿಗೆ ಮಾಡುತ್ತಾರೆ, ಮಿಡಲ್ ಇನ್‌ಕಮ್ ಗ್ರೂಪಿಗೆ ಮಾಡುತ್ತಾರೆ, ಅಲ್ಲಿ ಡಿಫರೆನ್ಶಿಯಲ್ ರೇಟ್ ಮಾಡಬೇಕಾಗಿ ಬರುತ್ತದೆ. ಈಗ ಬೆಂಗಳೂರಿನಲ್ಲಿ ನಿವೇಶನಗಳ ಬೆಲೆ ಬಹಳ ದುಬಾರಿಯಾಗಿದೆ. ೪೦ × ೬೦ ಅಡಿ ಸೈಟುಗಳ ಬೆಲೆ ಸುಮಾರು ೫೫ ಸಾವಿರ ರೂಪಾಯಿ ಆಗಿದೆ. ಒಂದು ಕಾಲಕ್ಕೆ ಈ ಅಳತೆಯ ನಿವೇಶನದ ಬೆಲೆ ೮ ಸಾವಿರ ರೂಪಾಯಿ ಇತ್ತು. ಇವೊತ್ತು ಸುಮಾರು ಹತ್ತರಿಂದ ಹದಿನೈದು ಪಟ್ಟು ಬೆಲೆ ಜಾಸ್ತಿಯಾಗಿದೆ. You may say the cost of materials has gone up. The cost of so many other things has gone up, naturally you will have to bear. That burden has to be put not upon the people.

(ಅಧ್ಯಕ್ಷರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ಮಾನ್ಯ ಸದಸ್ಯರು ಬೇಗ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೆ, ತಾವು ಈ ರೀತಿ ಹೇಳಿದರೆ, ನಾನು ಏನು ಮಾತನಾಡಲಿಕ್ಕೂ ಇಷ್ಟಪಡುವುದಿಲ್ಲ.

ಅಧ್ಯಕ್ಷರು.— ತಾವು ಎರಡು ದಿವಸ ಬೇಕಾದರೂ ಮಾತನಾಡುತ್ತೀರಿ, ಅದು ನನಗೆ ಗೊತ್ತಿದೆ, ದಯಮಾಡಿ ತಮಗೆ ಎಷ್ಟು ಸಮಯ ಬೇಕು ಎಂದು ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೇ, ಬಿಲ್ಲಿನ ಮೇಲೆ ಮಾತನಾಡುವಾಗ ಸಮಯ ನಿಗದಿ ಮಾಡಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು.— ನಾನು ಎಲ್ಲಾ ಸದಸ್ಯರಿಗೂ ಸಮಯ ಕೊಡಬೇಕಾಗುತ್ತದೆ. ಅಲ್ಲದೆ, ಮಧ್ಯಾಹ್ನ ಬೇರೆ ಇಂಪಾರ್‌ಟೆಂಟ್ ಸಬ್ಜೆಕ್ಟ್ ಇದೆ.

ಶ್ರೀ ಎಸ್. ಬಂಗಾರಪ್ಪ.— ಇದು ಇಂಪಾರ್‌ಟೆಂಟ್ ಅಲ್ಲವೋ ?

ಅಧ್ಯಕ್ಷರು.— ಎಲ್ಲವೂ ಇಂಪಾರ್‌ಟೆಂಟೇ, ಸಮಯಕ್ಕೆ ಸರಿಯಾಗಿ ಮುಗಿಸಬೇಕಲ್ಲವೇ ? ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಆದಷ್ಟು ಬೇಗ ಮುಗಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೆ, ಈ ತರಹ ಆದರೆ ನಮ್ಮ ಟ್ರೆಂಡೇ ಹೊರಟು ಹೋಗುತ್ತದೆ. ಬೆಟರ್‌ಮೆಂಟ್ ಚಾರ್ಜ್‌ನ ಬಗ್ಗೆ ಹೇಳಬೇಕೆಂದರೆ ಸೆಕ್ಷನ್ ೨೭ರಲ್ಲಿ ಅದನ್ನು ಸ್ವಲ್ಪ ಮೋರ್ ಫ್ಲೆಕ್ಸಿಬಲ್ ಆಗಿ ಮಾಡಬೇಕು. ಕೆಲವರಿಗೆ ಸಾಮಾಜಿಕ ನ್ಯಾಯ ದೊರೆಯಬಹುದು ಅಥವಾ ದೊರೆಯದೇ ಇರಬಹುದು. ಸಾಮಾಜಿಕ ನ್ಯಾಯ ದೊರೆಯಬೇಕೆಂದರೆ ಬಡವರಿಗೆ ಸ್ವಲ್ಪಮಟ್ಟಿಗೆ ಕಡಿಮೆ ಬೆಲೆಯಲ್ಲಿ ಸೈಟು ಕೊಡಬೇಕಾಗುತ್ತದೆ. ಜಾಸ್ತಿ ಕೊಡುವವರು ಜಾಸ್ತಿ ಕೊಡಲಿ ತಾವು ಆ ಆಧಾರದ ಮೇಲೆ ಮಾಡಿ. ತಾವು ಅದರ ಬಗ್ಗೆ ಯಾವರೀತಿ ಮಾಡಬೇಕೆಂದು ಯೋಚನೆ ಮಾಡಿ ಮಾಡಬೇಕಾಗುತ್ತದೆ. ಈಗ ಮುಖ್ಯವಾದ ಪ್ರಶ್ನೆ ಅಂದರೆ ಕ್ಲಾಸ್ ನಂ. ೩೦ ರಲ್ಲಿ ಏನು ಹೇಳುತ್ತಾರೆ ಅಂದರೆ;

> "30. Streets on completion to vest in and be maintained by the local authority:— (1) The Government after consulting the local authority concerned and on being satisfied that any street formed by the Authority has been duly levelled, paved, metalled, flagged, channeled drained and sewered in the manner provided for in the plans of any scheme sanctioned by the Government and that such lamps, lamp posts and other apparatus as are in its opinion necessary for the lighting thereof and should be provided by the Authority have been so provided, shall declare such street to be a public street, and such street shall threupon vest or revest as the case may be, in the local authority and the local authority shall thereafter maintain, keep in repair light and cleanse such street."

ನಾನು ಏನು ಹೇಳುತ್ತಿದ್ದೇನೆಂದರೆ, ಅರ್ಬನ್ ಅಥಾರಿಟಿಯವರೇ ಮೊದಲು ರೋಡು, ನೀರು, ಲೈಟು, ಒಳಚರಂಡಿ ವ್ಯವಸ್ಥೆ, ಟಾರ್ ಹಾಕತಕ್ಕದ್ದು, ಹೀಗೆ ಎಲ್ಲಾ ಕೆಲಸಗಳನ್ನೂ ಮಾಡಿಕೊಡಬೇಕು. ಹಾಗೆ ಮಾಡಿಕೊಟ್ಟರೆ ಜನರಿಗೆ ಏನೂ ತೊಂದರೆಯಾಗುವುದಿಲ್ಲ. ನಾನು ಬೇರೆ ಯಾವ ಉದ್ದೇಶದಿಂದಲೂ ಈ ವಿಚಾರವನ್ನು ಮಾತನಾಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಿನಲ್ಲಿ ಬಿ.ಡಿ.ಎ. ಇದೆ. ಕಾರ್ಪೊರೇಷನ್‌ನವರು ಮಾಡತಕ್ಕ ಕೆಲಸವನ್ನೇ ಬಿ.ಡಿ.ಎ ನವರೂ ಮಾಡಬೇಕು. ಇಬ್ಬರದೂ ಒಂದೇ ರೀತಿಯ ಕೆಲಸ. ಆದರೆ ಇವರು ಅದನ್ನು ಮಾಡುತ್ತಿಲ್ಲ. ನಾನು ರಾಜಾಜಿನಗರವನ್ನು ಪ್ರತಿನಿಧಿಸತಕ್ಕವನು. ನನ್ನ ಕ್ಷೇತ್ರದಲ್ಲೂ ಕೆಲವು ಬಿ.ಡಿ.ಎ ಪ್ರದೇಶಗಳಿವೆ. ಅಲ್ಲಿ ಏನು ವಿಚಿತ್ರ ಇದೆಯೆಂದರೆ, ಒಳಚರಂಡಿ ವ್ಯವಸ್ಥೆ ಇದ್ದರೆ ನೀರಿಲ್ಲ, ನೀರಿದ್ದರೆ ಒಳಚರಂಡಿ ವ್ಯವಸ್ಥೆ ಇಲ್ಲ, ಎರಡೂ ಇದ್ದರೆ ಲೈಟ್ ಇರುವುದಿಲ್ಲ, ಟಾರ್ ಹಾಕಿಲ್ಲ. ಏನು ನೀವು ಇದನ್ನೆಲ್ಲಾ ಏತಕ್ಕೆ ಮಾಡುತ್ತಿಲ್ಲ ಎಂದು

ನಾವು ಕೇಳಿದರೆ ನಮ್ಮಲ್ಲಿ ಇದಕ್ಕೆ ಹಣ ಇಲ್ಲ ಎಂದು ಹೇಳುತ್ತಾರೆ. ಸ್ವಾಮಿ ಅವರಲ್ಲಿ ಹಣ ಇಲ್ಲ ಎಂದರೆ ಯಾರೂ ನಂಬುವುದಿಲ್ಲ. ಅಲ್ಲಿ ಅಂದರೆ ಬೆಂಗಳೂರು ಪ್ರಾಧಿಕಾರದಲ್ಲಿ ಕೋಟ್ಯಾಂತರ ರೂಪಾಯಿಯ ವ್ಯವಹಾರ ನಡೆಯುತ್ತಿರುತ್ತದೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಏಕೆಂದರೆ ಅವರು ನಿವೇಶನಗಳಿಗೆ ಅರ್ಜಿಗಳನ್ನು ಕರೆದರೆ, ಅರ್ಜಿ ತೆಗೆದುಕೊಳ್ಳುವುದಕ್ಕೆ ದುಡ್ಡು ಮೊದಲು ಹೆಸರನ್ನು ರಿಜಿಸ್ಟ್ರೇಷನ್ ಮಾಡಿಸಬೇಕಾದರೆ ದುಡ್ಡು (ಒಬ್ಬೊಬ್ಬರಿಗೆ 100 ರೂ. ಪ್ರಕಾರ), ಆಮೇಲೆ ಇನಿಷಿಯಲ್ ಡಿಫಾಸಿಟ್ 1000, 2000, 3,000 ರೂಪಾಯಿ ಹೀಗೆ ಕಟ್ಟಬೇಕು. ಸಾವಿರಾರು ಸೈಟುಗಳಿಗೆ ಹಣ ಕಟ್ಟಲು ಜನರು ಕ್ಯೂ ನಿಂತಿರುತ್ತಾರೆ. ಈ ಬಾಬಿನಿಂದಲೇ ಬೆಂಗಳೂರು ಪ್ರಾಧಿಕಾರದ ವರಿಗೆ ಕೋಟ್ಯಾಂತರ ರೂಪಾಯಿ ಬರುತ್ತದೆ. ಆದರೆ ನಮ್ಮ ದುರಾದೃಷ್ಟವೋ ಏನೋ, ಕೇಳಿದರೆ ನಮ್ಮಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ. ಸುಮಾರು 10-12 ವರ್ಷ ನಮ್ಮ ಕಡೆ ಏನೇನೂ ಇಂಪ್ರೂ ಮೆಂಟೇ ಆಗಿಲ್ಲ. ಎಲ್ಲಾ ಹಾಗೆಯೇ ಇದೆ. ಕಾರ್ಪೊರೇಷನ್‌ನವರು ಏನು ಹೇಳುತ್ತಾರೆಂದರೆ ಇದನ್ನೆಲ್ಲಾ ಸರಿಯಾಗಿ ಮಾಡಿಕೊಡಿ ಎಂದು ಹೇಳುತ್ತಾರೆ. ಇವರನ್ನು ಕೇಳಿದರೆ ನಮ್ಮ ಹತ್ತಿರ ದುಡ್ಡಿಲ್ಲ, ನಾಳೆ, ನಾಡಿದ್ದು ನೋಡೋಣ ಎಂದು ಹೇಳುತ್ತಾರೆ. ಒಳಚರಂಡಿ ವ್ಯವಸ್ಥೆ, ನೀರು, ಲೈಟು, ವ್ಯವಸ್ಥೆ ಮಾಡಿಕೊಟ್ಟರೆ ಸಾಕು. ಕೊನೆಗೆ ಟಾರ್ ಇಲ್ಲದಿದ್ದರೂ ಪರವಾಗಿಲ್ಲ. ಇದಕ್ಕೆಲ್ಲಾ ಎಷ್ಟು ದುಡ್ಡು ಬೇಕೋ ಅಷ್ಟನ್ನೂ ನೀವು ಲೋಕಲ್ ಅಥಾರಿಟಿಯವರಿಂದ ವಸೂಲ್ಮಾಡಿಕೊಳ್ಳಿ. ಇಲ್ಲಿ ಇನ್ನೊಂದು ಏನಾಗುತ್ತದೆ ಎಂದರೆ ಈ ಕೆಲಸಗಳನ್ನೆಲ್ಲಾ ಮಾಡಲು ಕಾರ್ಪೊರೇಷನ್‌ನಲ್ಲಿ ಸಾಕಷ್ಟು ಸಿಬ್ಬಂದಿ ಇದೆ, ಆದರೆ ಈ ಕೆಲಸಗಳನ್ನೆಲ್ಲಾ ಅರ್ಬನ್ ಅಥಾರಿಟಿಯವರಿಗೆ ವಹಿಸಿದರೆ ಈ ಕೆಲಸ ಕುಂಠಿತವಾಗುತ್ತದೆ. ಅನವಶ್ಯಕವಾದ ವಿವಾದಗಳು ಜಾಸ್ತಿಯಾಗುತ್ತದೆ, ಅದರಿಂದ ಜನರಿಗೆ ತೊಂದರೆಯಾಗುತ್ತದೆ. ಕಾರ್ಪೊರೇಷನ್‌ನಲ್ಲಿ ಜೂನಿಯರ್ ಇಂಜಿನಿಯರ್‌ಗಳಿದ್ದಾರೆ, ಅಸಿಸ್ಟೆಂಟ್ ಇಂಜಿನಿಯರ್ಸ್ ಇದ್ದಾರೆ, ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಇದ್ದಾರೆ, ಚೀಫ್ ಇಂಜಿನಿಯರ್ಸ್ ಇದ್ದಾರೆ. ಹೀಗೆ ಅವರ ಹತ್ತಿರ ಇಂಜನಿಯರ್‌ಗಳ ಒಂದು ದೊಡ್ಡ ಸಿಬ್ಬಂದಿಯೇ ಇದೆ. ನೀವು ಹೇಳಿರತಕ್ಕ ರೀತಿಯಲ್ಲಿ ಲೆವೆಲ್ಸ್, ಪೇವ್ಡ್, ಚಾನಲ್ಡ್, ಮೆಟಲ್ಡ್, ಫ್ಲ್ಯಾಗ್ಡ್, ಇಂಥ ಮಿನಿಮಂ ಫೆಸಿಲಿಟೀಸ್ ಆದರೂ ಕೊಡಿ. ಮದುವೆಗೆ ಹೋಗತಕ್ಕ ಹುಡುಗಿಗೆ ಶೃಂಗಾರ ಮಾಡಿ ಕಳಿಸುವಂತೆಯಾದರೂ ನೀವು ಮಾಡಬೇಡವೇ ? ನೀವು ಪ್ರಾಕ್ಟಿಕಲ್ ಆಗಿರಿ. ನಾನು ಈಗಾಗಲೇ ಹೇಳಿದಂತೆ ಲೈಟು, ನೀರು, ಒಳಚರಂಡಿ ವ್ಯವಸ್ಥೆ ಇಂಥಾದ್ದನ್ನೆಲ್ಲಾ ಕೊಡಿ. ಟಾರ್ ಹಾಕದಿದ್ದರೂ ಪರವಾಗಿಲ್ಲ. ಸಾಮಾನ್ಯವಾಗಿ ನೀರಂತೂ ಇರಲೇ ಬೇಕು, ಇದನ್ನೆಲ್ಲಾ ತಾವು ಗಮನದಲ್ಲಿಟ್ಟುಕೊಂಡು ಇದಕ್ಕೆ ಸರಿಯಾದ ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ ಎಂದು ಕೇಳಿಕೊಳ್ಳುತ್ತೇನೆ.

ತಾವು ಸೆಕ್ಷನ್ 31ನ್ನು ನೋಡಿ.

> "Authority not to sell or otherwise dispose of sites in certain cases:- The Authority shall not sell or otherwise dispose of any sites for the purpose of constructing buildings thereon for the accomodation of persons until all the improvements specified in section 30 have been substantially provided for in the estimates."

ಸಬ್ ಸ್ಟ್ಯಾನ್‌ಷಿಯಲ್ಲಿ ಪ್ರೊವೈಡ್ ಮಾಡಬೇಕೆಂದು ಹೇಳಿದ್ದೀರಿ. ಇದೊಂದು ಸೇವಿಂಗ್ ಕ್ಲಾಸ್ ಇದೆ. ಇದನ್ನು ಒಪ್ಪಿಕೊಳ್ಳಬಹುದು. ಇದೆಲ್ಲಾ ಇಲ್ಲದಿದ್ದರೆ ನಿಮಗೆ ತೊಂದರೆಯಾಗುತ್ತಿತ್ತು.

ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಹೆಚ್ಚಿನ ವಿವರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗದೆ ಇಷ್ಟು ಮಾತ್ರ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದೇನೆಂದರೆ, ನಾನು ಇದುವರೆಗೆ 2-3 ವಿಚಾರಗಳನ್ನು ತಮ್ಮ ಗಮನಕ್ಕೆ ಏನು ತಂದಿದ್ದೇನೆ ಇವುಗಳು ಕಾರ್ಯಗತವಾಗುವಂತೆ ನೋಡಿಕೊಳ್ಳಬೇಕು.

ಮಾನ್ಯ ಅಧ್ಯಕ್ಷರೆ, ಇನ್ನು ಕೊನೆಯದಾಗಿ ಒಂದು ಮಾತನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾದ್ದು ಎಂದರೆ ಆಫೀಸ್ ಎಂಪ್ಲಾಯೀಸ್ ವಿಚಾರ. ಈ ಎಂಪ್ಲಾಯೀಸ್ ಯಾರಿದ್ದಾರೆ ಇವರು ಬಹಳ ವರ್ಷಗಳಿಂದದೂ ಪರ್ಮನೆಂಟ್ ಆಗಿ ಕಾಂಟ್ರ್ಯಾಕ್ಟ್ ಆಧಾರದ ಮೇಲೆಯೇ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಕಾಂಟ್ರ್ಯಾಕ್ಟ್ ವರ್ಕರ್ಸ್ ಮತ್ತು ಕ್ಯಾಷುಯಲ್ ವರ್ಕರ್ಸ್ ಎಂದು ಇದ್ದಾರೆ. ಸುಮಾರು 3-4 ವರ್ಷಗಳಿಂದ ಇವರು ಬೆಂಗಳೂರಿನಲ್ಲಿದ್ದಾರೆ. ಇಂಜಿನಿಯರ್‌ಗಳನ್ನು

ಕಾಂಟ್ರ್ಯಾಕ್ಟ್ ಆಧಾರದಮೇಲೆ ತೆಗೆದುಕೊಳ್ಳುತ್ತಾರೆ, ಡಿಪ್ಲೊಮಾ ಹೋಲ್ಡರ್‌ಗಳನ್ನು ಕಾಂಟ್ರ್ಯಾಕ್ಟ್ ಆಧಾರದಮೇಲೆ ತೆಗೆದುಕೊಳ್ಳುತ್ತಾರೆ. ಯಾರಾದರೂ ಬಂದು ಏನಪ್ಪಾ ನಿನಗೆ ಸಂಬಳ ಎಷ್ಟು ಎಂದು ಕೇಳಿದರೆ ನನಗೆ ಒಂದು ದಿವಸಕ್ಕೆ 20 ರೂಪಾಯಿ ಕೊಡುತ್ತಾರೆ ಅಂತ ಹೇಳುತ್ತಾರೆ. ಈ ಪದ್ಧತಿ ಅಲ್ಲಿ ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಈ ಪದ್ಧತಿಯನ್ನು ರದ್ದುಮಾಡಿ ಅವರನ್ನು ಪರ್ಮನೆಂಟ್ ಮಾಡಿ ಎಂದು ಅನೇಕ ಸಾರಿ ಹೇಳಿದ್ದೇವೆ. ಅವರೂ ಕೂಡ ಒಂದು ಅಸೋಸಿಯೇಷನ್‌ನ್ನು ಮಾಡಿಕೊಂಡು ಕೆಲವುಸಾರಿ ಅಜಿಟೇಷನ್ ಕೂಡ ಮಾಡಿದ್ದಾರೆ. ಹಿಂದೆ ಮಾನ್ಯ ಲಕ್ಷ್ಮೀಸಾಗರ್‌ರವರು ಪೌರಾಡಳಿತ ಮಂತ್ರಿಗಳಾಗಿದ್ದಾಗ ಇವರ ಹತ್ತಿರವೂ ಕೂಡ ಅವರು ಬಂದಿದ್ದರು. ಆದರೂ ಅವರಿಗೆ ಯಾವುದೇ ರೀತಿಯಲ್ಲೂ ಮೋಕ್ಷ ಸಿಕ್ಕಲಿಲ್ಲ.

ನೀವು ಮತ್ತೆ ಅವರು ಇಲ್ಲಿಗೆ ಬರದಂತೆ ಮಾಡಿ, ಕ್ಯಾಟಗರಿ ಮಾಡಿ, ರಿಕ್ರೂಟ್‌ಮೆಂಟ್ ರೂಲ್ಸ್‌ಮಾಡಿ. ರೂಲ್ಸ್‌ನ್ನೆಲ್ಲಾ ವಯಲೇಟ್ ಮಾಡಿ ಇಂಜಿನಿಯರ್ಸ್ ಕ್ಯಾಷುಯಲ್ ಅಕೌಂಟ್ಸ್ ಕ್ಯಾಷ್ಯುಯಲ್ ಎಲ್ಲಾ ಕ್ಯಾಷುಯಲ್ ಆದರೆ ಅಥಾರಟಿ ಮಾತ್ರ ಪರ್ಮನೆಂಟ್, ಲೆಜಿಸ್ಲೇಟೀವ್ ಮೆಂಬರ್ಸ್ ಪರ್ಮನೆಂಟ್, ಬೇರೆ ಎಲ್ಲರೂ ಕ್ಯಾಷುಯಲ್ ಈ ರೀತಿ ನಡೆಯುತ್ತಿರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಇದನ್ನು ಸರಿಯಾದ ದಾರಿಗೆ ತರಬೇಕೆಂದು ಬಹಳ ಕಳಕಳಿಯಿಂದ ಹೇಳಿ ಮೂಲಭೂತವಾಗಿ ನೀವು ಮಾಡಿರುವಂಥದ್ದಕ್ಕೆ ಇಷ್ಟು ಮಾತ್ರ ಸೂಚನೆಯನ್ನು ಕೊಟ್ಟು ಅದನ್ನು ತಾವು ಒಪ್ಪಿಕೊಳ್ಳುತ್ತೀರೆಂದು ನಂಬಿ ತಮಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಸಚಿವರು ಈ ಸದನದಲ್ಲಿ ತಂದಿರತಕ್ಕಂಥ ಈ ಒಂದು ಮಸೂದೆಯನ್ನು ನಾನು ವಿರೋಧಿಸಿ ಮಾತನಾಡುವುದಕ್ಕೆ ನಿಂತಿದ್ದೇನೆ. ಸ್ಟೇಟ್‌ಮೆಂಟ್ ಅಬ್ಜೆಕ್ಟ್ ಅಂಡ್ ರೀಸನ್ಸ್‌ನಲ್ಲಿ ಟೌನ್ ಪ್ಲಾನಿಂಗ್ ಅಥಾರಿಟಿ ಮತ್ತು ಡೆವಲಪ್‌ಮೆಂಟ್ ಅಥಾರಿಟಿ ಇವೆರಡನ್ನೂ ಸಿಂಗಲ್ ಏಜೆನ್ಸಿಯ ಕೆಳಗೆ ತರಬೇಕು ಎನ್ನುವ ಸದುದ್ದೇಶದಿಂದ ಈ ಒಂದು ಮಸೂದೆಯನ್ನು ತಂದಿದ್ದೇವೆ ಇದನ್ನು ಒಪ್ಪಿಕೊಳ್ಳಬೇಕೆಂಬ ಅಭಿಪ್ರಾಯವನ್ನು ತಿಳಿಸಿದ್ದೀರಿ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರಕ್ಕೆ ಸಂಬಧಪಟ್ಟ ಹಾಗೆ ಮೆಟ್ರೋಪಾಲಿಟನ್ ಸಿಟಿ, ಇದನ್ನು ಬಿಟ್ಟು ದೊಡ್ಡ ದೊಡ್ಡ ಕಾರ್ಪೊರೇಷನ್ ಏರಿಯಾದಲ್ಲಿ ಬರತಕ್ಕಂಥ ಎಲ್ಲವೂ ಬರುತ್ತದೆ. ಇದರಲ್ಲಿ ಎಂದು ತಿಳಿದುಕೊಂಡಿದ್ದೇನೆ. ಆದರೆ ಬೆಂಗಳೂರು ಸಿಟಿ ಬಿಟ್ಟುಬಿಟ್ಟರೆ ಕರ್ನಾಟಕದ ರೆಸ್ಟ್ ಆಫ್ ದಿ ಸಿಟಿ ಪೂರ್ತಿ ಈ ಮಸೂದೆಯೊಳಗೆ ಬರುತ್ತದೆ. ಈ ಟೌನ್ ಪ್ಲಾನಿಂಗ್ ಅಥಾರಿಟಿ ಇದನ್ನೆಲ್ಲಾ ನಾವು ಕೆಲವು ನಗರಗಳಲ್ಲಿ ನೋಡಿದ್ದೇವೆ. ಶಿವಮೊಗ್ಗದಲ್ಲಿ ನೋಡಿದ್ದೇವೆ, ಮಂಗಳೂರು. ಮೈಸೂರಿನಲ್ಲಿಯೂ ನೋಡಿದ್ದೇವೆ. ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗಾ, ಬೆಳಗಾಂ, ಬಿಜಾಪುರ, ಬಳ್ಳಾರಿ ಇವೇ ಮೊದಲಾದ ನಗರಗಳಲ್ಲಿ ಅಂದರೆ ಆಲ್ ಓವರ್‌ದಿ ಸಿಟಿ ಎಲ್ಲಿ ಇದೆ ಅಲ್ಲೆಲ್ಲಾ ಈ ರೀತಿಯಾಗಿರತಕ್ಕಂಥ ಟೌನ್ ಪ್ಲಾನಿಂಗ್ ಅಥಾರಿಟಿಯನ್ನು ನೋಡುತ್ತಾ ಬಂದಿದ್ದೇವೆ. ಇವರು ಸುಮಾರು ಕಾಂಪ್ರೆಹೆನ್ಸೀವ್ ಲಾಸ್ ಮಾಡಬೇಕು ಎನ್ನುವ ಉದ್ದೇಶದಿಂದ ವಿವರವಾಗಿ ಹೋಗುವಂಥ ಪ್ರಯತ್ನ ಕೂಡ ಇದರಲ್ಲಿ ಮಾಡಿದ್ದಾರೆ. ಮಾನ್ಯ ಸದಸ್ಯರಾಗಿರತಕ್ಕಂಥ ಎಂ. ಎಸ್. ಕೃಷ್ಣನ್‌ರವರು ಬಹಳ ವಿವರವಾಗಿ ಪ್ರಮುಖವಾಗಿ ಇರತಕ್ಕಂಥ ಅಂಶಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಇನ್ನೂ ಕೆಲವೊಂದನ್ನು ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿದ್ದರೂ ಅಷ್ಟೊಂದು ವಿವರಗಳಿಗೆ ಹೋಗದೆ ಈ ಒಂದು ಚೌಕಟ್ಟಿನಲ್ಲಿ ಬರತಕ್ಕಂಥವುಗಳನ್ನು ಮಾತ್ರ ಹೇಳಿಗುತ್ತಾರೆ. ಸಮಯದ ಅಭಾವದಿಂದ ಎಲ್ಲವನ್ನೂ ಕೂಡ ಮಾತನಾಡುವುದಕ್ಕಾಗುವುದಿಲ್ಲವೆಂದು ಅವರು ಕೆಲವು ವಿಚಾರಗಳನ್ನು ಮಾತ್ರ ತಿಳಿಸಿದ್ದಾರೆ.

ಸನ್ಮಾನ್ಯ ಅಧ್ಯಕ್ಷರೇ, ಸುಮಾರು ಯಾವುದೊ ಒಂದು ಅಥಾರಿಟಿಯನ್ನು ರಚನೆ ಮಾಡಬೇಕೆಂದರೆ, ಸಹಜವಾಗಿ ಅದಕ್ಕೆ ಒಂದು ಸಮಿತಿ ಎಂದು ಕರೆಯುತ್ತೇವೆ. ಅದರ ರಚನೆಯಾದ ಮೇಲೆ ಅದಕ್ಕೆ ಒಬ್ಬ ಅಧ್ಯಕ್ಷರು, ಸೆಕ್ರೆಟರಿ, ಮೆಂಬರ್ ಸೆಕ್ರೆಟರಿ ಎಂದು ಇರಬೇಕು. ಮೆಂಬರ್ ಅಂದರೆ ಅಫಿಷಿಯಲ್ ನಾನ್‌ಅಫಿಷಿಯಲ್ ಎರಡನ್ನೂ ಕೂಡ ನಾವು ಈವತ್ತಿನ ದಿವಸ ಕಾಣುತ್ತಿದ್ದೇವೆ.

ಸರ್ಕಾರ ಅಧಿಕಾರದಲ್ಲಿದ್ದಾಗ ನಾಮಿನೇಷನ್‌ಗೆ ಅವಕಾಶ ಇಟ್ಟುಕೊಂಡಿರುತ್ತದೆಂಬುದನ್ನು ನಾನು ಒಪ್ಪುತ್ತೇನೆ. ನಮ್ಮ ಸರ್ಕಾರ ಇದ್ದಾಗಲೂ ನಾಮಿನೇಷನ್ ಪದ್ಧತಿ ಇತ್ತು. ಆದರೆ ನಮ್ಮ ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಾಗ ನೀವು ಈ ಕಡೆ ಕುಳಿತು ಏನೇನು ಮಾತುಗಳನ್ನು ಹೇಳಿದ್ದೀರಿ ಎಂದರೆ ನಾಮಕರಣ ಮಾಡತಕ್ಕದ್ದು ನಿಜವಾಗಿಯೂ ಅನ್ಯಾಯದ ಪರಮಾವಧಿ ಎಂಬ

ಅಭಿಪ್ರಾಯ ಹೇಳಿದ್ದೀರಿ. ಆ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾದ ಸಂದರ್ಭ ಈಗ ಬಂದಿದೆ. ನೀವು ಯಾವುದೇ ಬಾಡಿ ರಚನೆ ಮಾಡಿದರೂ ಅಲ್ಲಿ ನಾಮಕರಣಕ್ಕೆ ಹೆಚ್ಚಿಗೆ ಅವಕಾಶ ಇಟ್ಟುಕೊಂಡಿದ್ದೀರಿ. ನಿಮ್ಮ ಕಾಲದಲ್ಲಿ ಆದಷ್ಟು ನಾಮಕರಣ ಯಾರ ಕಾಲದಲ್ಲೂ ಆಗಿಲ್ಲವೆಂದು ಹೇಳಬಹುದು. ಸೂಕ್ಷ್ಮವಾಗಿ ಪ್ರಸ್ತಾಪಿಸಬೇಕಾದರೆ, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ಮಾಡಿ ಅಲ್ಲಿಗೆ ನಾಮಕರಣ ಮಾಡಿದ್ದು ಅನ್ಯಾಯದ ಪರಮಾವಧಿ ಎಂದು ಹೇಳುತ್ತೇನೆ. ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಇದಕ್ಕಿಂತ ಬೇರೆ ಅನ್ಯಾಯ ಯಾವುದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಸಿಟಿ ಮುನಿಸಿಪಾಲಿಟಿ ಏರಿಯಾಗಳಲ್ಲಿ ನಾಮಕರಣ ಮಾಡಬೇಕಾದರೆ ಒಳ್ಳೆಯ ಸದಸ್ಯರಿದ್ದು ಅವರು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ವಿಶೇಷ ಆಸಕ್ತಿ ತೋರುವವರಾಗಿದ್ದರೆ ಆ ಏರಿಯಕ್ಕೆ ಅವರನ್ನು ನಾಮಕರಣ ಮಾಡಿದರೆ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಇಲ್ಲಿ ನೋಡಿದರೆ ನಾಮಕರಣ ಮಾಡತಕ್ಕದ್ದು ವಿಪರೀತಕ್ಕೆ ಹೋಗಿದೆ. ಈ ಸಂದರ್ಭದಲ್ಲಿ ಮತ್ತೆ ಮಾನ್ಯ ಕೃಷ್ಣನ್ ಅವರ ಮಾತನ್ನು ಪುನರುಚ್ಚರಿಸುವುದಕ್ಕೆ ಹೋಗುವುದಿಲ್ಲ. ಯಾವ ರೀತಿ ನಾಮಕರಣ ಮಾಡಬಹುದು ಎಂದರೆ ಮನಸ್ಸಿಗೆ ಬಂದ ಹಾಗೆ ಮಾಡಬಹುದು ಸಾಕಷ್ಟು ಜನರನ್ನು ಮಾಡಬಹುದು ಎಂದು ಮಾಡಿದ್ದೀರಿ. ಶಾಸಕರ ಸಂಖ್ಯೆ ಕಡಿಮೆ ಇದ್ದಲ್ಲಿ ಜಾಸ್ತಿ ಮಾಡಿಕೊಳ್ಳುವ ಪ್ರಯತ್ನ ನಡೆದಿದೆ. ಈಗ ತಾನೇ ಒಂದು ಅಫಿಷಿಯಲ್ ಅಮೆಂಡ್‌ಮೆಂಟ್ ನಾವು ಇಲ್ಲಿ ಕುಳಿತ ಹಾಗೆ ಬಂದಿದೆ. ಇದರ ಬಗ್ಗೆ ಒಂದು ಮಾತನ್ನು ಹೇಳಬೇಕೆಂದು ಇದೆ. ಮಹಿಳೆಯರಿಗೆ, ಹರಿಜನರಿಗೆ ಪ್ರಾತಿನಿಧ್ಯ ಕೊಡತ್ತೇವೆಂದು ನೀವು ಯಾವಾಗಲೂ ಹೇಳುವವರು, ಆದರೆ ಈಗ ಆ ಪ್ರಸ್ತಾಪ ಇಲ್ಲಿ ಕೈಬಿಟ್ಟು ಹೋಯಿತಲ್ಲಾ ಎಂದು ಆಶ್ಚರ್ಯವಾಗಿದೆ. ಅದು ಎಲ್ಲಿ ಹೋಯಿತು ಎಂಬುದು ನನ್ನ ವಾದ. ಮತದಾರರ ಪಟ್ಟಿಯಲ್ಲಿ ಶೇಕಡ ೫೦ ರಷ್ಟು ಮಹಿಳೆಯರು ಮತದಾರರಾಗಿದ್ದಾರೆ. ಅವರಿಗೆಲ್ಲಾ ಪ್ರಾತಿನಿಧ್ಯ ಕೊಡಬೇಕು, ಹಿಂದೆ ಯಾವ ಸರ್ಕಾರವೂ ಕೊಟ್ಟಿಲ್ಲ. ನಾವು ಕೊಟ್ಟಿದ್ದೇವೆಂದು ದೊಡ್ಡ ದೊಡ್ಡ ಮಾತುಗಳನ್ನಾಡಿರುವವರು ನೀವು. ಆದರೆ ಈಗ ಏಕೆ ಈ ವಿಚಾರದ ಪ್ರಸ್ತಾಪ ಇಲ್ಲವೆಂದು ಕೇಳಬೇಕೆಂದು ಗುರುತು ಹಾಕಿಕೊಂಡಿದ್ದೆ. ಅಷ್ಟರಲ್ಲಿ ಅಫಿಷಿಯಲ್ ಅಮೆಂಡ್‌ಮೆಂಟ್ ಬಂತು. ಚುನಾವಣೆ ಆಗಿ ಅಧಿಕಾರಕ್ಕೆ ಬಂದತಕ್ಷಣ ದೊಡ್ಡ ದೊಡ್ಡ ಮಾತುಗಳು ಬರುತ್ತಿದ್ದವು. ಇತ್ತೀಚಿನ ದಿನಗಳಲ್ಲಿ ಆ ವಿಚಾರ ಧಾರೆಗೆ ಹೆಚ್ಚಾಗಿ ಮಸುಕು ಮುಚ್ಚಿರುವುದು ಕಂಡುಬರುತ್ತಿದೆ. ಈ ವಿಚಾರವನ್ನು ವಿರೋಧ ಪಕ್ಷದ ವತಿಯಿಂದ ಎತ್ತಬಹುದೆಂಬ ದೃಷ್ಟಿಯಿಂದ ತಕ್ಷಣ ಅಮೆಂಡ್‌ಮೆಂಟ್ ಕಳುಹಿಸಿಕೊಡತಕ್ಕ ಪ್ರಯತ್ನ ಮಾಡಿದ್ದೀರಿ. ನಾನು ಅಮೆಂಡ್‌ಮೆಂಟ್ ಸೂಚಿಸಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೆ.

ಶ್ರೀ ಎಂ. ಚಂದ್ರಶೇಖರ್.—ಸಂಪುಟ ಸಭೆಯಲ್ಲಿ ಆಗಲೇ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಂಡು ಬಹಳ ದಿವಸವಾಯಿತು. ಅದನ್ನು ಈಗ ಮೀಟ್ ಮಾಡುತ್ತಿದ್ದೇವೆಂದು ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಸಂತೋಷ, ಸಂಪುಟ ಸಭೆಯಲ್ಲಿ ತೀರ್ಮಾನಿಸಿದ್ದರೆ ಒಳ್ಳೆಯದು. ಆದರೆ ಮಸೂದೆ ಶಾಸನಸಭೆಯ ಮುಂದೆ ಬರುವುದಕ್ಕೆ ಮೊದಲೇ ಸಂಪುಟ ಸಭೆಯಲ್ಲಿ ತೀರ್ಮಾನವಾಗಿದೆ ಎಂದು ತಿಳಿಸಿದ್ದರೆ ಚನ್ನಾಗಿತ್ತು. ಸಂಪುಟ ಸಭೆ ವಾರಕ್ಕೆ ೧೫ ದಿನಕ್ಕೊಮ್ಮೆ ನಡೆಯುತ್ತಿರುತ್ತದೆ. ಈ ಮಸೂದೆಯನ್ನು ಯಾವಾಗ ತಂದಿದ್ದೀರೆಂಬುದು ಗೊತ್ತಿದೆ. ನನಗೆ ಹೇಗೆ ಗೊತ್ತಾಯಿತು ಎಂದರೆ .....

ಶ್ರೀ ಎಂ. ಚಂದ್ರಶೇಖರ್.—ಅಂತೂ ಯೋಚನೆ ಮಾಡಿ ಇಲ್ಲಿ ಪ್ರಸ್ತಾಪಿಸುತ್ತೇವೆಂದು ಅಂದಾಜು ಹಾಕಿ ತಂದಿದ್ದೀರಿ ಎಂದರೆ. ಆ ಅಂದಾಜು ನಾವು ಹಾಕಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸಂಪುಟ ಸಭೆಯಲ್ಲಿ ತೀರ್ಮಾನವಾಯಿತೆಂದು ಹೇಳುತ್ತಿದ್ದಾರೆ ಈ ಬಿಲ್ಲನ್ನು ಸಂಪೂರ್ಣ ಫೈನಲೈಸ್ ಮಾಡುವ ಹೊತ್ತಿಗೆ ಲಾ ಡಿಪಾರ್ಟ್‌ಮೆಂಟಿನಲ್ಲಿ, ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟಿನಲ್ಲಿ ಅಂತಿಮ ರೂಪ ತೆಗೆದುಕೊಳ್ಳುವುದಕ್ಕೆ ಮೊದಲೇ ಸಂಪುಟ ಸಭೆಯಲ್ಲಿ ತೀರ್ಮಾನವಾಗಿರಲಿಲ್ಲ ಎಂಬ ಅಭಿಪ್ರಾಯಕ್ಕೆ ಬರುತ್ತೇನೆ. ಹಾಗೇನಾದರೂ ಮೊದಲೇ ಆಗಿದ್ದರೆ ಕ್ಲಾಸ್-೩ ಪ್ರಕಾರ ಆ ಐಟಂ ಬರಬೇಕಾಗಿತ್ತು. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಮಹಿಳೆಯರಿಗೆ ಇಂತಿಷ್ಟು ಸ್ಥಾನಗಳು ಎಂದು ಬರಬೇಕಾಗಿತ್ತು.

೩-೦೦ ಪಿ. ಎಂ.

ಅಂದರೆ ನಿಮ್ಮ ತೀರ್ಮಾನಗಳನ್ನು ಇದೆಲ್ಲಾ ಆಗಿ ಮುಗಿದಮೇಲೆ ಮಾಡುತ್ತೀರಿ. You are completely playing in the hands vested interest..... ಬ್ಯೂರಾಕ್ರಸಿಯಲ್ಲಿರ ತಕ್ಕವರು ಅಲ್ಲಿ ಆಟ ಆಡುತ್ತಿರುತ್ತಾರೆ. ಆಡಿರಬಹುದು. ಅಥವಾ ನಿಮಗೂ ಇಂಟರೆಸ್ಟ್ ಇಲ್ಲದೇ ಇರಬಹುದು. ಮಹಿಳೆಯರು ಪ್ರಾತಿನಿಧ್ಯ ಆಗಿದೆಯಲ್ಲಾ, ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಕೊಟ್ಟಿದ್ದೇವಲ್ಲಾ. ಇಲ್ಲಿ ಯಾತಕ್ಕೆ ಅವರಿಗೆ ಕೊಡಬೇಕು, ಇಲ್ಲಿ ಏನು ಕೆಲಸ ಎಂದು ಇರಬಹುದು. ಗೋಪಾಲಾಷ್ಟಮಿಗೂ ಮುಲ್ಲಾ ಸಾಹೇಬರಿಗೂ ಏನು ಸಂಬಂಧ ಎಂದು ಇರಬಹುದು. ಟೌನ್ ಪ್ಲಾನಿಂಗ್ ಅಥಾರಿಟಿಯಲ್ಲಿ ಮಹಿಳೆಯರಿಗೆ ಏನು ಕೆಲಸ, ಮಹಿಳೆಯರು ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಏತಕ್ಕೆ ಬೇಕು ಎಂದು ಬಿಟ್ಟಿರಬಹುದು. ಅಥವಾ ನೀವು ಟ್ರ್ಯಾಪ್ ಆಗಿರಬೇಕು. ಅಥವಾ ಈ ವಿಚಾರದಲ್ಲಿ ಮಂತ್ರಿಮಂಡಲದ ತೀರ್ಮಾನ ಇಲ್ಲಿ ಬಿಲ್ ಇಂಟ್ರೊಡ್ಯೂಸ್ ಮಾಡಿದಮೇಲೆ ಆಗಿರಬೇಕು. ಮೊದಲೇ ಗಮನ ಕೊಟ್ಟಿರಲಿಲ್ಲ ಎಂಬುದು ಇಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಬಗ್ಗೆ ಇನ್ನು ಹೆಚ್ಚು ಮಾತು ಬೆಳೆಸಲಾರೆ. ಇಷ್ಟು ಸಾಕು. ಕಾನ್‌ಸ್ಟಿಟ್ಯೂಷನ್ ಆಫ್ ಅಥಾರಿಟಿ ಸಿಂಗಲ್ ಏಜೆನ್ಸಿ ಕೆಳಗೆ ತರತಕ್ಕದ್ದು ಏನಿದೆ ಇದರಲ್ಲಿ ಸಾಕಷ್ಟು ರಾಜಕೀಯ ಮಾಡುವುದಕ್ಕೆ ಸಾಧ್ಯತೆ ಇದೆ. ನಾನು ತಮ್ಮ ಉತ್ತರದಲ್ಲಿ ಒಂದು ನಿರೀಕ್ಷೆ ಮಾಡುತ್ತೇನೆ. ತಾವು ಪಕ್ಷ ಪಂಗಡ ಬೇಧ ಬಿಟ್ಟು ಇದರ ಬಗ್ಗೆ ಗಮನ ಕೊಡತಕ್ಕ ಅವಶ್ಯಕತೆ ಇದೆ. ನಮ್ಮ ಸರ್ಕಾರ ಇದ್ದಾಗಲೂ ಈ ಅಪಾದನೆ ಬಂದಿತ್ತು. ನಿಮ್ಮ ಪಕ್ಷದವರನ್ನೇ ಹಾಕಿಕೊಳ್ಳುತ್ತೀರಿ ಎಂದು ಹೇಳಿದ್ದರು. ಆದರೆ ನಾನು ನಿಮ್ಮ ಪಕ್ಷದವರನ್ನು ಹಾಕಬೇಡಿ ಎಂದು ಹೇಳುವುದಿಲ್ಲ. ಆದರೆ ಹಾಕುವಾಗ ಯಾರು ನಿಜವಾಗಿ ಈ ಕೆಲಸ ಮಾಡಲು ಆಸಕ್ತರಾಗಿರುತ್ತಾರೆ ಮತ್ತು ಅರ್ಹತೆ ಪಡೆದಿರುತ್ತಾರೆ ಅಂಥವರನ್ನು ಹಾಕಬೇಕು. ಅದನ್ನು ಹುಡುಕುವುದು ಕಷ್ಟಸಾಧ್ಯವಾದ ಕೆಲಸ. ಮಾನ್ಯ ಚಂದ್ರಶೇಖರ್ ಅವರಿಗೆ ಸುಲಭ ಅಲ್ಲ ಕ್ಲೀನ್ ಹ್ಯಾಂಡ್ ಆಗಿರುವವರಾಗಿರಬೇಕು. ಪಂಚಾಯಿತಿ ಸದಸ್ಯರಿಗೇ ಸಿಕ್ಕಾಪಟ್ಟೆ ಬೆಲೆ ಇರುವಾಗ ಇಲ್ಲಿನ ಸದಸ್ಯರಿಗೆ ಯಾವ ರೀತಿ ಬೆಲೆ ಇರುತ್ತದೆ ಯೋಚನೆ ಮಾಡಿ. ಮಾನ್ಯ ಮಂತ್ರಿಗಳು ನಗರದಲ್ಲಿ ಹುಟ್ಟಿ ಬೆಳೆದಿರತಕ್ಕವರು. ಸೈಟು, ಮನೆಗಳು ಎಂದರೆ ಏನು ಬೆಲೆ ಎಂಬುದು ಗೊತ್ತಿದೆ. ಇಲ್ಲಿ ಕ್ಲಾಸ್-೧೪ರಲ್ಲಿ ಇದರ ಕರ್ತವ್ಯಗಳು ಏನೇನು ಎಂದು ವಿವರವಾಗಿ ಹೇಳಿದ್ದಾರೆ. It says objects of the Authority. The objects of the Authority shall be the planning and promoting and securing the development of the urban area and for Here for securing the development of the urban area–means it is a very big term.

> 'And for these purposes the Authority shall have the power to acquire, hold manage and dispose of moveable and immovable property, whether within or outside the urban area under its jurisdictions, to carryout building engineering and other operations and generally to do all things necessary or expedient for the purpose of such development and for purposes incidental thereto.'

೪೦′ × ೬೦′, ೨೦′ × ೩೦′, ೧೫′ × ೨೦′ ಅಡಿ ಸೈಟುಗಳನ್ನು ಕೊಡುವ ವಿಚಾರ ಮಾತ್ರವಲ್ಲ. ಇದರಲ್ಲಿ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್, ಇಂಜಿನಿಯರಿಂಗ್‌ಗೆ ಸಂಬಂಧಪಟ್ಟ ವಿಚಾರಗಳು, ಸ್ಯಾನಿಟೇಷನ್, ಲೇ ಔಟ್ ಮಾಡತಕ್ಕದ್ದು ಎಲ್ಲಾ ಬರುತ್ತದೆ. ಇದರ ವ್ಯಾಪ್ತಿ ಸಣ್ಣ ವ್ಯಾಪ್ತಿ ಅಲ್ಲ. ಇದು ಬಹಳ ದೊಡ್ಡದಾಗಿರತಕ್ಕ ವ್ಯಾಪ್ತಿಯನ್ನು ಪಡೆದಿದೆ. ಹಿಂದೆ ಎಲ್ಲಾ ಟ್ರಸ್ಟ್ ಬೋರ್ಡ್ ಅಂತ ಇತ್ತು. ದಾವಣಗೆರೆ ಟ್ರಸ್ಟ್ ಬೋರ್ಡ್ ಅಂದರೆ ಅದಕ್ಕೆ ಒಬ್ಬರು ಛೇರ್ಮನ್ ಇರುತ್ತಾರೆ. ಒಂದೆ ಎಲ್ಲಾ ಅಲ್ಲಿ ಏನು ನಡೆದಿದೆ ? ಭೂಮಿ ಅಕ್ವೈರ್ ಮಾಡಿಕೊಳ್ಳುವುದು, ಸೈಟುಗಳನ್ನು ಮಾಡುವುದು, ಕಾರ್ನರ್ ಸೈಟಿದ್ದರೆ ಹರಾಜು ಹಾಕುವುದು ಮತ್ತೊಂದು ಮಾಡುವುದು ಬೇರೆಯುದಕ್ಕೆ ಹಾಗೇ ರೇಟ್ ಫಿಕ್ಸ್ ಮಾಡಿ ಹಂಚುವುದು. ಅಂದರೆ ಇಲ್ಲಿಯುವರೆಗೆ ಬರೀ ಸೈಟುಗಳ ವಿಚಾರ ಮಾತ್ರ ಇದರಲ್ಲಿ ಬರುತ್ತಿತ್ತು. ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ವಿಷಯ ಟ್ರಸ್ಟ್‌ಬೋರ್ಡಿನಲ್ಲಿ ಬರುತ್ತಿರಲಿಲ್ಲ. ಇದ್ದರೂ ಅಲ್ಪಸ್ವಲ್ಪ

ಇರಬಹುದು. ನನಗಂತೂ ಅದು ಸರಿಯಾಗಿ ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಈ ವ್ಯವಹಾರ ಎಲ್ಲಾ ಬರೀ ಸೈಟಿನಲ್ಲೇ ಮುಗಿದಿದೆ. ಆದರೆ ಇಲ್ಲಿ ಬರೀ ಸೈಟ್ ಅಕ್ವೈರ್ ಮಾಡುವುದಷ್ಟೇ ಅಲ್ಲದೆ ಬೇರೆ ವ್ಯವಹಾರ ಇದೆ. ಶಿವಮೊಗ್ಗದಲ್ಲೂ ಟ್ರಸ್ಟ್ ಬೋರ್ಡೋ ಏನೋ ಇದೆ. ಏನು ಮಾನ್ಯ ಬಸವಣ್ಣಪ್ಪನವರೇ ಅಲ್ಲಿರುವುದು ?

ಶ್ರೀ ಜಿ. ಬಸವಣ್ಣಪ್ಪ —ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್.

ಶ್ರೀ ಎಸ್. ಬಂಗಾರಪ್ಪ.—ಹಾ, ಸಿಟಿ ಇಂಪ್ರೂಮೆಂಟ್ ಬೋರ್ಡ್ ಇದೆ. ಕೆಲವು ಕಡೆ ಟ್ರಸ್ಟ್ ಬೋರ್ಡ್ ಎಂದಿರುತ್ತದೆ. ಮೈಸೂರಿನಲ್ಲಿ ಟ್ರಸ್ಟ್ ಬೋರ್ಡಿದೆ. ಇಲ್ಲೆಲ್ಲಾ ಭೂಮಿ ತೆಗೆದು ಕೊಳ್ಳುವುದು, ಸೈಟು ಮಾಡಿ ಕೊಡುವುದು ಅಷ್ಟೇ ಕೆಲಸ. ನಾನು ಬರೀ ಗುಲ್ಬರ್ಗ, ಶಿವಮೊಗ್ಗ, ಬೆಳಗಾಂ, ಬಳ್ಳಾರಿ, ಹುಬ್ಬಳ್ಳಿ-ಧಾರವಾಡಕ್ಕೆ ಮಾತ್ರ ಸೀಮಿತಗೊಳಿಸಿ ಮಾತನಾಡುತ್ತಿಲ್ಲ. ಎಲ್ಲರಿಗೂ ಕೂಡ ಗೊತ್ತಿರುವಂತಹ ಜನ ಜನಿತವಾದ ವಿಚಾರ ಇದು. ನಿವೇಶನದ ವಿಚಾರದಲ್ಲಿ ಭೂಮಿಯನ್ನು ಅಕ್ವೈರ್ ಮಾಡುತ್ತೇವೆಂದು ನೋಟಿಫೈ ಮಾಡುವುದು. ನಂತರ ಡಿ–ನೋಟಿಫೈ ಮಾಡುವುದು. ಬೆಂಗಳೂರು ನಗರದಲ್ಲಿ ಇದರದ್ದೊಂದು ದೊಡ್ಡ ಹಗರಣವೇ ನಡೆದಿದೆ. ಎಲ್ಲಾ ಕಡೆಯೂ ನಡೆದಿರುವಂತಹದ್ದು. ಬೆಂಗಳೂರು ನಗರದ ಸುತ್ತ ಗ್ರೀನ್ ಬೆಲ್ಟನ್ನು ಹಾಕುತ್ತೇವೆಂದು ತಾವು ಹೇಳಿದ್ದೀರಿ. ನಿಮ್ಮ ಗ್ರೀನ್ ಬೆಲ್ಟ್, ಬಂಡವಾಳ ಶಾಹಿಗಳು ಸೇರಿಕೊಂಡಾಗಲ್ಲೊ ದೊಡ್ಡದಾಗುತ್ತಾ ಹೋಗುತ್ತದೆ ನಿಮ್ಮ ಹೊಟ್ಟೆಯ ಬೆಲ್ಟ್ ಕೂಡ ದೊಡ್ಡದಾಗುತ್ತಾ ಹೋಗುತ್ತಿದೆ. ಒಂದೇ ಎರಡೇ, ಎಷ್ಟು ಉದಾಹರಣೆಗಳನ್ನು ಬೇಕಾದರೂ ಕೊಡಬಹುದು. ಸೊಸೈಟಿಗಳ ಕ್ರಿಯೇಷನ್ ತೆಗೆದುಕೊಳ್ಳಿ. ಎಷ್ಟೆಷ್ಟು ಸೊಸೈಟಿಗಳಾಗಿವೆ ಈ ಬೆಂಗಳೂರು ನಗರದಲ್ಲಿ ಪೂರ್ತಿ ಬೆಳೆದು ಹೋಗಿವೆ. ಅದರಲ್ಲಿ ಆಗಿರತಕ್ಕಂತಹ ಅನ್ಯಾಯಗಳು, ದುರ್ವ್ಯವಹಾರಗಳು ಏನು ಇವೆ ಅವುಗಳನ್ನು ನೋಡಿದರೆ, ಇವರಿಗೆ ಇದೇ ಕಸುಬಾಗಿದೆ. ಕೆಲವು ಪತ್ರಿಕೆಗಳನ್ನು ತಾವು ನೋಡಬೇಕು. ಎಂತೆಂತಹ ಜಾಹಿರಾತುಗಳು. ಸೊಸೈಟಿಗಳನ್ನು ಯಾವ ರೀತಿ ಮಾಡಿದ್ದಾರೆಂದರೆ, ಬಡವರ ಬಂಧು ಹೌಸಿಂಗ್ ಸೊಸೈಟಿ ಅಂತ ಮಾಡಿದ್ದಾರೆ. ಇದನ್ನು ಉದಾಹರಣೆಯಾಗಿ ಹೇಳುತ್ತಿದ್ದೇನೆ. ಇದರ ಅರ್ಥ ಕರ್ನಾಟಕದಲ್ಲಿ ಇರತಕ್ಕ ದೀನದಲಿತರ, ಬಡವರ ಸೊಸೈಟಿ ಅಂತ ತಿಳಿದುಕೊಳ್ಳಬೇಕು. ಅದೇ ರೀತಿ ವಿಜಯಲಕ್ಷ್ಮಿ ಹೌಸಿಂಗ್ ಸೊಸೈಟಿ. ಭಾರತೀಯ ಹೌಸಿಂಗ್ ಸ್ಕೀಂ, ಭಾರತೀಯ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ, ಇಂತಹ ಉದಾಹರಣೆಗಳ ದೊಡ್ಡ ಪಟ್ಟಿಯೇ ಇದೆ. ವಿಪರೀತ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಗಳಾಗಿಬಿಟ್ಟಿವೆ.

(ಶ್ರೀಮತಿ ಮನೋರಮ ಮಧ್ವರಾಜ್–ಅಧ್ಯಕ್ಷರ ಪೀಠವನ್ನಲಂಕರಿಸಿದರು)

ನಿಮ್ಮ ಗ್ರೀನ್ ಬೆಲ್ಟ್ ಎಲ್ಲಿ ಹೋಯಿತು ? ಬಿ.ಡಿ.ಎ. ಹತ್ತಿರ ಹೋದರೆ ಅದು ಗೊತ್ತಾಗುತ್ತದೆ. ಅಕ್ವೈರ್ ಮಾಡುವುದಕ್ಕೆ ನೋಟಿಫೈ ಮಾಡುವುದು. ಪುನಃ ಡೀ–ನೋಟಿಫೈ ಮಾಡುವುದು. ಅದರ ದೊಡ್ಡ ಪಟ್ಟಿಯನ್ನೇ ತಂದು ತೋರಿಸಬಹುದು. ಅದನ್ನು ನೋಡಿದರೆ ನಾಚಿಕೆಯಾಗಬೇಕು ತಲೆ ತಗ್ಗಿಸಬೇಕು. ಬೆಂಗಳೂರು ಸುತ್ತಲೂ ಸರ್ಕುಲರ್ ರೈಲ್ ಮಾಡುವಂತಹ ಯೋಜನೆ ಎಲ್ಲಿ ಹೋಯಿತು ? ಆ ರೀತಿಯ ರಸ್ತೆಯನ್ನು ಮಾಡುವುದಕ್ಕೆ ಬಿಡುತ್ತಿಲ್ಲ. ನಿಮ್ಮ ಗ್ರೀನ್ ಬೆಲ್ಟ್ ಕಿತ್ತು ಹೋಗಿದೆ. ಬೆಲ್ಟೇ ಇಲ್ಲ. ಇನ್ನು ಕೇಳುವುದು ಎಲ್ಲಿ ಬಂತು ? ಅದೇ ರೀತಿ ಮೈಸೂರು ತೆಗೆದುಕೊಳ್ಳಿ. ಮಂಗಳೂರು ತೆಗೆದುಕೊಳ್ಳಿ. ಮತ್ತೊಂದನ್ನು ತೆಗೆದುಕೊಳ್ಳಿ. ಬಹಳ ದೊಡ್ಡದು. ಅವ್ಯಾಹತವಾಗಿ ಲಂಚದ ಕೂಪದಲ್ಲೇ ಕೊಳೆಯುತಕ್ಕ ಜನರು ಇದ್ದಾರೆ. ನೀವುಗಳೆಲ್ಲಾ ಅಧಿಕಾರಕ್ಕೆ ಬರಬೇಕಾದರೆ ಬಹಳ ದೊಡ್ಡ ಭಾಷಣವನ್ನು ಮಾಡಿದಿರಿ. ಎಂತೆಂತ ಭಾಷಣ, ಕಾಂಗ್ರೆಸ್ ಸರ್ಕಾರ ಇದ್ದಾಗ ಬಹಳಷ್ಟು ಅನ್ಯಾಯಗಳು ಆಗಿವೆ. ನಮ್ಮ ಸರ್ಕಾರ ಬಂದರೆ ಕ್ಲೀನ್ ಆಗಿ ಕಸ ಗುಡಿಸುವ ಹಾಗೆ ಗುಡಿಸುತ್ತೇವೆಂದು ಹೇಳಿದಿರಿ. ಏನನ್ನೂ ನನ್ನ ಅನ್ನತಕ್ಕಂತಹ ಪ್ರಶ್ನೆ ಬರುತ್ತದೆ. ಚುನಾವಣೆಯಲ್ಲಿ ನೀವು ಆ ರೀತಿ ಹೇಳಿದಿರಿ. ಜನ ಅದಕ್ಕೆ ಬೆಂಬಲಕೊಟ್ಟು ನಿಮ್ಮನ್ನು ಅಧಿಕಾರಕ್ಕೆ ತಂದರು. ನಮ್ಮ ಆಡಳಿತ ಇದ್ದಾಗ ಏನಾದರೂ ಅನ್ಯಾಯಗಳು ಆಗಿದ್ದರೆ, ನೀವು ಕ್ಲೀನ್ ಮಾಡ ಬೇಕಾಗಿತ್ತಲ್ಲ. ನೀವು ಕಸ ಗುಡಿಸಿದ್ದೀರಿ. ಲಂಚತನ, ಲಂಚರುಷುವತ್ತು, ಸ್ವಜನಪಕ್ಷಪಾತ, ಅನ್ಯಾಯಗಳು ಇವುಗಳನ್ನೆಲ್ಲಾ ಕಸ ಗುಡಿಸಿದ ಹಾಗೆ ಗುಡಿಸಿ ಬಣ್ಣದ ಡಬ್ಬಕ್ಕೆ ತುಂಬಿ ಕಳುಹಿಸುತ್ತಾರೆಂದು ಜನ ತಿಳಿದುಕೊಂಡಿದ್ದರು. ಕಸ ಗುಡಿಸಿದಿರಿ. ಸಂಪೂರ್ಣವಾಗಿ ಇಲ್ಲ. ಎಲ್ಲೆಲ್ಲಿ ಎಷ್ಟೆಷ್ಟು ಸಿಕ್ಕುತ್ತದೋ

ಅದನ್ನು ಗುಡಿಸಿಕೊಂಡು ನಿಮ್ಮ ಡಬ್ಬಕ್ಕೆ ಹಾಕಿಕೊಂಡು ಬಿಟ್ಟಿರಿ. ಆ ಕೆಲಸ ಇನ್ನೂ ನಡೆಯುತ್ತಲೇ ಇದೆ. ಆ ವಿಚಾರದಲ್ಲಿ ಸ್ಥಳೀಯವಾಗಿ ಸತ್ಯಾಗ್ರಹ ಮಾಡಿದ್ದಾರೆ. ಎಷ್ಟೋ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಅನ್ಯಾಯಗಳನ್ನು ಬೆಳಕಿಗೆ ತಂದಿದ್ದಾರೆ. ಸ್ಥಳೀಯ ಪತ್ರಿಕೆಗಳು ಹಾಗೂ ರಾಜ್ಯ ಮಟ್ಟದ ಪತ್ರಿಕೆಗಳಲ್ಲೂ ಅದರ ಬಗ್ಗೆ ಬೆಳಕು ಚೆಲ್ಲಿದ್ದಾರೆ ಜನಗಳು ಎಷ್ಟೋ ಸಾರಿ ಅರ್ಜಿಗಳನ್ನು ಕೊಟ್ಟಿದ್ದಾರೆ. ಶಾಸನ ಸಭೆಯಲ್ಲಿ ನಾವೂ ಕೂಡ ಅದರ ಬಗ್ಗೆ ಪ್ರಸ್ತಾವ ಮಾಡಿದ್ದೇವೆ. ಇಷ್ಟೆಲ್ಲಾ ಈ ವಿಚಾರದಲ್ಲಿ ಹೇಳಿದರೂ ಕೂಡ ಬದಲಾವಣೆಯಾಗಿಲ್ಲ. ಲಂಚದ ರೋಗ ಏನಿದೆ, ಡಿಗ್ರಿ ಅದು ನಿಜವಾಗಿಯೂ, ಲಂಚದ ಸೂಚ್ಯಂಕ ಕೆಳಕ್ಕೆ ಬರುವುದಕ್ಕೆ ಬದಲು ಪರ್ವತದ ತುಟ್ಟ ತುದಿಯನ್ನು ಹತ್ತಿ ಹೊರಟು ಹೋಗುತ್ತಿದೆ.

ಇವತ್ತು ನೀವು ಇಂತಹ ಅಥಾರಿಟಿಗಳನ್ನು ಎಷ್ಟೇ ಮಾಡಿದರೂ ಕೂಡಾ ನಿಮ್ಮ ಪುಸ್ತಕದಲ್ಲಿ ಕಾನೂನು ಬರಬಹುದೇ ವಿನಃ ಇನ್ನೇನು ಪ್ರಯೋಜನವಿಲ್ಲ. ನಿಮ್ಮ ಪುಸ್ತಕಕ್ಕೆ ಅದು ಬರಬೇಕಲ್ಲಾ ? ತಾವು ಚರ್ಚೆ ಮುಖಾಂತರ ಪುಸ್ತಕದಲ್ಲಿ ತಂದಮೇಲೆ ನಂತರ ಕಾರ್ಯಕ್ಷೇತ್ರದಲ್ಲಿ ಇದನ್ನು ಸ್ಪಷ್ಟವಾಗಿ ನಮೂದು ಮಾಡಬೇಕು. ಅಂತಿಮವಾಗಿ ಫಲಿತಾಂಶ ಏನು ಎಂದರೆ, ಯಾರು ಯಾರಿಗೆ, ಜನಸಾಮಾನ್ಯರಿಗೆ ಅದು ಸಿಗಬೇಕು ದೀನದಲಿತರಿಗೆ ಇದರ ಸಹಾಯ ಸಿಗಬೇಕು ಎಂಬುದು. ನಿಮ್ಮ ಸರ್ಕಾರ ಬಂದಮೇಲೆ ಸುಧಾರಣಾ ಕಾನೂನುಗಳನ್ನು ತಾವು ತಂದಿದ್ದೀರಿ. ಕರ್ನಾಟಕ ಜನತೆಯ ಕಣ್ಣು ತಪ್ಪಿಸತಕ್ಕ ತಂತ್ರವನ್ನು ಪದೇ ಪದೇ ಉಪಯೋಗಿಸುತ್ತಿದ್ದೀರೆನ್ನುವುದನ್ನು ನಾವು ಪದೇಪದೇ ಹೇಳುತ್ತಿದ್ದೇವೆ. ತಾವು ಹೇಳಿರುವುದು ಒಂದೇ, ಎರಡೇ ? ಬಡವರಿಗೆಲ್ಲಾ ಸೈಟುಗಳು ಎಂದಿದ್ದೀರಿ. ಹಿಂದೆ ಮುನಿಸಿಪಾಲಿಟಿಗಳಿಗೆ ಆಕ್ಟ್ರಾಯ್ ರದ್ದು ಮಾಡಿದ ಸಂದರ್ಭದಲ್ಲಿ ಔಟ್‌ರೇಟ್ ಗ್ರಾಂಟ್ ಕೊಟ್ಟಿರಿ. ಅದು ಪೂರ್ತಿಯಾಗಿ ಅವರಿಗೆ ತಲುಪಿದೆಯೋ ? ಜಿಲ್ಲಾ ಪರಿಷತ್ತುಗಳಿಗೆ ಹಣ ಕೊಡುತ್ತಿದ್ದೀರಿ, ಇವಕ್ಕೂ ಈಗ ಹಣ ಕೊಡುತ್ತೀರಿ. ನೀವು ಯಾವ ಬಣ್ಣ ಬಳೆದು ಯಾವರೀತಿ ನಡೆದರೂ ಇವತ್ತಿನ ದಿವಸ ನಮ್ಮ ಜನರು ದಡ್ಡರಲ್ಲ. ಅವರೂ ಕೂಡಾ ಬುದ್ಧಿವಂತರಾಗಿದ್ದಾರೆ. ಇವತ್ತಿನ ದಿವಸ ಹಣ, ಹೆಂಡ ಹಂಚಿ ಅವರಿಂದ ಮತ ಪಡೆಯುವುದು ಕಷ್ಟ. ಇದು ಎಲ್ಲಾ ತಾಲ್ಲೂಕುಗಳಲ್ಲೂ ನಡೆಯುವುದಿಲ್ಲ. ನಡೆಯುವುದಕ್ಕೂ ಸಾಧ್ಯವಿಲ್ಲ. ಇವತ್ತು ಪ್ರಜಾಪ್ರಭುತ್ವ ನಡೆಸುವುದಕ್ಕೆ ಬಿ. ಎ., ಎಂ. ಎ. ಎಲ್. ಎಲ್. ಬಿ. ಬೇಕಾಗಿಲ್ಲ. ಬಿ. ಎ. ಓದಿದವರಿಗೆ ನಾವು ಹಾಕುವಂತಹ ಜನ ಹಳ್ಳಿಗಳಲ್ಲಿ ತಯಾರಾಗಿದ್ದಾರೆ. ರಾಜಕೀಯ ಪ್ರಜ್ಞೆ ಅವರಲ್ಲಿ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ನಾನು ನೇರವಾಗಿ ವಿಚಾರಕ್ಕೆ ಬರಬೇಕೆಂದರೆ ನಿಮ್ಮ ವಿಚಾರಧಾರೆ ಬದಲಾವಣೆಯಾಗಬೇಕು. ಇವತ್ತು ನೀವು ಒಂದು ಹೊಸ ವಿಚಾರ ಧಾರೆ ಮಾಡಿ ಬಡಜನರಿಗೆ ಸೈಟ್‌ಗಳನ್ನು ಹಂಚಿ. ಹೌಸಿಂಗ್ ಬೋರ್ಡ್ ಬಗ್ಗೆ ಹೇಳುವುದಾದರೆ, ಕೋರಮಂಗಲದಲ್ಲಿ ಪಾರ್ಕ್‌ಗೆಂದು ಜಾಗ ಬಿಟ್ಟಿದ್ದಾರೆ. ಅಲ್ಲಿ ಬೇಲಿ ಹಾಕಿ ಪಾರ್ಕ್ ಮಾಡಿದರೆ ಅಲ್ಲಿನ ಮಕ್ಕಳಿಗೆ ಉದ್ಯಾನವನವಾಗುತ್ತದೆ. ಪಾರ್ಕ್‌ಗೆಂದೇ ಆ ಜಾಗ ಮೀಸಲಾಗಿರುತ್ತದೆ. ಆದರೆ ಈಗ ಅಲ್ಲಿ ಏನು ಮಾಡಿದ್ದೀರಿ ? ಅಲ್ಲಿ ಹೌಸಿಂಗ್ ಬೋರ್ಡ್‌ನವರು ಸೈಟ್‌ಗಳನ್ನು ಮಾಡಿ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಅಲ್ಲಿ ಕಲ್ಲನ್ನೂ ಸಹಾ ಹಾಕಿದ್ದಾರೆ. ದಯಾಮಾಡಿ ಮಾನ್ಯ ಮಂತ್ರಿಗಳು ಹೋಗಿ ನೋಡಿಕೊಂಡು ಬರಲಿ. ದೇವಸ್ಥಾನಕ್ಕೆ, ಮಸೀದಿಗೆ, ಪಾರ್ಕ್‌ಗೆ ಎಂದು ಇಟ್ಟಿರತಕ್ಕ ಜಾಗದಲ್ಲಿ, ಸಾರ್ವಜನಿಕರ ಉಪಯೋಗಕ್ಕೆ ಎಂದು ಇಟ್ಟಿರತಕ್ಕ ಜಾಗದಲ್ಲಿ ಇವತ್ತು ಸೈಟ್ ಮಾಡಲು ಹೊರಟಿದ್ದೀರಿ. ಇವತ್ತು ನಗರದ ಮಕ್ಕಳು ಆಟವಾಡಲು ದೊಡ್ಡ ಅರಮನೆ ಕಟ್ಟಿಸಿ ಕೊಟ್ಟಿದ್ದೀರಾ ? ಮನೆಗಳ ಮುಂದೆ ಗಿಡಗಳನ್ನು ನೆಡುವುದಕ್ಕಾಗಿ ಜಾಗವನ್ನು ಬಿಟ್ಟಿದ್ದೀರಾ ? ಪಾರ್ಕ್‌ಗೆ ಎಂದರೆ ಅದು ಒಂದು ದೊಡ್ಡ ಜಾಗ. ಅಲ್ಲಿ ೬೦ × ೮೦ ಅಡಿಯ ದೊಡ್ಡ ದೊಡ್ಡ ಸೈಟ್‌ಗಳನ್ನು ಮಾಡಿ ದೊಡ್ಡದೊಡ್ಡವರಿಂದ ಲಂಚ ತೆಗೆದುಕೊಂಡು ಅಂತಹವರಿಗೆ ಅದನ್ನು ಮಾರಾಟ ಮಾಡಲು ಹೊರಟಿದ್ದೀರಿ. ಆದರೆ ಅಲ್ಲಿನ ಸಾರ್ವಜನಿಕರು ಹೈಕೋರ್ಟಿಗೆ ಹೋಗಿ ಈ ಬಗ್ಗೆ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಇಲ್ಲದಿದ್ದರೆ ಇಷ್ಟು ಹೊತ್ತಿಗೆ ನಂಬರ್ ಚೀಟಿಗಳನ್ನು ಹೌಸಿಂಗ್ ಬೋರ್ಡ್‌ನವರು ಹಂಚಿ ತಮ್ಮ ಎಲ್ಲಾ ವ್ಯವಹಾರಗಳನ್ನು ಮುಗಿಸಿಕೊಂಡುಬಿಡುತ್ತಿದ್ದರು. ಅದು ಹೌಸಿಂಗ್ ಬೋರ್ಡ್ ಪ್ರಾಪರ್ಟಿಯೆಂದು ನನಗೆ ಗೊತ್ತಿರಲಿಲ್ಲ, ಅಲ್ಲಿಯ ಜನರು ಹೈಕೋರ್ಟ್‌ಗೆ ಪಿಟಿಷನ್ ಹಾಕಿದ್ದಾರೆ. ಅನೇಕರಿಗೆ ವಿಚಾರ ಗೊತ್ತಿರಬಹುದು. ಪಬ್ಲಿಕ್ ಪ್ರಾಪರ್ಟಿ ಎಲ್ಲೆಲ್ಲಿರುತ್ತದೆ ಅದನ್ನು ದುರುಪಯೋಗ ಮಾಡಿಕೊಳ್ಳತಕ್ಕ ಜನರನ್ನು ನಿಮ್ಮ ಇಂತಹ ಅಥಾರಿಟಿಗಳಲ್ಲಿ ಸೇರಿಸಿಕೊಂಡರೆ ಹೇಗೆ ? ಇಂತಹವರ ಬಗ್ಗೆ ನಿಗಾ ಇರಬೇಕು. ಅವರು ಏನು ಮಾಡುತ್ತಾರೆಂದರೆ ‘‘ಕೋತಿ ಮೊಸರು

ತಿಂದು ಮೇಕೆ ಮುಖಕ್ಕೆ ಒರೆಸಿದಹಾಗೆ'' ಅದು ಅಂತಿಮವಾಗಿ ನಿಮ್ಮ ಸರ್ಕಾರಕ್ಕೆ ಬರುತ್ತದೆ ನಿಮ್ಮನ್ನು ಆಗ ಕೇಳಿದರೆ ಏನು ಉಪಯೋಗ ? ತಿಂದಿರುವವರು ತಿಂದಿರುತ್ತಾರೆ. ಸೈಟುಗಳನ್ನು ಮಾಡಿ ಹಕ್ಕು ಪತ್ರ ಕೊಟ್ಟಿದನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕ ಕಾನೂನು ಮಾಡತಕ್ಕ ಅವಕಾಶವಿದೆಯೆ? ಅದು ಸಾಧ್ಯವಿದೆಯೆ ? ಕರ್ನಾಟಕ ರಾಜ್ಯದ ಅನೇಕ ಕಡೆಗಳಲ್ಲಿ ಪಬ್ಲಿಕ್ ಪ್ರಾಪರ್ಟಿ ಸ್ಪೆಸಿಫಿಕ್ ಪರ್ಪಸ್‌ಗೆ ಇಟ್ಟಿರುತ್ತಾರೆ, ಅದನ್ನು ಸೈಟುಮಾಡಿ ಮಾರಾಟ ಮಾಡಿರುತ್ತಾರೆ. ಲಂಚ ತೆಗೆದುಕೊಂಡು ಸಹಿ ಮೊಹರು ಎಲ್ಲಾ ಹಾಕಿ ಸೈಟುಗಳನ್ನು ಕೊಟ್ಟಿರುತ್ತಾರೆ. ನೀವು ಇಲ್ಲೇ ಕುಳಿತಿರುತ್ತೀರಾ ? ನಾವು ಇಲ್ಲೇ ಕುಳಿತಿರುತ್ತೇವೆಯೋ ? ಮೈಸೂರು ನಗರದಲ್ಲಿ ಬಸವಾನಗರ, ಜನತಾನಗರ ಎಂದು ನಿಮ್ಮ ಪಕ್ಷದ ಹೆಸರುಗಳನ್ನು ಇಟ್ಟು ಸೈಟ್ ಮಾಡಿದ್ದಾರೆ. ಈ ಅನ್ಯಾಯದ ಬಗ್ಗೆ ನಿಮ್ಮ ಪಾರ್ಟಿ ಮೀಟಿಂಗ್‌ನಲ್ಲಿ ಕೂಗಿದರೂ ಹೇಗೋ ತಡೆದುಕೊಳ್ಳಬಹುದು...

ಶ್ರೀ ರಾಮಕೃಷ್ಣ ಹೆಗಡೆ.—ಜನತಾ ಪಕ್ಷದ ನಗರ ಅಲ್ಲ ಜನತಾನಗರ, ಕಾಂಗ್ರೆಸ್ ನಗರ ಎಂದು ನೀವು ಮಾಡಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ.—ನಾನು ಪಕ್ಷ ಎಂದು ಹೇಳಲಿಲ್ಲ, ಜನತಾನಗರವೆಂದು ಹೇಳಿದ್ದೇನೆ. ಬಸವಾನಗರ ಅದು ಸರಸ್ವತಿಪುರಂ, ಒಂಟಿಕೊಪ್ಪಲು, ಕಾಲೇಜ್ ಕ್ಯಾಂಪಸ್‌ನ ಹತ್ತಿರ ಮಾನಸ ಗಂಗೋತ್ರಿ ಅಲ್ಲಿ ಬರುತ್ತದೆ ನಾನು ನೋಡಿ ಬಂದಿದ್ದೇನೆ. ಅಲ್ಲಿ ನಿಮ್ಮ ಪಕ್ಷದ ಹೆಸರು ಜನತಾನಗರ, ನೀವು ಅದರಿಂದ ತೃಪ್ತಿಯಾಗದಿದ್ದರೆ ಜನತಾ ಪಕ್ಷದ ನಗರ ಎಂದೇ ಇಡಿ, ನೀವು ಹೇಗೂ ಕೊಡವಿಕೊಂಡು ಹೋಗುವರು. ಕೊಡವಿಕೊಂಡು ಹೋಗಲಿಕ್ಕೆ ಮೊದಲು ಹಾಗೆ ಮಾಡಿ. ನೀವು ಕೊಡವಿಕೊಂಡು ಎಲ್ಲೆಲ್ಲಿ ಜನತಾ ಪಕ್ಷದ ನಗರ ಎಂದು ಇಡುತ್ತಿರೋ ಇಡಿಯೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜನತಾನಗರವೆಂದು ಮಾಡಿ, ಪ್ರಾರಂಭದಲ್ಲಿ ಕಾದು ನೋಡಬೇಕು. ಹೊಸ ಪಕ್ಷ ಬರುತ್ತಿರುವುದರಿಂದ ಅದರ ಅಧ್ಯಕ್ಷರಾಗುವುದು ಇದೆ ದೆಹಲಿಯಿಂದ ಈಗ ಬಂದಿದ್ದಾರೆ, ನೋಡೋಣ ಹೊಸ ನಾಮಕರಣ ಮಾಡಬೇಕಾಗುತ್ತದೆ,

ಶ್ರೀ ಎಸ್. ಬಂಗಾರಪ್ಪ.—ಅದು ಅವರಿಗೆ ಬಿಟ್ಟಿರತಕ್ಕ ವಿಚಾರ. ನೀವು ದೊಡ್ಡ ದೊಡ್ಡ ವಿಚಾರಧಾರೆ ಉಳ್ಳಂಥವರು ಎಂದು ಕೆಲವು ಜನ ಆ ತರಹ ಮಾತನಾಡುತ್ತಿದ್ದಾರೆ. ಕೆಲವು ಪತ್ರಿಕೆಗಳಲ್ಲಿ ಬರೆದಿದ್ದಾರೆ. ಕೊನೆಗೆ ಕೊಡವತಕ್ಕ ವಿಚಾರ ಇದೆ. ಎಲ್ಲೆಲ್ಲಿ ಜನತಾನಗರ ಇವೆ, ಇವರೇ ಕೊಡವಿಕೊಂಡು ಹೋಗಲಿ. ಇವರು ಹೋದಮೇಲೆ ತಾಳ ತಂಬೂರಿ ಹಿಡಿದುಕೊಂಡು ಚಿಟಕಿ ತೆಗೆದುಕೊಂಡು ಅದನ್ನು ಹೊಡೆದುಕೊಂಡು ಕಾಲ ಕಳೆಯಬೇಕಾಗುತ್ತದೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಅಷ್ಟು ದೂರ ಹೋಗಬೇಡಿ. ಆ ಕಾಲಕ್ಕೆ ಹೋಗಬೇಡಿ.

ಶ್ರೀ ಕೆ. ಮಲ್ಲಪ್ಪ.— ಪ್ರಚಾರ ತಮ್ಮ ಪಕ್ಷದ ಸಾಧನೆ. ಈಗ ಆ ಪ್ರಚಾರದಿಂದ ಸಾಧ್ಯವಾಗುತ್ತದೆಂದರೆ, ಆ ಕಲ್ಪನೆ ತಪ್ಪಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಆ ವಿಚಾರವನ್ನು ಹೇಳಿದರೆ ಅದು ಬಾಗಿಲಿಗೆ ಬಂದಿದೆ. ಚಿಟಕಿ, ಹಾಗೆ ಮಾತನಾಡಿಕೊಂಡು ಬಂದಿದ್ದರೆ ನಾನು ಇಷ್ಟು ದಿವಸ ಇಲ್ಲಿ ಕುಳಿತುಕೊಂಡು ಇರುತ್ತಿರಲಿಲ್ಲ. ನಿಮಗೆ ಅರ್ಥವಾಗಿದೆ ಎಂದು ನನ್ನ ಭಾವನೆ. ಇನ್ನೂ ಕೂಡ ನಿಮಗೆ ಅರ್ಥವಾಗಿಲ್ಲ ಅಂದರೆ ಏನೋ ಮಿಸ್ಟೇಕ್ ಇರಬೇಕು, ಅದಕ್ಕೆ ನಾನು ಹೇಳಿದ್ದೇನೆ. ಆ ವಿಚಾರ ಸಾಂದರ್ಭಿಕವಾಗಿ ಪ್ರಸ್ತಾಪ ಮಾಡಿರತಕ್ಕ ವಿಚಾರ. ಈ ರೀತಿ ನಗರಗಳಲ್ಲಿ ಸೈಟುಗಳನ್ನು ಕೊಡಬೇಕಾದರೆ ಮಾನ್ಯ ಸಚಿವರ ಗಮನಕ್ಕೆ ತರತಕ್ಕದ್ದು ಇದೆ. ಕಳೆದ ಸಾರಿ ಮಾನ್ಯ ಸದಸ್ಯೆಯವರಾದ ಶ್ರೀಮತಿ ಮುಕ್ತರುನ್ನೀಸಾ ಬೇಗಂರವರು ಪಾಪ ಹೆಣ್ಣು ಮಕ್ಕಳನ್ನು ಕಟ್ಟಿಕೊಂಡು ಹೋಗಿ ತಿರುಗಾಡಿ ದುಡಿದಿದ್ದಾರೆ.
೧೯೭೮ರಲ್ಲಿ ಈ ಜನತಾನಗರದ ಬೋರ್ಡ್ ತಗುಲಿಸಿ ಇವರು ಉದ್ಘಾಟನೆ ಮಾಡಿದ್ದೂ ಆಯಿತು. ಇವರು ಎಂದರೆ ಸ್ಥಳೀಯ ಮುಖಂಡರು. ಜೊತೆಗೆ ನಲ್ಲಿಯನ್ನು ಎಳೆದುಬಿಟ್ಟಿದ್ದಾರೆ ನಲ್ಲಿಯಲ್ಲಿ ನೀರು ಕೊಟ್ಟು ಮತ್ತೆ ಓಟು ತೆಗೆದುಕೊಳ್ಳಬೇಕಲ್ಲಾ ? ಮತ್ತೆ ಬೀದಿ ದೀಪಕ್ಕಾಗಿ ಕಂಬಗಳನ್ನು ಹಾಕಿ ತಂತಿಯನ್ನೂ ಎಳೆದುಬಿಟ್ಟರು. ಜನರು ಬಹಳ ಖುಷಿಗೊಂಡರು. ಎಷ್ಟು ಗಮನ, ಜನತಾಪಕ್ಷಕ್ಕೆ ನಮ್ಮ ಬಗ್ಗೆ ಎಂತಹ ಗಮನ ಎಂದುಕೊಂಡರು. ಅವರಿಗೆ ಲೈಟು ಇಲ್ಲ, ಸ್ವಂತ ಜಾಗ ಇಲ್ಲ. ಶತಶತಮಾನಗಳಿಂದ ಯಾರು ದೀನದಲಿತರು ಇದ್ದಾರೆ. ಇವರಲ್ಲಿ ತರಕಾರಿ ಮಾರುವವರು, ಹಮಾಲಿಗಳು, ಭಾರ ಹೊರುವವರು, ಗಾಡಿ ಎಳೆಯುವವರು ಇದ್ದು, ಇವರಿಗೆ ಸೈಟು ಏನೂ ಕೊಟ್ಟಿಲ್ಲ.

ಅವರೇ ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದರು. ಆ ಜಾಗಗಳಿಗೇ ನಲ್ಲಿಯನ್ನು ಎಳೆದು, ಬೀದಿ ಕಂಬಗಳಿಗೆ ತಂತಿ ಹಾಕಿ ದೀಪವನ್ನು ಕೊಟ್ಟಿದ್ದಾರೆ. ನಲ್ವತ್ತು-ನೂರು ಕ್ಯಾಂಡಲ್ ಬಲ್ಬ್‌ಗಳನ್ನು ತಂದು ಕಂಬಕ್ಕೆ ಸಿಕ್ಕಿಸಿಬಿಟ್ಟಿದ್ದಾರೆ. ಇದನ್ನು ನಂಬಿಕೊಂಡು ನೀವು ಜನತಾ ಪಕ್ಷಕ್ಕೆ ಓಟು ಕೊಟ್ಟರೆ ನೀವು ಮೋಸ ಹೋಗುತ್ತೀರಿ, ನೀವು ನೆಲೆ ನಿಂತ ನೆಲ ಉಳಿಯುವುದಿಲ್ಲ, ಈ ದೀಪದ ಕಂಬ ಇರುವುದಿಲ್ಲ, ಅದು ಬಗ್ಗಿ ಹೋಗುತ್ತದೆ ಎಂದು ನಾವು ಹೇಳಿದರೂ ಕೂಡ ನಮ್ಮ ಮಾತನ್ನು ಕೇಳಲಿಲ್ಲ. ಹೋಗಿ ಎಲ್ಲರೂ ಜನತಾ ಪಾರ್ಟಿಗೇ ಸೀಲು ಹಾಕಿದರು. ಆಮೇಲೆ ಏನು ಮಾಡಿದಿರಿ? ಯಾವ ಕಾಲದಲ್ಲೂ ನಡೆಯದೇ ಇರತಕ್ಕಂಥ ಸಾಹಸದ ಕೆಲಸವನ್ನು ಮಾಡಿದ್ದಾರೆ. ಏನು ಮಾಡಿದ್ದಾರೆ ಗೊತ್ತೇನು : ಬೆಂಗಳೂರಿನ ಚಿಕ್ಕಮಾರನಹಳ್ಳಿಯಲ್ಲಿ ನಿಮ್ಮ ಜನತಾ ನಗರಗಳಲ್ಲಿ ಪಾಪ ಶೆಡ್ಡುಗಳನ್ನು ಹಾಕಿಕೊಂಡಿದ್ದಾರೆ. ಹೆಂಚಿನ ಮನೆಗಳಲ್ಲಿ, ಆ್ಯಸ್‌ಬೆಸ್ಟಾಸ್‌ಷೀಟ್ ಮನೆಗಳಲ್ಲಿ ಜೀವನ ಮಾಡ ತಕ್ಕಂಥವರು, ಕೂಲಿ ನಾಲಿ ಕೆಲಸ ಮಾಡತಕ್ಕಂಥವರು ಏನು ಇದ್ದರು, ಅವುಗಳ ಮೇಲೆ ಬುಲ್‌ಡೋಜರ್ ತೆಗೆದುಕೊಂಡು ಹೋಗಿ ಹೊಡೆದು ನೆಲಸಮ ಮಾಡಿಬಿಟ್ಟರು. ಆಹಾ ಎಂತಹ ಸಾಧನೆ ? ನಿಜವಾಗಿಯೂ ಎಂತಹ ಸಾಧನೆ ನಿಮ್ಮದು? ನಿಮ್ಮ ಸಾಹಸದ ಕೆಲಸ ಹೀಗೆ ನಡೆಯುತ್ತಿದೆ ಯಾರು ಬಡಬಗ್ಗರು, ದೀನದಲಿತರು ಓಟು ಕೊಟ್ಟರೋ ಅವರಿಗೆ ನೆಲೆ ಇಲ್ಲದ ಹಾಗೆ ಮೋಸ ಮಾಡಿದಿರಿ. ಅಲ್ಲಿ ದೀಪ ಇಲ್ಲದ ಹಾಗೆ ಮೋಸ ಮಾಡಿದಂತೆ ಇಲ್ಲಿ ಬುಲ್‌ಡೋಜರ್‌ನಿಂದ ಹೊಡೆದು ಅವರ ಮನೆ, ಗುಡಿಸಲುಗಳನ್ನು ನೆಲಸಮ ಮಾಡಿಬಿಟ್ಟಿರಿ. ಪಾಪ ಅವರಿಗೆ ಆಲ್ಟರ್‌ನೇಟಿವ್ ಆಗಿ ಬೇರೆ ಜಾಗ ಕೊಟ್ಟು ಮಾಡಿದ್ದರೆ ಉಪಯುಕ್ತವಾಗುತ್ತಿತ್ತು. ಅದನ್ನು ಮಾಡಿಲ್ಲ. ಚಿಕ್ಕಮಾರನಹಳ್ಳಿಯಲ್ಲಿ ಪೂರ್ತಿಯಾಗಿ ಮುಗಿಸಿಬಿಟ್ಟಿರಿ, ನಿಮ್ಮ ಬುಲ್‌ಡೋಜರ್‌ಗೆ ಬೆಂಕಿ ಹಾಕುವುದಕ್ಕೆ ಜನ ನಿಂತಿದ್ದರು. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಈ ಅಥಾರಿಟೀಸ್‌ಗಳನ್ನು ಯಾಕೆ ಕ್ರಿಯೇಟ್ ಮಾಡುತ್ತಿದ್ದೀರಿ? ಏನು ಕೆಲಸ ಮಾಡುತ್ತಾರೆ ಇವರು ? ಮೈಸೂರಿನದ್ದು ಏನು ಒಳ್ಳೆಯ ಜಾಗ. ಮಾನಸ ಗಂಗೋತ್ರಿಯ ಹತ್ತಿರ ಬರುತ್ತದೆ. ಬಡವರನ್ನು ಅಲ್ಲಿಂದ ಹೊರಗೆ ದಬ್ಬುತ್ತಾರೆ, ಅಲ್ಲಿ ಇರತಕ್ಕಂಥ ಡೆವಲಪ್‌ಮೆಂಟ್ ಅಥಾರಿಟೀಸ್‌ನವರು ಆ ಜಾಗವನ್ನು ಅಕ್ವೈರ್ ಮಾಡುತ್ತಾರೆ. ಸ್ವಂತ ಜಮೀನಾಗಿದ್ದರೆ ಖರೀದಿ ಮಾಡಿಕೊಳ್ಳುತ್ತಾರೆ. ನಾನು ಕೇಳುತ್ತೇನೆ, ನಿಮ್ಮ ಸರ್ಕಾರ ಬಂದ ಮೇಲೆ ಎಷ್ಟು ಜನ ಬಡವರಿಗೆ ಬೆಂಗಳೂರು ನಗರದ ಒಳಗಡೆ ಎಷ್ಟು ಸೈಟು ಕೊಟ್ಟಿದ್ದೀರಿ ಅದನ್ನು ಪಟ್ಟಿ ಮಾಡಿ ತೋರಿಸುತ್ತೀರಾ? ಹಾಗೆಯೇ ಮಂಗಳೂರು, ಮೈಸೂರು, ಶಿವಮೊಗ್ಗ, ಗುಲ್ಬರ್ಗಾ, ಬಳ್ಳಾರಿ, ಹುಬ್ಬಳ್ಳಿ ಧಾರವಾಡ, ಬೆಳಗಾಂ ಈ ನಗರಗಳ ಬಗ್ಗೆಯೂ ತೋರಿಸುತ್ತೀರಾ ?

ಶ್ರೀ ಡಿ. ಬಸವರಾಜ್.— ಡೆಲ್ಲಿಯಲ್ಲಿ ಸಂಜಯಗಾಂಧಿಯವರು ಬುಲ್‌ಡೋಜರ್ ಹೊಡೆದಾಗ ಮಾನ್ಯ ಬಂಗಾರಪ್ಪನವರು ಏನೂ ಮಾತನಾಡಲಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಸಕಲೇಶಪುರದ ಬಸವರಾಜ್‌ರವರೇ ತಮ್ಮ ಗಮನಕ್ಕೆ ಒಂದೇ ಒಂದು ವಿಚಾರವನ್ನು ತರುತ್ತೇನೆ. ಈಗ ಅಲ್ಲಿ ಬುಲ್‌ಡೋಜರ್ ಹೊಡೆದು ನೆಲಸಮ ಮಾಡಿದ ವಿಚಾರ ಮತ್ತೊಂದು ಇಲ್ಲಿ ಅನೇಕ ಸಾರಿ ಚರ್ಚೆಯಾಗಿ ನಾವು ಮಾತನಾಡಿದ್ದೇವೆ. ಈಗ ನೀವು ಅದನ್ನು ನೋಡಿಕೊಂಡು ಇಲ್ಲಿ ಬುಲ್‌ಡೋಜರ್ ಹಾಕಿ ನೆಲಸಮ ಮಾಡುವುದು ಒಳ್ಳೆಯದು ಎನ್ನುವುದಾದರೆ ನನ್ನ ಅಭ್ಯಂತರ ಏನೂ ಇಲ್ಲ.

ನಿಮಗೆ ಬಿಟ್ಟಿರತಕ್ಕ ವಿಚಾರ. ಬಸವೇಶ್ವರನಗರ ಒಂದೇ ಅಲ್ಲ, ಎಲ್ಲಾ ನಗರಗಳನ್ನೂ ಬುಲ್ಡೋಜರ್ ಹೊಡೆದುಕೊಂಡು ಬನ್ನಿ. ಇದು ನಿಮಗೆ ಬಿಟ್ಟಿದ್ದು. I have no objection. If you justify by comparing the demolition work that was taken up at Delhi with the type of demolitions that are taking place after your Govt. came to power in Karnataka State. I have no objection, Please go on with it. ಇದು ನಿಮ್ಮ ಒಬ್ಬರ ಅಭಿಪ್ರಾಯ ಅಲ್ಲ, ಇನ್ನೂ ಕೆಲವು ಮಾನ್ಯ ಸದಸ್ಯರ ಅಭಿಪ್ರಾಯವೂ ಇದ್ದರೆ, ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಚುನಾವಣೆ ಕಾಲದಲ್ಲಿ ನೀವು ಏನು ಮಾತು ಕೊಟ್ಟಿದ್ದಿರಿ, ಅದಕ್ಕೆ ವಿರುದ್ಧವಾಗಿ ಹೋಗುತ್ತಿದ್ದಿರಿ ಎನ್ನುವ ಮಾತನ್ನು ಅನಿವಾರ್ಯವಾಗಿ ಹೇಳುತ್ತಿದ್ದೇನೆ. ನೀವು ಬೆಂಗಳೂರು ನಗರದಲ್ಲಿ ಎಷ್ಟು ಜನ ಬಡವರಿಗೆ ಸೈಟು ಕೊಟ್ಟಿದ್ದೀರಿ. ರಾಜಾಜಿನಗರ ಎಲ್.ಐ.ಸಿ. ಕಾಲೋನಿಯಲ್ಲಿ ಕೆಲವರು ಗುಡಿಸಲು ಹಾಕಿಕೊಂಡಿದ್ದರು. ಅಲ್ಲಿ ಆ ಬಡಾವಣೆಗೆ ಸಾಣೆಗುರುವನಹಳ್ಳಿ ಎಂದು ಹೇಳುತ್ತಾರೆ. ಆ ಪ್ರದೇಶ

ಬೆಳವಣಿಗೆಯಾಗುತ್ತಾ ಬಂತು. ದೊಡ್ಡವರು, ಆರ್ಥಿಕವಾಗಿ ಮುಂದುವರಿದವರು ಅಲ್ಲಿಗೆ ಕಣ್ಣು ಹಾಕಿದರು. ಅಲ್ಲಿದ್ದ ಗುಡಿಸಲುವಾಸಿಗಳನ್ನು ಓಡಿಸಿದರು. ಯಾವುದೇ ಊರು ಬೆಳವಣಿಗೆಯಾದಂತೆ, ಅದು ಬೆಂಗಳೂರು, ಮೈಸೂರು, ಹುಬ್ಬಳ್ಳಿ ತುಮಕೂರು ಯಾವುದೇ ಆಗಿರಲಿ, ಎಲ್ಲಾ ದೊಡ್ಡ ದೊಡ್ಡ ಪಟ್ಟಣಗಳಿಗೂ ಇದು ಅನ್ವಯವಾಗುತ್ತದೆ. ಅಲ್ಲಿದ್ದ ಬಡವರನ್ನು ದೂರ ಓಡಿಸುತ್ತಾರೆ. ಹೀಗಾಗಿ, ಇವತ್ತು ಬಡವರು ಕೂಲಿ ಮಾಡಬೇಕೆಂದರೆ, ಬಸ್‌ನಲ್ಲಿ ಅಥವಾ ಆಟೋದಲ್ಲಿ ಬರಬೇಕಾಗಿದೆ. ಇದರಿಂದ ಹೆಚ್ಚಿನ ಹಣ ಖರ್ಚಾಗುವುದು ಬಡವರಿಗೇ. ಆರ್ಥಿಕವಾಗಿ ಮುಂದುವರಿದವರು ನಗರದಲ್ಲಿಯೇ ಉಳಿದುಕೊಂಡು ಬಿಡುತ್ತಾರೆ. ಮಾನ್ಯ ಸಚಿವರಿಗೆ ನಾನು ಒಂದು ಸಲಹೆ ಮಾಡುತ್ತೇನೆ. ತಾವು ಹಿಂದೆ ಕೂಡ ಇದೇ ಇಲಾಖೆಯನ್ನು ವಹಿಸಿಕೊಂಡಿದ್ದಿರಿ. Not for the first time you have taken this department under your control I think it is for the second time, you are incharge of this department. ನಾನು, ದಯಮಾಡಿ ಡಿಮ್ಯಾಂಡ್ ಮಾಡುತ್ತೇನೆ. ಇಲ್ಲಿ ಈ ಬಗ್ಗೆ ಒಂದು ಶ್ವೇತಪತ್ರ ಇಡಿ: ನಿಮ್ಮ ಸರ್ಕಾರ ೧೯೮೩ರಲ್ಲಿ ಅಧಿಕಾರಕ್ಕೆ ಬಂದ ಮೇಲೆ ಕರ್ನಾಟಕ ರಾಜ್ಯದಲ್ಲಿರತಕ್ಕ, ಬೆಂಗಳೂರು ನಗರವೂ ಸೇರಿ ಮತ್ತು ಬೇರೆ ಬೇರೆ ನಗರಗಳೂ ಸೇರಿ ಯಾವ ಯಾವ ನಗರಗಳು ಈ ಬಿಲ್ಲಿನಲ್ಲಿ ಬರುತ್ತವೆ, ಆ ನಗರ ಪ್ರದೇಶಗಳಲ್ಲಿ ಎಷ್ಟು ಜನ ಬಡವರಿಗೆ ನಗರದ ಮಧ್ಯದಲ್ಲಿ ಸೈಟುಗಳನ್ನು ಕೊಟ್ಟಿದ್ದೀರಿ ಎಂಬುದನ್ನು ಇಡಿ. ಹಾಗೆಯೇ ಹೊರಗಡೆ ಎಷ್ಟು ಜನರಿಗೆ ಕೊಟ್ಟಿದ್ದೀರಿ ಎಂಬುದನ್ನೂ ಇಡಿ. ಹಾಗೆಯೇ ಮುಂದುವರಿದಿರುವವರಿಗೆ ಎಷ್ಟು ಜನರಿಗೆ ಕೊಟ್ಟಿದ್ದೀರಿ ಎಂಬುದನ್ನೂ ಇಡಿ. ಇವತ್ತು ಜನತಾ ಹೌಸಿಂಗ್ ಸ್ಕೀಮ್ ಪ್ರಕಾರ ಏನೇನು ಕಾನೂನುಗಳು ಇವೆ. ಇದು ಹಳ್ಳಿಗಳ ವ್ಯಾಪ್ತಿ, ಬರುತ್ತದೆ. ಇದು ಪ್ರತ್ಯೇಕವಾದ ವಿಚಾರ. ಈ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ ಇವತ್ತು ಮುನಿಸಿಪಾಲಿಟಿಗಳಿಗೆ ಮತ್ತು ಸಣ್ಣಪುಟ್ಟ ಪಂಚಾಯ್ತಿಗಳಿಗೆ ಯಾವುದೇ ಆರ್ಥಿಕ ಬೆನಿಫಿಟ್ ಇಲ್ಲ. ದಿನಬೆಳಗಾದರೆ. ಆ ಮುನಿಸಿಪಾಲಿಟಿಗಳ ಮತ್ತು ಪಂಚಾಯ್ತಿಗಳ ಮುಖ ತೊಳೆಯುವವರು ಇಲ್ಲ, ಪೌಡರ್ ಹಾಕುವವರೂ ಇಲ್ಲ. ಇವುಗಳು ತನ್ನ ನೌಕರರಿಗೆ ಸಂಬಳ ಕೊಡುವುದಕ್ಕಾಗುತ್ತಾ ಇಲ್ಲ. ಉದಾಹರಣೆಗೆ ನಮ್ಮ ಸೊರಬ ಪಂಚಾಯ್ತಿ ಒಂದು ಸಣ್ಣ ಪಂಚಾಯ್ತಿಯನ್ನೇ ತೆಗೆದುಕೊಳ್ಳಿ. ಅಲ್ಲಿ ಸಂಬಳ ಕೊಡುವುದಕ್ಕೆ ಅವರ ಹತ್ತಿರ ದುಡ್ಡಿಲ್ಲ. ಇದೇ ರೀತಿ ಇನ್ನೂ ನೂರಾರು ಮುನಿಸಿಪಾಲಿಟಿಗಳು ಇವೆ. ಎಲ್ಲವೂ ಇದೇ ರೀತಿ ಆಗಿವೆ. ಹಿಂದೆ ಮುನಿಸಿಪಾಲಿಟಿಗಳವರು ಕಡು ಬಡವರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಗ್ರಾಂಟ್ ಮಂಜೂರಾತಿ ಪದ್ಧತಿ ಇತ್ತು. ಇಂತಹ ಗ್ರಾಂಟ್ ಮಂಜೂರಾತಿ ಬಗ್ಗೆ ನಿಮ್ಮ ಕಾಲದಲ್ಲಿ ಎಷ್ಟು ಮಾಡಿದ್ದೀರಿ ಎಂಬುದನ್ನೂ ನಿಮ್ಮ ಶ್ವೇತ ಪತ್ರದಲ್ಲಿ ಇಡಿ. ನಿಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಎಷ್ಟು ಮನೆಗಳಿಗೆ ಈ ರೀತಿ ಕೊಟ್ಟಿದೆ ಎಂಬುದನ್ನೂ ಹೇಳಿ. ತರೀಕೆರೆ ಮುನಿಸಿಪಾಲಿಟಿಗಳಿಗೆ ನೀವು ಎಷ್ಟು ಮನೆಗಳ ಖರ್ಚು ಕೊಟ್ಟಿದ್ದೀರಿ, ಈ ಖರ್ಚು ಕೊಡುವುದಕ್ಕೆ ಯಾವ ಯೋಜನೆಯನ್ನು ಹಾಕಿಕೊಂಡಿದ್ದೀರಿ ಎಂಬುದೂ ಕೂಡ ಹೊರಗೆ ಬರಬೇಕು. ಮೈಸೂರು ನಗರದಲ್ಲಿ ಆಗಿರತಕ್ಕ ಸೈಟುಗಳ ವಿಲೇವಾರಿ ಬಗ್ಗೆಯೂ ಅವ್ಯವಹಾರ ನಡೆದಿದೆ. ಅಲ್ಲಿ ೫-೬ ಸೈಟು ಇರತಕ್ಕಂಥ ಒಬ್ಬ ಹೋಟೆಲ್ ಮಾಲೀಕನಿಗೆ ೧೨೦x೩೦೦ ಅಡಿ ಸೈಟು ಕೊಟ್ಟಿದ್ದಾರೆ. ಇವೆಲ್ಲದರ ಬಗ್ಗೆಯೂ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು. ಮಾನ್ಯ ಪುಟ್ಟಸ್ವಾಮಿಯವರು ಡಾಕ್ಯುಮೆಂಟ್ ಪ್ರದರ್ಶನ ಮಾಡಿದ್ದಾರೆ ಎಂಬುದೂ ಗೊತ್ತಾಯಿತು.

೩.೩೦ ಪಿ. ಎಂ.

ಸುಮಾರು ಎರಡುನೂರು ಮೂರುನೂರು ಅಡಿ ಸೈಟ್ ಕೊಟ್ಟಿದ್ದಾರೆ. ಈ ರೀತಿಯಾಗಿ ಕೊಡುವುದಕ್ಕೆ ಎಲ್ಲಿದೆ ನಿಮ್ಮ ಕಾನೂನು ? ಹೇಗೆ ಕೊಟ್ಟರು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದಕ್ಕಾಗಿ ಪಾಪ ಮಾನ್ಯ ದೇವೇಗೌಡರು ರಾಜೀನಾಮೆ ಕೊಟ್ಟರು. ಅದು ಮುಖ್ಯಮಂತ್ರಿಗಳ ಹತ್ತಿರ ಇತ್ತು. ಅದನ್ನು ಸ್ವೀಕಾರ ಮಾಡಲಿಲ್ಲ ಎಂದು ವಾಪಸ್ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇದೆಲ್ಲಾ ನಡೆದಿದೆ.

ಶ್ರೀ ಎಸ್. ಬಂಗಾರಪ್ಪ.—ಮೌಲ್ಯಾಧಾರಿತ ರಾಜಕಾರಣದಲ್ಲಿ ಇವೆಲ್ಲಾ ನಡೆಯುತ್ತಿರುತ್ತದೆ. ಇದಕ್ಕೆ ಒಂದು ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು, ಮೈಸೂರು ನಗರವನ್ನು ಒಳಗೊಂಡು

ಎಷ್ಟೆಷ್ಟು ಕಡೆ, ಸೈಟ್ ಇರತಕ್ಕವರಿಗೆ ಸೈಟ್ ಕೊಟ್ಟಿದ್ದೀರಿ ಎಂಬುದರ ಬಗ್ಗೆ ತನಿಖೆಯಾಗಬೇಕು, ಒಂದು ಮನೆಯಲ್ಲಿ ಕರಿಯಪ್ಪ, ಮರಿಯಪ್ಪ ಎಂದು ಇರುತ್ತಾರೆ. ಮರಿಯಪ್ಪನಿಗೆ ಸೈಟ್ ಇದ್ದರೆ, ಕರಿಯಪ್ಪನಿಗೆ ಕೊಡುವುದು. ಕೆಲವು ಸಲ ಮರಿಯಪ್ಪನಿಗೇ ಸೈಟ್ ಇದ್ದರೂ ಎರಡು ಮೂರು ಸೈಟ್ ಕೊಡುವುದು. ನಿಮ್ಮ ಆಡಳಿತ ಬಂದಮೇಲೆ ಇದು ಅವ್ಯಾಹತವಾಗಿ ಸಂಪೂರ್ಣವಾಗಿ ನಡೆದಿದೆ. ಲಂಚಗುಳಿತನದ ಪರಮಾವಧಿಯಲ್ಲಿ ಆಗಬಾರದ ಅನ್ಯಾಯಗಳು ಸಂಪೂರ್ಣವಾಗಿ ಆಗಿವೆ. ಈ ಬಿಲ್ಲನ್ನು ಏತಕ್ಕೆ ನೀವು ತೆಗೆದುಕೊಂಡು ಬರುತ್ತಿದ್ದೀರಿ? ಲಂಚಗುಳಿತನದ ಪ್ರಮಾಣ ಜಾಸ್ತಿ ಮಾಡಿಸಬೇಕು, ಬಂಡವಾಳಶಾಹಿಗಳ ಹೊಟ್ಟೆಗೆ ತೆಗೆದುಕೊಂಡು ಹೋಗಿ ತುಂಬಬೇಕು ಎಂಬ ಉದ್ದೇಶ ಇಟ್ಟುಕೊಂಡು ಇದನ್ನು ಮಾಡಿರುತ್ತೀರಿ ಎಂದು ಈ ಸಂದರ್ಭದಲ್ಲಿ ನಿಮ್ಮ ಮುಂದೆ ಹೇಳುತ್ತಿದ್ದೇನೆ.

ಮಾನ್ಯ ಸಭಾಧ್ಯಕ್ಷರೇ, ಈ ಬಿಲ್‌ಗೆ ಸಂಬಂಧಪಟ್ಟಹಾಗೆ ಇನ್ನೂ ಅನೇಕ ವಿಚಾರಗಳು ಇದ್ದರೂ ಕೂಡಾ, ನೀವು ಇದರಲ್ಲಿ ಒಂದು ಕ್ಲಾಸ್ ಸೇರಿಸಬೇಕಾಗಿತ್ತು. ಯಾವುದೇ ವಿಚಾರ ಇದ್ದರೂ ಕೂಡ ವರ್ಕ್ಸ್ ತೆಗೆದುಕೊಳ್ಳುವಾಗ ಟೆಂಡರ್ ಕರೆಯಲೇಬೇಕು. ಇದರಲ್ಲಿ ಲಕ್ಷಗಟ್ಟಲೆ, ಕೋಟಿಗಟ್ಟಲೆ ಕೆಲವು ವ್ಯವಹಾರಗಳು ಬರುತ್ತವೆ. ಇದರಲ್ಲಿ ನೀವು ಎರಡನ್ನೂ ಕ್ಲಬ್ ಮಾಡಿರುತ್ತೀರಿ. ಸಿಂಗಲ್ ಏಜೆನ್ಸಿ ಕೆಳಗೆ ಎಲ್ಲವನ್ನೂ ನೀವು ತರುತ್ತಿರುವುದರಿಂದ ಬಹಳ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಯಾವುದೇ ವಿಚಾರದಲ್ಲಾದರೂ ಕೂಡಾ ಇದರ ಬಗ್ಗೆ ಎಚ್ಚರಿಕೆ ವಹಿಸಬೇಕು. ಕೆಲವು ಸಲ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್‌ನಲ್ಲಿ ೫೦-೧೦೦ ಮನೆಗಳನ್ನು ತೆಗೆದುಕೊಳ್ಳುತ್ತೀರಿ. ಇದೆಲ್ಲಾ ಏನಿದೆ ಇದು ಟೆಂಡರ್ ಮುಖಾಂತರವೇ ಹೋಗಬೇಕೆಂಬ ಕ್ಲಾಸನ್ನು ಇದರಲ್ಲಿ ನೀವು ಅಳವಡಿಸಬೇಕು. ಇದನ್ನು ಅಳವಡಿಸದಿದ್ದರೆ ಬಹಳ ಕಷ್ಟ. ಇನ್ನೂ ಹೇಳುತ್ತಾ ಹೋದರೆ ಬೇಕಾದಷ್ಟು ಇದೆ. ಈಗಾಗಲೇ ಲಂಚದ ರೂಪದಲ್ಲಿ ಇರತಕ್ಕ ಸರಕಾರದ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಮುಂದುವರಿಯಲಾರೆ. ಇಷ್ಟು ಮಾತ್ರ ನಿಜ, ನಿಜವಾಗಲೂ ಚೊಕ್ಕ ಆಡಳಿತವನ್ನು ಕೊಡತಕ್ಕ ಅಭಿಪ್ರಾಯ ಇಟ್ಟು ಮಾತನಾಡುತ್ತಾ ಇದ್ದೀರಿ. ಆದರೆ ನಿಮ್ಮ ಹತ್ತಿರ ಈಗ ಚಿಕ್ಕ, ಚೊಕ್ಕ ಇದು ಇಲ್ಲ. ಏನಿದ್ದರೂ ಕೂಡಾ ಅದಕ್ಕೆ ಈಗ 'ಅ' ಕಾರವನ್ನು ಸೇರಿಸಿ. ಅ ಚಿಕ್ಕ, ಅ ಚೊಕ್ಕ ಎಂದು ನೆಗೆಟೀವ್ ಫಾರಮ್‌ನಲ್ಲಿ ಹಾಕಬೇಕಾಗಿದೆ ಜನ ಕೊಟ್ಟಿರತಕ್ಕಂಥ ಅಧಿಕಾರವನ್ನು ನೀವು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡಿದ್ದೀರಿ. ನಿಮ್ಮ ಮಾತು ಜನತೆಗೆ ಗೊತ್ತಾಗಿದೆ. ಈ ಅಂಶವನ್ನು ನಿಮ್ಮ ಗಮನಕ್ಕೆ ತರುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷಣಿಯವರೇ, ನಮ್ಮ ಮುಂದೆ ಇರತಕ್ಕಂಥ ಈ ವಿಧೇಯಕದ ಧ್ಯೇಯೋದ್ದೇಶಗಳನ್ನು ಬಹಳ ಸರಳವಾಗಿ ಹೇಳಿದ್ದಾರೆ. ಇವರು ಏನು ಹೇಳಿದ್ದಾರೆಂದರೆ ಅದು ಈ ರೀತಿ ಇದೆ.

> "With a view to speeding up planning and development of land in urban areas in the State it is felt desirable to have for each urban area single agency for performing functions both as a Planning Authority and as Development Authority. Hence, the Bill."

ನಗರ ಹಾಗೂ ಪಟ್ಟಣ ಪ್ರದೇಶಗಳ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಈಗ ಇರತಕ್ಕಂಥ ಎರಡು ಸಂಸ್ಥೆಗಳನ್ನು ಒಟ್ಟು ಮಾಡುವುದು ಈ ಉದ್ದೇಶದಿಂದ ನಗರ ಹಾಗೂ ಪಟ್ಟಣ ಪ್ರದೇಶಗಳ ಅಭಿವೃದ್ಧಿಯನ್ನು ತೀವ್ರಗತಿಯಲ್ಲಿ ತೆಗೆದುಕೊಂಡು ಹೋಗಬಹುದು ಇದು ಸರ್ಕಾರದ ಉದ್ದೇಶ. ಸರ್ಕಾರದ ದೃಷ್ಟಿಯಲ್ಲಿ ಒಂದನೇ ಸಂಸ್ಥೆಯಿಂದ ಅಭಿವೃದ್ಧಿ ಕೆಲಸಕಾರ್ಯಗಳು ಅಷ್ಟು ತೀವ್ರಗತಿಯಲ್ಲಿ ಆಗಿಲ್ಲವೆನ್ನುವುದು ಗಮನಕ್ಕೆ ಬಂದಿದೆ. ಸರ್ಕಾರ ಈ ಅಂಶವನ್ನು ಗಮನಕ್ಕೆ ತೆಗೆದುಕೊಂಡಿರುವುದು ಬಹಳ ಸಂತೋಷದ ವಿಚಾರ ತೀವ್ರಗತಿಯಲ್ಲಿ ಅಭಿವೃದ್ಧಿಯಾಗದೆ ಇರುವುದು ದುಃಖಕರವಾದ ವಿಚಾರವಾದರೂ ತೀವ್ರಗತಿಯಲ್ಲಿ ಆಗದೆ ಇರತಕ್ಕಂಥ ಎಲ್ಲಾ ಅಂಶಗಳನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳುವುದು ಒಂದು ಸಂತೋಷದ ವಿಚಾರವೇ. ತೀವ್ರಗತಿಯಲ್ಲಿ ಅಭಿವೃದ್ಧಿಯಾಗದೆ ಇರುವುದಕ್ಕೆ ಕಾರಣಗಳೇನು ಎನ್ನುವುದನ್ನು ಏನಾದರೂ ಯೋಚನೆ ಮಾಡಿದ್ದೀರಾ? ಒಂದೆ ಈ ಎರಡು ಅಥಾರಿಟಿಗಳನ್ನು ಮಾಡಿದರು. ಈ ಎರಡು ಅಥಾರಿಟಿಗಳನ್ನು ಮಾಡಬೇಕಾದರೆ ತೀವ್ರಗತಿಯಲ್ಲಿ ಆಗಬಹುದು ಎನ್ನುವ ಉದ್ದೇಶದಿಂದಲೇ ಮಾಡಿರಬೇಕು. ಒಂದೇ ಅಥಾರಿಟಿ ಇದ್ದರೆ ತೀವ್ರಗತಿಯಲ್ಲಿ ಅಭಿವೃದ್ಧಿಯಾಗುವು

ದಿಲ್ಲವೆಂದು ಆ ಕಾಲದಲ್ಲಿ ಅವರು ಯೋಚನೆ ಮಾಡಿರಬೇಕು. ಸರ್ಕಾರ ಯಾವುದಾದರೊಂದು ಕೆಲಸ ಮಾಡಬೇಕಾಗಿದ್ದರೂ ಸಹ ಅದನ್ನು ಸರಿಯಾಗಿ ಆಲೋಚನೆ ಮಾಡಿ ಕೆಲಸ ಮಾಡುತ್ತದೆ. ಆಲೋಚನೆ ಮಾಡುವುದಕ್ಕಾಗಿಯೇ ಎಷ್ಟೋ ಜನರನ್ನು ಇಟ್ಟುಕೊಂಡಿದ್ದಾರೆ. ಆಲೋಚನೆ ಮಾಡದೆ ಈ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದಲೇ ಆಗ ಎರಡೂ ಅಥಾರಿಟಿಗಳನ್ನು ಮಾಡಿರಬಹುದು. ಅವರು ಏನಾದರೂ ಒಂದು ಆಲೋಚನೆ ಮಾಡಿಯೇ ಮಾಡಿರುತ್ತಾರೆ. ಈ ಎರಡೂ ಅಥಾರಿಟಿಗಳನ್ನು ಮಾಡಿದ ಮೇಲೆ ಕೆಲಸ ಸಮಗ್ರವಾಗಿ ಆಗಿದೆಯೇ ? ಒಂದು ಅಥಾರಿಟಿಯವರು ಒಂದು ವೈಜ್ಞಾನಿಕ ರೀತಿಯಲ್ಲಿ ಯೋಚನೆ ಮಾಡಿ ಅದಕ್ಕೆ ಬೇಕಾದಂತಹ ಯೋಜನೆಗಳನ್ನು ತಯಾರು ಮಾಡಿ ಆ ಯೋಜನೆಗಳನ್ನು ಕಾರ್ಯಗತ ಮಾಡುವ ಸಲುವಾಗಿ ಒಂದು ಪ್ರಾಧಿಕಾರವನ್ನು ಮಾಡಿದರು. ಆ ಪ್ರಾಧಿಕಾರ ಸಮಗ್ರವಾಗಿ ಕೆಲಸ ಮಾಡದಿದ್ದರಿಂದ ಇನ್ನೊಂದು ಪ್ರಾಧಿಕಾರವನ್ನು ಮಾಡಿದರೆ ಆಗ ಅಭಿವೃದ್ಧಿ ಕೆಲಸ ತೀವ್ರಗತಿಯಲ್ಲಿ ನಡೆಯುತ್ತದೆ ಎಂದು ಹಿಂದಿನವರು ಯೋಚನೆ ಮಾಡಿರಬಹುದು. ಎರಡೂ ರೀತಿಯ ಪ್ರಾಧಿಕಾರಗಳನ್ನು ಮಾಡುವಾಗ ಆಲೋಚನೆ ಮಾಡಿಯೇ ಮಾಡಿರುತ್ತಾರೆ, ಆದರೆ ಮಾನ್ಯ ಮಂತ್ರಿಗಳಲ್ಲಿ ನಾನು ಒಂದು ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಒಂದು ತೀವ್ರಗತಿಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗದೆ ಇರುವುದಕ್ಕೆ ಒಂದೇ ಅಥಾರಿಟಿ ಕಾರಣವೇ ಅಥವಾ ಎರಡು ಅಥಾರಿಟಿಗಳು ಇರುವುದರಿಂದ ತೀವ್ರಗತಿಯಲ್ಲಿ ಅಭಿವೃದ್ಧಿ ಯಾಗಿಲ್ಲವೇ ಅಥವಾ ಎರಡೂ ಸೇರಿಸಿ ಇನ್ನೊಂದು ಪ್ರಾಧಿಕಾರವನ್ನು ರಚನೆ ಮಾಡಿದ್ದರೆ ಆಗ ತೀವ್ರಗತಿಯಲ್ಲಿ ಕೆಲಸವಾಗುತ್ತಿತ್ತೆ. ಈ ಬಗ್ಗೆ ದಯವಿಟ್ಟು ತಿಳಿಸಬೇಕು. ಒಂದು ವೇಳೆ ಅಭಿವೃದ್ಧಿ ಯಾಗಿದೆ ಈ ಅಥಾರಿಟಿಗಳಿಂದ ಎಂದು ಸರ್ಕಾರವೇನಾದರೂ ತಿಳಿದುಕೊಂಡಿದ್ದರೆ ಅದು ಸರ್ಕಾರದ ಭ್ರಮೆ ಎಂದು ನಾನು ಹೇಳಬೇಕಾಗುತ್ತದೆ. ಅಥಾರಿಟಿಗಳನ್ನು ಜಾಸ್ತಿ ಮಾಡುವುದರಿಂದ ಆಗಲಿ ಅಥವಾ ಕಡಿಮೆ ಮಾಡುವುದರಿಂದ ಆಗಲಿ ಒಂದು ಅಥಾರಿಟಿ ಇದ್ದದ್ದನ್ನು ಎರಡು ಮಾಡುವುದರಿಂದ ಆಗಲಿ, ಎರಡು ಇದ್ದದ್ದನ್ನು ಒಂದು ಅಥಾರಿಟಿ ಮಾಡುವುದರಿಂದಾಗಲಿ ಎರಡೂ ಅಥಾರಿಟಿಗಳನ್ನು ಸೇರಿಸಿ ಮೂರನೇ ಅಥಾರಿಟಿ ಮಾಡುವುದರಿಂದ ಆಗಲಿ ಸಮಸ್ಯೆ ಬಗೆಹರಿಸಿದಂತೆ ಆಗುವುದಿಲ್ಲ. ಸರ್ಕಾರ ಯಾವಾಗಲೂ ಕೂಡ ಸಮಸ್ಯೆಯ ನೈಜ ಸ್ವರೂಪವನ್ನು ಅರ್ಥಮಾಡಿಕೊಂಡು ಆ ಬಗ್ಗೆ ಚಿಂತನೆಯನ್ನು ಮಾಡಬೇಕು. ಮೇಲ್ನೋಟಕ್ಕೆ ಯಾವುದಾದರೊಂದು ರೋಗ ಕಂಡು ಬಂದರೆ ಆ ರೋಗಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಬೇಕು. ಅದು ಬಿಟ್ಟು ನಮ್ಮ ಹತ್ತಿರ ಇರತಕ್ಕಂಥ ಔಷಧಿಯನ್ನೇ ರೋಗಕ್ಕೆ ಕೊಟ್ಟರೆ ಆ ರೋಗ ಗುಣಮುಖವಾಗುವುದಿಲ್ಲ. ಇರತಕ್ಕಂಥ ಖಾಯಿಲೆ ಗುಣಮುಖವಾಗುವುದಿಲ್ಲ. ಎಲ್ಲಾ ಖಾಯಿಲೆಗಳಿಗೂ ಒಂದೇ ಬ್ರ್ಯಾಂಡ್ ಔಷಧಿಯನ್ನು ಕೊಟ್ಟರೆ ಖಾಯಿಲೆ ಹೇಗೆ ವಾಸಿಯಾಗುತ್ತದೆ ? ಒಂದು ಅಥಾರಿಟಿಯನ್ನು ತೆಗೆದು ಎರಡು ಮಾಡಿದರೂ ಆಗುವುದಿಲ್ಲ ಎರಡು ಅಥಾರಿಟಿ ಇದ್ದದ್ದನ್ನು ತೆಗೆದು ಒಂದು ಮಾಡಿದರೂ ಆಗುವುದಿಲ್ಲ. ಈಗ ಬೆಂಗಳೂರು ನಗರದಲ್ಲಿ ನಾನಾ ರೀತಿಯ ಅಥಾರಿಟಿಗಳನ್ನು ಮಾಡಿದ್ದೀರಿ ಬಿ.ಡಿ.ಎ. ಇದೆ, ಕಾರ್ಪೊರೇಷನ್ ಇದೆ. ಕೊಳಚೆ ನಿರ್ಮೂಲನ ಮಂಡಲಿ ಇದೆ. ಡ್ರೈನೇಜ್ ಬೋರ್ಡ್ ಇದೆ. ಇವೆಲ್ಲಾ ಸೇರಿಸಿ ಒಂದು ಮೆಟ್ರೋಪಾಲಿಟನ್ ಸಿಟಿ ಎಂದು ಬೇರೆ ಮಾಡಿಕೊಂಡಿದ್ದೀರಿ. ಈ ಮೆಟ್ರೋಪಾಲಿಟನ್ ಅಥಾರಿಟಿ ಎಲ್ಲಿದೆಯೋ ನನಗಂತೂ ಗೊತ್ತಿಲ್ಲ. ಯಾವ ನರ್ಸಿಂಗ್ ಹೋಮ್‌ನಲ್ಲಿ ಹೋಗಿ ಸೇರಿಕೊಂಡಿದೆಯೋ ಗೊತ್ತಿಲ್ಲ. ಈ ಮೆಟ್ರೋಪಾಲಿಟನ್ ಅಥಾರಿಟಿಯಲ್ಲಿ ಒಂದು ಆಹ್ವಾನ ಮಾಡಿದ್ದಾರೆ. ಅದೇನೆಂದರೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ತೀರ್ಮಾನವಾದಂಥಾದ್ದನ್ನು ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳ ಮುಂದೆ ಅಪೀಲು ಹಾಕಬಹುದೆಂದು. ಇದನ್ನು ಕಾನೂನು ಪಂಡಿತರು ಹೇಳಿ ಮಾಡಿಸಿದ್ದಾರೆ. ನಾನು ಸರ್ಕಾರವನ್ನು ಕೇಳಬಯಸುವುದಿಷ್ಟೇ, ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳದೇ ಕೇವಲ ಒಂದಿದ್ದ ಅಥಾರಿಟಿಯನ್ನು ಎರಡು ಮಾಡುವುದು ಎರಡು ಇದ್ದ ಅಥಾರಿಟಿಯನ್ನು ಒಂದು ಮಾಡುವುದ ರಿಂದ ಏನೂ ಪ್ರಯೋಜನವಾಗುವುದಿಲ್ಲ. ಎರಡು ಇದ್ದ ಅಥಾರಿಟಿಯನ್ನು ಒಂದು ಮಾಡುವುದರಿಂದ ಸ್ವಲ್ಪ ಗೊಂದಲ ಕಡಿಮೆ ಆಗಬಹುದೆಂಬ ದೃಷ್ಟಿಯಿಂದ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಏತಕ್ಕೆ ಸಮಸ್ಯೆಗಳು ಬರುತ್ತವೆಂದು ಮೊದಲು ಯೋಚನೆ ಮಾಡಬೇಕು ನಗರ ಪ್ರದೇಶಗಳಿಗೆ ಜನಗಳು ವಲಸೆ ಬರುವುದು ಜಾಸ್ತಿಯಾಗುತ್ತಿದೆ, ಯಾವುದೇ ನಗರ ಪ್ರದೇಶವಾಗಲೀ, ಬೆಳಗಾಂ ತೆಗೆದುಕೊಳ್ಳಿ, ಹುಬ್ಬಳ್ಳಿ ತೆಗೆದುಕೊಳ್ಳಿ, ಧಾರವಾಡ ತೆಗೆದುಕೊಳ್ಳಿ, ಶಿವಮೊಗ್ಗ ತೆಗೆದುಕೊಳ್ಳಿ ಹೀಗೆ ಎಲ್ಲಾ ನಗರ ಪ್ರದೇಶಗಳಿಗೂ ಜನರ ವಲಸೆ ಜಾಸ್ತಿಯಾಗುತ್ತಿದೆ. ಜನರಿಗೆ ವಸತಿಯ ಅವಶ್ಯಕತೆ ಬಹಳ ಇದೆ. ಜನ ಸಂಖ್ಯೆ ಒತ್ತಡ ಜಾಸ್ತಿಯಾಗುತ್ತಿದ್ದ ಹಾಗೆ ವಸತಿಯ ಪ್ರಮಾಣವೂ ಜಾಸ್ತಿಯಾಗಬೇಕು ಎಲ್ಲಾ ಜನರೂ

ಫುಟ್‌ಪಾತ್ ಮೇಲೆ ಜೀವನ ಮಾಡುವುದಕ್ಕಾಗುವುದಿಲ್ಲ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡಿರತಕ್ಕ ವ್ಯಕ್ತಿಯೊಬ್ಬ, ತಾನು ಎಲ್ಲಾದರೂ ಒಂದು ಕಡೆ ಒಂದು ಗುಡಿಸಲನ್ನಾದರೂ ಹಾಕಿಕೊಳ್ಳೋಣ ಎನ್ನುವ ಮನೋಭಾವನೆಯನ್ನು ಹೊಂದಿರುತ್ತಾನೆ. ಮೊದಲು ಫುಟ್‌ಪಾತ್ ಮೇಲೆ ವಾಸಮಾಡುತ್ತಿದ್ದ ಮನುಷ್ಯ ಎಲ್ಲಾದರೂ ಸರ್ಕಾರದ ಜಮೀನಿದ್ದರೆ ಅಲ್ಲಿಗೆ ಹೋಗಿ ಒಂದು ಸಣ್ಣ ಮಾಡು ಕಟ್ಟಿಕೊಳ್ಳುತ್ತಾನೆ ಕ್ರಮೇಣ ಅಲ್ಲಿ ಗೋಡೆ ಎಬ್ಬಿಸಿಕೊಳ್ಳುತ್ತಾ ಹೋಗುತ್ತಾನೆ. ಇದು ಮನುಷ್ಯನ ಸ್ವಾಭಾವಿಕ ಚಟುವಟಿಕೆಯಾಗಿದೆ. ಪಶುಪಕ್ಷಿಗಳೇ ಈ ರೀತಿಯ ಚಟುವಟಿಕೆಯಲ್ಲಿ ತೊಡಗುತ್ತವೆ ಎಂದರೆ ಮನುಷ್ಯ ಮಾಡುವುದು ಸಹಜವಾದುದೇ ಆಗಿದೆ. ಯಾವುದೇ ಮನುಷ್ಯನಾಗಿರಲಿ, ಅವನು ತನಗೆ ಒಂದು ಗೂಡು ಇರಬೇಕು, ಎಲ್ಲೋ ಒಂದು ಬೆಚ್ಚಗೆ ಇರಬೇಕೆಂದು ಬಯಸುತ್ತಾನೆ. ಈ ರೀತಿ ಬಯಸುವುದರಲ್ಲಿ ತಪ್ಪೇನಿಲ್ಲ ಮನುಷ್ಯನ ಜೀವನಕ್ಕೆ ಸೌಕರ್ಯಗಳನ್ನು ಕಲ್ಪಿಸುವುದಕ್ಕೋಸ್ಕರವೇ ಸರ್ಕಾರ ಇರುವುದು. ನಮ್ಮ ಆಟ್‌ಟೋಪಗಳಿಗೆ ಅಲ್ಲ. ಮನುಷ್ಯನ ಅವಶ್ಯಕತೆಗಳನ್ನು ಸರ್ಕಾರ ಪೂರೈಕೆ ಮಾಡಬೇಕು ಮೊದಲು ಮುನಿಸಿಪಾಲಿಟಿ ಎಂದು ಒಂದೇ ಒಂದು ಅತಾರಿಟಿ ಇದ್ದು ಅದು ಸೈಟುಗಳನ್ನು ಫಾರ್ಮ್ ಮಾಡಿ ಜನಗಳಿಗೆ ಹಂಚುತ್ತಿತ್ತು, ಆಗ ಸಾಕಷ್ಟು ಸುಲಭವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು ಬರಬರುತ್ತಾ ನಗರ ಪ್ರದೇಶಗಳಲ್ಲಿ ಬೇರೆ ಬೇರೆ ಅತಾರಿಟಿಗಳು ಹುಟ್ಟಿಕೊಂಡವು ನಗರ ಪ್ರದೇಶಗಳಲ್ಲಿ ಬಿಲ್ಡಿಂಗ್‌ಗಳು ಸರಿಯಾದ ರೀತಿಯಲ್ಲಿ ಕಟ್ಟುವಂತಾಗಬೇಕು ವ್ಯವಸ್ಥಿತವಾದ ರೀತಿಯಲ್ಲಿ ನಗರವನ್ನು ಬೆಳೆಸಬೇಕೆಂದು ಈ ಅತಾರಿಟಿಗಳು ಕೆಲಸ ಮಾಡುವುದಕ್ಕೆ ಪ್ರಯತ್ನಪಡುತ್ತಿವೆ ವ್ಯವಸ್ಥಿತವಾಗಿ ನಗರವನ್ನು ಕಟ್ಟಬೇಕಾದರೆ ಮೂಲಭೂತವಾಗಿ ಅವ್ಯವಸ್ಥೆಯನ್ನು ಮೊದಲು ತಪ್ಪಿಸಬೇಕು. ಎಲ್ಲಿಯವರೆಗೆ ಜನರ ಒತ್ತಡ ಏರಿದಂತೆ ವಸತಿಗಳನ್ನು ಅಷ್ಟೇ ವೇಗದಿಂದ ಕಾರ್ಯಗತ ಮಾಡುವುದಿಲ್ಲವೋ ಅಲ್ಲಿಯವರೆಗೂ ಸಮಸ್ಯೆಗಳು ಇತ್ಯರ್ಥವಾಗುವುದಿಲ್ಲ ನೀವು ವಸತಿಗಳನ್ನು ಮಾಡುತ್ತಿರುವ ವೇಗ ಆಮೆ ನಡೆಗೆಯಂತಿದೆ. ಜನ ವಸತಿ ಒತ್ತಡ ನೋಡಿದರೆ ಭಯಂಕರ ಸ್ವರೂಪದಲ್ಲಿದೆ. ಹೀಗಾದರೆ ನಿಮ್ಮ ಯೋಜನೆಯಿಂದ ಏನು ಪ್ರಯೋಜನವಾಗುತ್ತದೆ ? ನನ್ನ ಕ್ಷೇತ್ರದ ಶಿವಮೊಗ್ಗದಲ್ಲಿ ಸಿ.ಐ.ಟಿ.ಬಿ ಇದೆ ನಾನು ಶಾಸಕನಾದ ಮೇಲೆ ಸ್ವತ: ಒಂದು ಸಮೀಕ್ಷೆಯನ್ನು ಮಾಡಿಸಿದೆ ಒಂದು ಪ್ರಾಪರ್ ಫಾರ್ಮ್ ಪ್ರಿಂಟ್ ಮಾಡಿಸಿ ಎಲ್ಲರಿಗೂ ಹಂಚಿದೆವು. ಸೈಟ್ ಇಲ್ಲದೇ ಇರತಕ್ಕಂಥವರು ೨೦ ಸಾವಿರ ಜನರು ನಮಗೆ ಈಗ ಸೈಟ್ ಕೊಟ್ಟರೆ ತೆಗೆದುಕೊಳ್ಳುತ್ತೇವೆಂದು ಹೇಳಿದರು ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ಶಿವಮೊಗ್ಗದ ಸಿ ಐ.ಟಿ.ಬಿ.ಯು ವಿತರಣೆ ಮಾಡಿರುವ ಸೈಟುಗಳ ಸಂಖ್ಯೆ ಕೇವಲ ೬೩೭ ಮಾತ್ರ. ಇಡೀ ೧೨ ವರ್ಷದಲ್ಲಿ ಕೇವಲ ೬೩೭ ಸೈಟುಗಳನ್ನು ಹಂಚುವುದಕ್ಕೆ ಒಂದು ಅತಾರಿಟಿಯನ್ನು ಮಾಡಿ ಅದಕ್ಕೆ ಒಬ್ಬ ಚೇರ್ಮನ್, ಆಫೀಸ್, ಚೇರ್ಮನ್‌ಗೆ ಕಾರು ಬಂಗಲೇ ಎಲ್ಲವನ್ನು ಕೊಡಲಾಗಿತ್ತು ಈ ಸಿ.ಐ.ಟಿ.ಬಿ ಜೊತೆಗೆ ಒಂದು ಪ್ಲಾನಿಂಗ್ ಅತಾರಿಟಿ ಕೂಡ ಇದೆ. ಈ ಸಿ.ಐ.ಟಿ.ಬಿ ಮತ್ತು ಪ್ಲಾನಿಂಗ್ ಅತಾರಿಟಿಯವರು ಸೇರಿಕೊಂಡು ೨೦ ಸಾವಿರ ಸೈಟುಗಳ ಅವಶ್ಯಕತೆ ಇರುವ ಜಾಗದಲ್ಲಿ ಕೇವಲ ಎಂಟುನೂರು ಚಿಲ್ಲರೆ ಸೈಟುಗಳನ್ನು ಮಾತ್ರ ಮಾಡಿದ್ದಾರೆ. ಪ್ಲಸ್ ಇಂಟು ಪ್ಲಸ್ ಪ್ಲಸ್ ಆಗುತ್ತದೆ, ಮೈನಸ್ ಇಂಟು ಮೈನಸ್ ಪ್ಲಸ್ ಆಗುತ್ತದೆ. ಆದರೆ, ಪ್ಲಸ್ ಇಂಟು ಮೈನಸ್ ಮೈನಸ್ ಮಾತ್ರ ಆಗುತ್ತದೆ ಇದು ಯಾವ ಕೋಷ್ಟಕದಲ್ಲಿ ಹೋದರೂ ಇದೇ ಲೆಕ್ಕ ಬರುತ್ತದೆ, ಈ ಎರಡು ಅತಾರಿಟಿಗಳನ್ನು ಸೇರಿಸಿದರೆ ಪರಿಣಾಮ ನೆಟ್ಟಗೆ ಆಗುತ್ತದೆಂದು ಹೇಳಿದರೆ ಆಗುವುದಿಲ್ಲ. ಇಷ್ಟೆಲ್ಲಾ ದೊಡ್ಡ ಬಿಲ್ ಮಾಡಿಬಿಟ್ಟುಬಿಡುತ್ತೀರಿ. ಇವರು ಸ್ಕೀಮ್‌ಗಳನ್ನು ಮಾಡಿ, ಅದು ಸರಕಾರದಿಂದ ಅಪ್ರೂವ್ ಆಗಿ, ಅದು ಹೋಗಿ ಆ ಲ್ಯಾಂಡ್ ಆಕ್ವೈರ್ ಮಾಡಿ ಎಲ್ಲಾ ದೊಡ್ಡ ದೊಡ್ಡ ರಾಜಮಾರ್ಗಗಳು ಒಂದು ಕಡೆ ಆದರೆ ಚರಂಡಿ ಹಿಂದೆ ಮುಂದೆ ಜಾಗ ಇಲ್ಲದ ಕಡೆಗಳಲ್ಲಿ ಜನ ಮನೆ ಕಟ್ಟಿಕೊಂಡು ಹೋಗುತ್ತಾ ಇರುತ್ತಾರೆ. ಇನ್ನೊಂದು ಕಡೆಯಲ್ಲಿ ಸ್ಕೀಮ್‌ಗಳ ಮೇಲೆ ಸ್ಕೀಮ್‌ಗಳು ತಯಾರಾಗುತ್ತಾ ಇರುತ್ತವೆ. ಅದರಲ್ಲಿ ರಾಜಬೀದಿ ೧೦೦ ಅಡಿಗಳು ರಸ್ತೆ ೫೦ ಅಡಿಗಳು, ಚರಂಡಿ ೧೦ ಅಡಿಗಳು, ವಿಶಾಲವಾದಂತಹ ಜಾಗದಲ್ಲಿ ಸ್ಟೇಡಿಯಂ ಹೀಗೆ ಇವರು ಸ್ಕೀಮ್‌ಗಳನ್ನು ಮಾಡುತ್ತಾ ಕುಳಿತುಕೊಂಡರೆ, ಆನಂತರ ಇವರು ಸೈಟುಗಳನ್ನು ಯಾರಿಗೆ ಕೊಡಬೇಕು ? ಇವೊತ್ತು ನಾನು ಹೇಳುತ್ತಾ ಇರತಕ್ಕಂಥಾದ್ದು ಏನೆಂದರೆ ಸುಮಾರು ೨೦ ಸಾವಿರ ಜನರು ದುಡ್ಡುಕೊಟ್ಟು ಸೈಟ್ ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲದಿರತಕ್ಕಂಥ ಜನ ಒಂದು ಸಾವಿರ ರೂಪಾಯಿಗಳಿಗೆ ಸೈಟು ಸಿಗುತ್ತದೆ ಆದರೆ, ತಮ್ಮಲ್ಲಿ ದುಡ್ಡು ಇಟ್ಟಿರತಕ್ಕಂಥ ಎಲ್ಲಾ ಹಣವನ್ನು ಬಂಡವಾಳ ಹೂಡಿ ಸೈಟ್ ತೆಗೆದುಕೊಳ್ಳುವುದಕ್ಕೆ ಅವರಲ್ಲಿ ಸಾಮರ್ಥ್ಯ ಇರುತ್ತದೆಯೇ ಹೊರತು ನೀವು ೧೦-೧೫-೨೦-೫೦ ಸಾವಿರ ರೂಪಾಯಿಗಳಿಗೆ ಒಂದು ಸೈಟ್ ಕೊಟ್ಟರೆ ಅವರಿಗೆ ಸೈಟ್ ತೆಗೆದುಕೊಳ್ಳುವ ಶಕ್ತಿ ಬರುವ ಸಾಧ್ಯತೆಯೇ ಇಲ್ಲ. ಇಂತಹ ಜನಗಳಿಂದಲೇ ಅವ್ಯವಹಾರ ಕ್ರಿಯೇಟ್

ಆಗುತ್ತಾ ಇರುವುದು. ಈ ಅವ್ಯವಸ್ಥೆ ಏತಕ್ಕೆ ಕ್ರಿಯೇಟ್ ಆಗುತ್ತದೆ ? ಅವರಿಗೆ ಬೇಕಾದಂತಹ ಯಾವುದೇ ವ್ಯವಸ್ಥೆ ಇಲ್ಲದೇ ಇರುವುದರಿಂದ ಹೀಗಾಗುತ್ತದೆ. ನಿಜವಾದಂತಹ ಬಡ ಮನುಷ್ಯನಿಗೆ ನಿವೇಶನವನ್ನು ಕೊಡುವುದಕ್ಕೆ ಯಾವುದೇ ವ್ಯವಸ್ಥೆಯನ್ನು ರೂಪಿಸಿಲ್ಲವಾದ ಕಾರಣದಿಂದಾಗಿ ಅವ್ಯವಸ್ಥೆ ಬೆಳೆಯುತ್ತಾ ಇದೆ. ಇವೊತ್ತು ಸಿಐಟಿಬಿಯವರ ಸೈಟ್ ಯಾರಿಗೆ ಸಿಗುತ್ತದೆ ? ಎಷ್ಟು ಜನ ಬಡವರಿಗೆ ಇವುಗಳು ಸಿಗುತ್ತಿವೆ ? ನಾನು ಹೇಳಿದ ೬೪೭ ಸೈಟ್‌ಗಳನ್ನು ಶಿವಮೊಗ್ಗದಲ್ಲಿ ಮಾರಿರತಕ್ಕಂಥಾದ್ದರಲ್ಲಿ ಒಂದು ಸೈಟ್ ಇದ್ದವರು ೨-೩ ಸೈಟ್‌ಗಳನ್ನು ಮಾಡಿಕೊಂಡಿರುವ ನಿದರ್ಶನಗಳು ಇವೆಯೇ ಹೊರತು, ಬೇರೆಯವರು ಅಂದರೆ, ಬಡವರು ನಿಜವಾಗಿಯೂ ಯಾವ ಬಡಜನರಿಗೂ ಇದನ್ನು ತೆಗೆದುಕೊಳ್ಳುವ ಸಾಮರ್ಥ್ಯ ಬಂದಿಲ್ಲ ಅಂತೆಯೇ ನೀವು ಹರಾಜು ಮಾಡುತ್ತೀರಿ. ಹರಾಜಿನಲ್ಲಿ ಯಾರು ಬೇಕಾದರೂ ತೆಗೆದುಕೊಳ್ಳಬಹುದು. ನಿವೇಶನ ಇರತಕ್ಕಂತಹವರು ತಮ್ಮ ಬಂಡವಾಳವನ್ನು ಹೆಚ್ಚಿಗೆ ಮಾಡುವುದಕ್ಕಾಗಿ ತೆಗೆದುಕೊಳ್ಳುತ್ತಾರೆಯೇ ಹೊರತು ಇತರ ಯಾರಿಗೆ ಈ ಸೈಟ್‌ಗಳು ದಕ್ಕಿವೇ ? ಅಂದರೆ ಯಾರು ಸೈಟ್‌ಗಳ ಮೇಲೆ ಇನ್‌ವೆಸ್ಟ್ ಮಾಡಿ ದುಡ್ಡನ್ನು ಮಾಡಬಹುದು ಎಂದು ತೆಗೆದುಕೊಳ್ಳುತ್ತಾರೆ ಅವರಿಗೆ ಸಿಗುತ್ತದೆ. ಇದನ್ನು ಬಿಟ್ಟರೆ ಯಾರು ಮನೆಕಟ್ಟುವುದಕ್ಕೆ ನಿವೇಶನ ಇಲ್ಲದೇ ಒದ್ದಾಡುತ್ತಾ ಇದ್ದಾರೆ, ಯಾರು ನಿವೇಶನ ಕೊಂಡುಕೊಳ್ಳುವುದಕ್ಕೆ ಕೂಡ ಹಣ ಇಲ್ಲದೇ ಒದ್ದಾಡುತ್ತಾ ಇದ್ದಾರೆ ಅಂತಹವರಿಗೆ ಸೈಟ್ ಸಿಗಲಿಲ್ಲ. ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ರೂಪಿಸದ ಹೊರತು ಇಂತಹ ಬಡವರಿಗೆ ಸಿಗುವುದು ಸಾಧ್ಯವಿಲ್ಲ. ಅದಕ್ಕಾಗಿ ಅಂತಹ ಒಂದು ವ್ಯವಸ್ಥೆಯನ್ನು ಶೀಘ್ರದಲ್ಲಿಯೇ ಮಾಡಬೇಕು. ಶಿವಮೊಗ್ಗ ನಗರದಲ್ಲಿ ೨೦ ಸಾವಿರ ಸೈಟ್‌ಗಳಿಗೆ ಇವೊತ್ತು ಬೇಡಿಕೆ ಇದೆ ಇದು ೪೦ ಸಾವಿರಕ್ಕೆ ಏರುವ ಹೊತ್ತಿಗೆ ನಿಮ್ಮ ಸಿಐಟಿಬಿಯವರು ೫ ಸಾವಿರ ಸೈಟ್‌ಗಳನ್ನು ಹಂಚಿದರೆ ಅದರಿಂದ ಬಂದ ಭಾಗ್ಯವಾದರೂ ಏನು ? ಇದು ೪೦ ಸಾವಿರಕ್ಕೆ ಏರುವ ಹೊತ್ತಿಗೆ ನಿಮ್ಮ ಸಿಐಟಿಬಿಯವರು ಮತ್ತು ಪ್ಲಾನಿಂಗ್ ಅಥಾರಿಟಿಯವರು ಸೇರಿಕೊಂಡು ಒಟ್ಟಿಗೆ ೫ ಸಾವಿರ ಸೈಟ್‌ಗಳನ್ನು ಮಾಡಿ ಹಂಚುವುದರಿಂದ ಯಾವ ಪ್ರಯೋಜನವೂ ಇಲ್ಲ ಎಂದು ಹೇಳಬೇಕಾಗುತ್ತದೆ, ಒಂದು ವರ್ಷದಲ್ಲಿ ೨೦ ಸಾವಿರ ಸೈಟ್‌ಗಳನ್ನು ಮಾಡಿ ಮುಗಿಸಿಬಿಟ್ಟು, ಮುಂದೆ ಯಾರಾದರೂ ಮನೆ ಕಟ್ಟುವ ಸಂದರ್ಭ ಇದ್ದರೆ. ನಮ್ಮ ಲೇಔಟ್ ರೆಡಿ ಇದೆ, ಎನ್ನತಕ್ಕಂಥ ಸ್ಥಿತಿಗೆ ನಾವು ಮುಟ್ಟಿದರೆ, ಅದು ರೇಸಿಂಗ್ ಎಗೈನ್ಸ್ಟ್ ದಿ ನೀಡ್ ಆಗುತ್ತದೆ. ಜನ ವಸತಿಯು ಒತ್ತಡ ಹೇಗೆ ಬೆಳೆಯುತ್ತದೆ ಅದಕ್ಕಿಂತ ವೇಗವಾದಂತಹ ಗತಿಯಲ್ಲಿ ನಾವೂ ಕೆಲಸ ಮಾಡಿದರೆ ಅದನ್ನು ತಡೆಯಲಿಕ್ಕೆ ಆಗುತ್ತದೆಯೇ ಹೊರತು, ನಾವು ಒಳ್ಳೆಯ ಆಮೆಯ ವೇಗದಲ್ಲಿ ಹೋದರೆ ಅದು ಮಿಂಚಿನ ವೇಗದಲ್ಲಿ ಬೆಳೆಯುತ್ತಾ ಇದೆ. ಇಂತಹ ಸಂದರ್ಭದಲ್ಲಿ ನಮಗೆ ಅವ್ಯವಸ್ಥೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಬರೇ ಒಂದು ಅತಾರಿಟಿ ಮಾಡುವುದು, ಮತ್ತು ಅದನ್ನು ಎರಡು ಮೂರು ಎಂದು ಹೆಚ್ಚಿಸುವುದು ಪ್ರಯೋಜನವಾಗುವುದಿಲ್ಲ ಇದರಿಂದ ಅತಾರಿಟಿ ಎಂದರೆ ಏನು ಎಂಬುದೇ ಗೊತ್ತಾಗುವುದಿಲ್ಲ. ಎಲ್ಲದಕ್ಕೂ ಒಂದೊಂದು ಅತಾರಿಟಿಯನ್ನು ಮಾಡಿಬಿಟ್ಟಿದ್ದಾರೆ. ಈ ಎಲ್ಲಾ ಅತಾರಿಟಿಗಳಿಂದಾಗಿ ಒಂದು ರೀತಿಯಲ್ಲಿ ಗೊಂದಲ ಉಂಟಾಗಿದೆಯೇ ಹೊರತು ಬೇರೆ ಯಾವ ಸಾಧನೆ ಆಗಿಲ್ಲ ಎಂದು ಹೇಳಬೇಕಾಗುತ್ತದೆ ಯಾರಿಗೆ ಯಾರ ಅತಾರಿಟಿ ಇಲ್ಲವಾಗಿದೆ. ಸಿಐಟಿಬಿಯವರು ಅತಾರಿಟಿ ನಮಗೆ ಇದೆ ಎಂದು ಪರವಾನಿಗೆ ಕೊಟ್ಟರೆ ಪ್ಲಾನಿಂಗ್‌ನವರು ನಮಗೂ ಇದೆ ಎಂದು ತಂದು ನಿಲ್ಲಿಸುತ್ತಾರೆ ಇಬ್ಬರು ಕೊಟ್ಟರೆ ಅದು ಸರಕಾರಕ್ಕೆ ಹೋಗುತ್ತದೆ ಮತ್ತೆ ಸರಕಾರದಿಂದ ಅದು ತಿರುಗಿ ಅಲ್ಲಿಗೇ ಬರುತ್ತದೆ ಇದನ್ನು ಬಿಟ್ಟರೆ ಯಾವುದೇ ವಿಷಯ ಒಂದು ತೀರ್ಮಾನಕ್ಕೆ ಬರುವುದಿಲ್ಲ. ಈ ರೀತಿಯಲ್ಲಿ ಅತಾರಿಟಿಗಳನ್ನು ಮಾಡಿದ್ದೀರಿ. ನಿಮ್ಮ ಉದ್ದೇಶ ಒಳ್ಳೆಯ ಅತಾರಿಟಿಗಳನ್ನು ತಯಾರು ಮಾಡಬೇಕೆಂದಾಗಿದೆ. ಇದರಲ್ಲಿ ಎಲ್ಲಾ ಡಿಪಾರ್ಟ್‌ಮೆಂಟ್‌ನವರನ್ನು ಹಾಕಿದ್ದೀರಿ. ಅದು ಏತಕ್ಕೆಂದು ನನಗೆ ಗೊತ್ತಿಲ್ಲ ಪೋಲೀಸ್ ಸೂಪರಿಂಟೆಂಡೆಂಟ್‌ರವರನ್ನು ಕೂಡ ಅದರಲ್ಲಿ ಹಾಕಿದ್ದೀರಿ. ಅವರಿಗೆ ಮೊದಲೇ ಬೇಕಾದಷ್ಟು ಕೆಲಸಗಳಿದ್ದು ಅದನ್ನೆ ಮಾಡುವುದಕ್ಕೆ ಆಗುತ್ತಿಲ್ಲ, ಇದೊಂದು ಬೇರೆ ಕೆಲಸ ಅವರಿಗೆ ಹೀಗೆ ಎಲ್ಲಾ ಇಲಾಖಾ ಅಧಿಕಾರಿಗಳನ್ನು ಇದರಲ್ಲಿ ಹಾಕುವುದರ ಹಿಂದೆ ಏನೋ ಒಂದು ಫಿಲಾಸಫಿ ಇರಬೇಕು. ಅಂದರೆ ಈ ಆತಾರಿಟಿಯಲ್ಲಿ ಅವರವರ ಇಲಾಖೆಗೆ ಸಂಬಂಧಪಟ್ಟಂತಹ ಯಾವುದೇ ವಿಚಾರಗಳು ಬಂದಾಗ ಆ ವಿಚಾರಗಳ ಬಗ್ಗೆ ತಮ್ಮ ಒಂದು ಇಲಾಖೆಯ ಅಭಿಪ್ರಾಯವನ್ನು ಅಲ್ಲಿ ಇಡುವುದಕ್ಕೆ ಅವರಿಗೆ ಅವಕಾಶವಾಗಲಿ ಎಂದು ಹೀಗೆ ಮಾಡಿರಬಹುದು. ಇಲೆಕ್ಟ್ರಿಸಿಟಿ ಬೋರ್ಡ್‌ನವರು ಮುನ್ಸಿಪಾಲಿಟಿಯವರು, ಪಿಡಬ್ಲ್ಯುಡಿಯವರು ಹೀಗೆ ಎಲ್ಲಾರೂ ಒಂದು ಕಡೆ ಸೇರಿಕೊಂಡು ತಮ್ಮ ಒಂದು ಬಿಕ್ಕಟ್ಟಿನ ಪರಿಹಾರವನ್ನು ಇಲ್ಲಿ ಕಂಡು ಹಿಡಿಯಬಹುದು ಎಂದು ಅಂದರೆ ಡುಪ್ಲಿಕೇಷನ್ ಬೇಡ ಎಂದು ಇರಬಹುದು.

ಮಾನ್ಯ ಅಧ್ಯಕ್ಷಿಣಿಯವರೇ, ಈಗ ನಾನು ಹೇಳುವುದೇನೆಂದರೆ, ಇವರು ಯಾರೂ ಅಲ್ಲಿ ಹೋಗಿ ತಾವು ಆ ಅಥಾರಿಟಿಯ ಅವಿಭಾಜ್ಯ ಅಂಗ ಎಂದು ಕೆಲಸ ಮಾಡುತ್ತಿಲ್ಲ. ಇವರು ಯಾರು ಮೀಟಿಂಗ್‌ನ್ನು ಅಟೆಂಡ್ ಮಾಡುವುದಿಲ್ಲ. ಯಾರೋ ಒಬ್ಬ ಪೋಲೀಸ್ ಸೂಪರಿಂಡಟೆಂಡ್‌ನ್ನು ಕಳುಹಿಸಿದರೆ ಅಥವಾ ಒಬ್ಬ ಎಲೆಕ್ಟ್ರಿಸಿಟಿ ಬೋರ್ಡ್‌ನ ರೆಪ್ರಸೆಂಟಿವ್‌ನ್ನು ಕಳುಹಿಸಿದರೆ ಅವನು ಕೂಡ ಈ ಒಂದು ಖಾತೆಯ ಅವಿಭಾಜ್ಯ ಅಂಗ ಎಂದು ಏನೂ ಕೆಲಸ ಮಾಡುವುದಿಲ್ಲ. ಅವರನ್ನು ಏನಾದರೂ ಕೇಳಿದರೆ ಅವರು ನಮಗೆ ಏನೂ ಗೊತ್ತಿಲ್ಲ, ನಮ್ಮ ಆಫೀಸರ್‌ನ ಕೇಳಿಕೊಂಡು ಬರುತ್ತೇವೆ ಅಂತ ಹೇಳಿ ಮತ್ತೆ ವಾಪಸ್ಸು ಹೋಗುತ್ತಾರೆ. ಈ ರೀತಿ ನಡೆಯುವುದಕ್ಕೆ ಅನೇಕ ನಿದರ್ಶನಗಳು ಇವೆ. ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯನ್ನು ಮಾಡಿದ್ದೀರಿ, ಅಲ್ಲಿ ಏನಾಗಿದೆ ಎಂಬುದು ಗೊತ್ತಿದೆ. ಆದರಲ್ಲಿ ಎಲ್ಲಾ ಅಧಿಕಾರಿಗಳು ಇದ್ದಾರೆ. ಆದರೆ ಯಾರು ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ, ಮೀಟಿಂಗ್‌ನ್ನೇ ಅಟೆಂಡ್ ಮಾಡುವುದಿಲ್ಲ. ಯಾರನ್ನಾದರೂ ಒಬ್ಬ ಕಾರಕೂನನ್ನು ಕಳುಹಿಸುತ್ತಾರೆ. ಅವನು ನನಗೆ ಏನೂ ಹೇಳುವುದಕ್ಕೆ ಅಧಿಕಾರವಿಲ್ಲ ಎಂದು ಹೇಳುತ್ತಾನೆ ಮತ್ತೆ ಅವರು ಇಲ್ಲಿ ನಡೆದದ್ದನ್ನು ಬರೆದುಕೊಂಡು ಬನ್ನಿ ಎಂದು ಹೇಳಿದ್ದಾರೆಂದು ಹೇಳುತ್ತಾನೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹೀಗೆ ಹೇಳಿ ತಕರಾರು ಮಾಡುತ್ತಾರೆ, ಇದರಿಂದ ಏನೂ ಪ್ರಯೋಜನ ವಾಗುವುದಿಲ್ಲ. ಈ ಅಥಾರಿಟೀಸ್‌ಗೆ ವಿಶಿಷ್ಟವಾದಂತಹ ಅಧಿಕಾರವನ್ನು ಕೊಡಬೇಕೇ ಹೊರತು ಈ ರೀತಿ ಎಲ್ಲರನ್ನೂ ಸೇರಿಸಿ ಒಂದು ಸಂತೆಯನ್ನಾಗಿ ಮಾಡಿದರೆ ಯಾವ ಸಮಸ್ಯೆಗಳು ಬಗೆಹರಿಯುವುದಿಲ್ಲ. ಈ ರೀತಿ ಸಮಸ್ಯೆಗಳು ಬಗೆಹರಿಯುತ್ತದೆ ಎಂಬುದು ಭ್ರಮೆಯಾಗುತ್ತದೆ. ಈ ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಒಂದು ಸಮೀಕ್ಷೆಯನ್ನು ನಡೆಸಿದರೆ ನಾನು ಹೇಳತಕ್ಕಂತಹ ವಿಷಯದ ತಾತ್ಪರ್ಯ ನಿಮಗೆ ಅರ್ಥವಾಗುತ್ತದೆ. ಈ ರೀತಿ ಎಲ್ಲರನ್ನೂ ಸೇರಿಸುವುದರಿಂದ ಯಾವ ಪ್ರಯೋಜನವೂ ಇಲ್ಲ, ಈಗ ಏನಾಗುತ್ತದೆ ಎಂದರೆ "ಮೂಗಿಗಿಂತ ಮೂಗುತಿಯೇ ಭಾರ" ಎಂಬಂತೆ ಆಗುತ್ತದೆ. ಈ ಅಥಾರಿಟಿಗಳಲ್ಲಿ ನನ್ನ ಅಥಾರಿಟಿ ಜಾಸ್ತಿ, ನಿನ್ನ ಅಥಾರಿಟಿ ಜಾಸ್ತಿ ಎಂದು ಪೈಪೋಟಿ ಶುರುವಾಗುತ್ತದೆ. ಇಲ್ಲಿ ಜನಗಳ ಸಂತೆಯಾಗಿರುವುದರಿಂದ ನಿಜವಾಗಿಯೂ ಇದರಿಂದ ಏನೂ ಪ್ರಯೋಜನ ವಾಗುವುದಿಲ್ಲ. ಇಲ್ಲಿ ಇನ್ನೊಂದು ಮುಖ್ಯವಾದ ವಿಚಾರವಿದೆ. ಇವತ್ತು ಮುಖ್ಯವಾಗಿ ಬೇಕಾಗಿರುವುದು ಏನೆಂದರೆ ಮನೆಗಳನ್ನು ಮಾಡಿ ಕೊಡಬೇಕು, ಅಥವಾ ನಿವೇಶನಗಳನ್ನು ಮಾಡಿಕೊಡಬೇಕು. ಮುಖ್ಯವಾಗಿ ನಿವೇಶನಗಳನ್ನು ಕೊಟ್ಟರೆ ಮನೆಗಳನ್ನು ಮಾಡಿಕೊಳ್ಳುವ ಪ್ರಯೋಜನವನ್ನು ಅವರಿಗೆ ಕಲ್ಪಿಸಿಕೊಡಬೇಕು. ಇಲ್ಲಿ ನಿಮಗೆ ಯಾರ ಬಗ್ಗೆ ಗಮನ ಇರಬೇಕೆಂದರೆ ಯಾರಿಗೆ ಹಣದ ಶಕ್ತಿ ಇಲ್ಲವೋ ಅಂತಹವರಿಗೆ ನಿವೇಶನಗಳನ್ನು ಕೊಡಬೇಕು. ಯಾರಿಗೆ ಹಣ ಇದೆ ಅವರು ಒಂದಲ್ಲಾ ಒಂದು ರೀತಿಯಲ್ಲಿ ನಿವೇಶನಗಳನ್ನು ಗಳಿಸಿ ಕೊಳ್ಳುತ್ತಾರೆ, ಸರ್ಕಾರದವರು ಯಾರಿಗೆ ಹಣವನ್ನು ಕೊಡುವ ಶಕ್ತಿಯಿಲ್ಲವೋ, ಯಾರು ದುರ್ಬಲರಿದ್ದಾರೆ ಯಾರಿಗೆ ಮನೆ ಅಂತ ಒಂದು ಆಸ್ತಿಯನ್ನು ಮಾಡಿಕೊಳ್ಳುವ ಶಕ್ತಿ ಇಲ್ಲವೋ ಅಂತಹವರಿಗೆ ಸಹಾಯ ಮಾಡಬೇಕು. ಆ ಬಗ್ಗೆ ಇವರಿಗೆ ಚಿಂತನೆ ಇಲ್ಲ. ಇವತ್ತು ಸಿ.ಐ.ಟಿ.ಬಿ., ಕಾನೂನಿನ ಚೌಕಟ್ಟಿನಲ್ಲಿ ಇದ್ದಂತಹ ಒಂದು ಅಂಶವನ್ನು ತೆಗೆದುಹಾಕಿದ್ದಾರೆ. ಹಿಂದಿದ್ದ ಕಾನೂನಿನಲ್ಲಿ ಹಿಂದುಳಿದ ವರ್ಗದವರಿಗೆ, ಶೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರಿಗೆ ನಿವೇಶನಗಳನ್ನು ಕೊಡುವುದರಲ್ಲಿ ರಿಯಾಯಿತಿ ತೋರಿಸಬೇಕೆಂಬ ಕಾನೂನು ಇತ್ತು. ಆದರೆ ಈಗ ಈ ಸಿ.ಐ.ಟಿ.ಬಿ.,ನಲ್ಲಿ ಈ ಕಾನೂನಿನಲ್ಲಿ ಆ ವಿಧಿಗಳನ್ನು ತೆಗೆದು ಹಾಕಿದ್ದೀರಿ. ನಾನು ಆ ಕಾನೂನಿನ ಬಗ್ಗೆ ಕೇಳಿದಾಗ ಅದರ ಕಾಪಿಗಳು ಇಲ್ಲಾ ಅಂತ ಹೇಳಿದಿರಿ, ನಾನು ಮಾನ್ಯ ಮಂತ್ರಿಗಳಲ್ಲಿ ವಿಜ್ಞಾಪನೆ ಮಾಡಿಕೊಳ್ಳುವುದಿಷ್ಟೇ, ಆ ಕಾನೂನು ಪ್ರತಿಗಳನ್ನು ತರಿಸಿದರೆ ಆ ವಿಧಿಗಳನ್ನು ನಾನು ತೋರಿಸುತ್ತೇನೆ. ಹಿಂದೆ ಕನಿಷ್ಟ ಒಂದಂಶವಾದರೂ ದುರ್ಬಲ ವರ್ಗದವರ ಪರವಾಗಿತ್ತು. ಅದರಲ್ಲಿ ಶೆಡ್ಯೂಲ್ ಕ್ಯಾಸ್ಟ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನವರಿಂದ ತುಂಬಾ ಕಡಿಮೆ ಹಣವನ್ನು ತೆಗೆದುಕೊಂಡು ಸೈಟನ್ನು ಕೊಡತಕ್ಕಂತಹ ಯೋಜನೆ ಇತ್ತು, ಆದರೆ ಸಿ.ಐ.ಟಿ.ಬಿ.ನವರು ಕಾರ್ಯಗತಗೊಳಿಸಲಿಲ್ಲ. ಅದು ಬೇರೆ ವಿಷಯ. ಈ ಸಿ.ಐ.ಟಿ.ಬಿ.ನವರು ಏನು ಮಾಡುತ್ತಿದ್ದಾರೆಂದರೆ, ಎಲ್ಲಾ ಹರಾಜಿಗೆ ಹೋಗತಕ್ಕಂತಹ ನಿವೇಶನಗಳನ್ನು ಮಾಡಿ ಅದರಲ್ಲಿ ದುಡ್ಡು ಮಾಡತಕ್ಕಂತಹ ಪ್ರಯತ್ನವನ್ನು ಮಾಡಿದ್ದಾರೆಯೋ ಹೊರತು ದುರ್ಬಲ ವರ್ಗದವರಿಗೆ ಮನೆಗಳನ್ನು ಕೊಡತಕ್ಕಂತಹ ಯಾವ ಸ್ಕೀಮ್‌ನ್ನು ಮಾಡಿಲ್ಲ. ಆದರೆ ಹೇಗೆ ಮಾಡಬೇಕೆಂದು ಹಿಂದೆ ಇದ್ದಂತಹ ಕಾನೂನಿನಲ್ಲಿ ಇತ್ತು. ಆದರೆ ಇವತ್ತಿನ ದಿವಸ ಈ ಕಾನೂನಿನಲ್ಲಿ ಯಾವುದೂ ಇಲ್ಲಾ, ಸುಮ್ಮನೆ ಡೆವಲಪ್‌ಮೆಂಟ್ ಸ್ಕೀಮ್ ಅಂತ ಮಾಡುತ್ತೀರಿ, ಅವರು ಇಲ್ಲಿ ಏನು

ಬೇಕಾದರೂ ಮಾಡಬಹುದು, ಒಟ್ಟಿನಲ್ಲಿ ಅಭಿವೃದ್ಧಿಯನ್ನು ತೋರಿಸಬೇಕು ಅದರ ಪ್ರತಿಫಲ ಯಾರಿಗೆ ಬೇಕಾದರೂ ಹೋಗಬಹುದು. ಎಷ್ಟೋ ಜನ ಸೈಟ್ ಇದ್ದವರೂ ಕೂಡ ಮತ್ತೆ ಬಿಸ್‌ನೆಸ್ ಮಾಡುವುದಕ್ಕೊ ಅಥವಾ ಹೋಟೆಲ್‌ಗಳನ್ನು ಕಟ್ಟುವುದಕ್ಕೊ ಅಥವಾ ಬಾಡಿಗೆಯನ್ನು ಕಟ್ಟುವುದಕ್ಕೊ ಅಥವಾ ಆಧುನಿಕವಾದ ಕಟ್ಟಡಗಳನ್ನೂ ಕಟ್ಟುವುದಕ್ಕೆ ಉಪಯೋಗ ಮಾಡಿಕೊಂಡರೂ ಸಹ ಅದು ಅಭಿವೃದ್ಧಿಯಾಗುತ್ತದೆ. ಆದರೆ ಇದರಿಂದ ದುರ್ಬಲ ವರ್ಗದವರಿಗೆ ಯಾವುದೇ ರೀತಿಯ ಪ್ರಯೋಜನ ವಾಗುವುದಿಲ್ಲ. ಆದ್ದರಿಂದ ನೀವು ಮಾಡತಕ್ಕಂತಹ ಅಭಿವೃದ್ಧಿಯನ್ನು ಕನಿಷ್ಟ ಪಕ್ಷ ಒಂದು ಪರ್ಸೆಂಟ್ ಆದರೂ ಕೂಡ ಯಾರು ದುರ್ಬಲವರ್ಗದವರು ಇದ್ದಾರೆ ಅವರಿಗೆ ಪ್ರಯೋಜನ ಆಗಬೇಕು, ಇದು ಹಿಂದೆ ಇದ್ದ ಆಕ್ಟ್‌ನಲ್ಲಿ ಇತ್ತು, ಈಗಿನ ಆಕ್ಟ್‌ನಲ್ಲಿ ಅದರ ಬಗ್ಗೆ ಯಾವುದೇ ವಿಷಯವಿಲ್ಲ. ಅದು ಕೂಡ ಸಮರ್ಪಕವಾಗಿರಲಿಲ್ಲ. ಆದರೆ ಇದರಲ್ಲಿ ಕನಿಷ್ಟ ಪಕ್ಷ ಒಂದು ಅಂಶವಾದರೂ ಇತ್ತು, ಆ ಒಂದು ಅಂಶವನ್ನೂ ಕೂಡ ಈ ಆಕ್ಟ್‌ನಲ್ಲಿ ತೆಗೆದು ಹಾಕಿದ್ದೀರಿ. ಶೆಡ್ಯೂಲ್ ಕ್ಯಾಸ್ಟ್ ಸೇರತಕ್ಕಂತಹ ಜನಗಳಿಗೆ ಮತ್ತು ಬ್ಯಾಕ್ ವರ್ಡ್ ಕ್ಲಾಸಿನವರಿಗೆ ಮತ್ತು ಯಾರು ತೀರ ಬಡವರಿದ್ದಾರೆ ಅವರಿಗೆ ನಿವೇಶನ ಸಿಗಬೇಕಾದುದು ಬಹಳ ಮುಖ್ಯವಾದುದು. ಬೋರ್ಡ್‌ನಲ್ಲಿ ಯಾರೋ ಇದ್ದಾರೆ ಅಂತ ಹೇಳಿ ಅವರಿಗೆ ನಾಲ್ಕು ನಾಲ್ಕು ನಿವೇಶನಗಳನ್ನು ಕೊಟ್ಟರೆ ನಿಜವಾದ ಸಮಸ್ಯೆ ಬಗೆಹರಿಯುವುದಿಲ್ಲ. ನಿಜವಾದ ಸಮಸ್ಯೆ ಬಗೆಹರಿಯಬೇಕಾದರೆ ಶೆಡ್ಯೂಲ್ ಕ್ಯಾಸ್ಟ್‌ನವರು ಏನು ಇದ್ದಾರೆ, ಬ್ಯಾಕ್‌ವರ್ಡ್ ಕ್ಲಾಸಿನವರು ಏನು ಇದ್ದಾರೆ, ಯಾರಿಗೆ ಹಣ ಕೊಡಲು ಶಕ್ತಿ ಇಲ್ಲ, ಅಂತಹವರಿಗೆ ನಿವೇಶನಗಳನ್ನು ಕೊಡುವುದು ಬಹಳ ಮುಖ್ಯವಾದುದು. ಈಗ ಏನೋ ಒಂದು ಅಮೆಂಡ್‌ಮೆಂಟ್‌ನ್ನು ತಂದಿದ್ದೀರಿ. ಇದು ಮೇಲ್ನೋಟಕ್ಕೆ ಮಾತ್ರ ತೃಪ್ತಿಪಡಿಸುವುದೇ ಹೊರತು ಆ ವರ್ಗದ ಜನರಿಗೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ. ಬಡ ಜನರಿಗೆ ನಿವೇಶನಗಳನ್ನು ಮಾಡತಕ್ಕಂತಹ ಒಂದು ಕೆಲಸಕ್ಕೆ ಈ ಅಥಾರಿಟಿಗಳನ್ನು ಒಳಪಡಿಸಬೇಕು. ಇದುವರೆಗೆ ಆ ಅಥಾರಿಟಿಗಳವರು ಏನು ತಿಳಿದುಕೊಂಡಿದ್ದಾರೆಂದರೆ, ಸಾಕಷ್ಟು ಶ್ರೀಮಂತರು ಒಳ್ಳೊಳ್ಳೆಯ ಕಟ್ಟಡಗಳನ್ನು ಕಟ್ಟುವುದಕ್ಕೋಸ್ಕರ ಅವರು ನಿವೇಶನಗಳನ್ನು ಮಾಡುವುದಕ್ಕೆ ಹುಟ್ಟಿದ್ದಾರೆಂದು ತಿಳಿದುಕೊಂಡಿದ್ದಾರೆ, ಈ ರೀತಿಯ ಒಂದು ಸೈಕಾಲಜಿ ಅವರಲ್ಲಿ ಕ್ರಿಯೇಟ್ ಆಗಿದೆ, ಇದು ಅವರ ಮಾತಿನಲ್ಲೇ ಸ್ಪಷ್ಟವಾಗಿ ಗೊತ್ತಾಗುತ್ತದೆ. ಶಿವಮೊಗ್ಗದಲ್ಲಿ ಒಂದು ಕಡೆ ನೀವು ಅಕ್ವೈರ್ ಮಾಡಿದ್ದೀರಿ. ಇದನ್ನು ನೀವು ಅಕ್ವೈರ್ ಮಾಡುವುದಕ್ಕೆ ಮುಂಚೆ ಅಲ್ಲಿನ ಬಡವರು ಸುಂದರವಾದ, ಚೊಕ್ಕವಾದ ಸಣ್ಣ ಮನೆಗಳನ್ನು ಕಟ್ಟಿದ್ದರು, ಅದಕ್ಕಾಗಿ ನಾವು ಆ ನಿವೇಶನಗಳನ್ನು ಚೊಕ್ಕ ಮಾಡಿ ಆ ದುರ್ಬಲ ವರ್ಗದವರಿಗೇನೇ ಕೊಟ್ಟು ಬಿಡಿ ಎಂದು ಹೇಳಿದಾಗ ಇವರುಗಳು ಹೇಳಿದರು ನೀವು ಹೇಳುವುದೇನೋ ಸರಿ ನಾವು ಆ ರೀತಿಯೇ ಮಾಡಬಹುದು ಆದರೆ ಇಂತಹ ಜನರು ಇರುವ ಭಾಗದಲ್ಲಿ ನಮ್ಮ ಸೈಟ್‌ಗಳಿಗೆ ಗಿರಾಕಿಗಳು ಬರುವುದಿಲ್ಲವೆಂದು ಹೇಳಿದರು. ಅಂದರೆ ಈ ಅಧಿಕಾರಗಳಲ್ಲಿ ಈ ರೀತಿಯ ಸೈಕಾಲಜಿ ತಾವು ಬಿಲ್ಟ್-ಅಪ್ ಮಾಡಿದ್ದೀರಿ. ಅಂದರೆ ಇದನ್ನು ಬಡವರಿಗೆ ಕೊಡುವುದಕ್ಕೆ ಯಾವ ಅಭ್ಯಂತರವೂ ಇಲ್ಲ, ಈ ಅಧಿಕಾರಿಗಳನ್ನು ಅಲ್ಲಿಯ ಜನರು ಮನುಷ್ಯರು ಅಂತ ಒಪ್ಪಿಕೊಂಡಿದ್ದಾರೆ, ಅಂದರೆ ಈ ಸೈಟುಗಳನ್ನು ಆ ಬಡ ಜನರಿಗೆ ಕೊಟ್ಟರೆ ಬೇರೆ ಸೈಟುಗಳನ್ನು ಕೊಂಡುಕೊಳ್ಳಲು ಯಾರು ಗಿರಾಕಿಗಳು ಬರುವುದಿಲ್ಲವೆಂಬ ಕೆಟ್ಟ ಅಭಿಪ್ರಾಯ, ಸಿ.ಐ.ಟಿ.ಬಿ.ನವರಿಗೆ ಇದೆ. ಇಂತಹ ಕೆಟ್ಟ ಮನಸ್ಥಿತಿಯನ್ನು ಈ ಅಧಿಕಾರಿಗಳು ತಮ್ಮ ತಲೆಯಲ್ಲಿ ತುಂಬಿಕೊಂಡಿದ್ದಾರೆ. ಶ್ರೀಮಂತರು ಒಳ್ಳೊಳ್ಳೆಯ ಬಂಗ್ಲೆಯನ್ನು ಕಟ್ಟುವುದಕ್ಕೋಸ್ಕರ ತಾವು ನಿವೇಶನಗಳನ್ನು ಮಾಡುವುದಕ್ಕೆ ಹುಟ್ಟಿದ್ದೇವೆಂಬ ಭ್ರಮೆಯನ್ನು ಈಗಾಗಲೇ ಬೆಳೆಸಿಕೊಂಡಿದ್ದಾರೆ. ಇದನ್ನು ತಿದ್ದುಪಡಿ ಮಾಡಬೇಕಾದರೆ ಈ ಕಾನೂನಿನಲ್ಲಿ ಬೇಕಾದಂತಹ ಓರಿಯಂಟೇಷನ್ ಅನ್ನು ಕೊಡ ಬೇಕಾಗಿದೆ. ಯಾರದೋ ಲಾಭಕ್ಕೋಸ್ಕರ ಸೈಟುಗಳನ್ನು ಅಭಿವೃದ್ಧಿ ಮಾಡುವುದು ಸರಿಯಲ್ಲ. ಶ್ರೀಮಂತರ ಲಾಭಕ್ಕೋಸ್ಕರ ಈ ಕೆಲಸವನ್ನು ಮಾಡಬಾರದು ಎನ್ನುವ ವಿಚಾರವನ್ನು ನೀವು ಸಾಕಷ್ಟು ಸ್ಪಷ್ಟವಾಗಿ ನಿರ್ದಿಷ್ಟವಾಗಿ ನಿಷ್ಠೂರವಾಗಿ ಈ ಕಾನೂನಿನಲ್ಲಿ ಹೇಳದ ಹೊರತು ನಿಮ್ಮ ಸಿ.ಐ.ಟಿ.ಬಿ., ಬರೀ ಅಲಂಕಾರ ಪ್ರಾಯವಾಗುತ್ತದೆ. ಈ ಪ್ಲಾನಿಂಗ್ ಅಥಾರಿಟಿಯಲ್ಲಿ ಎಲ್ಲರನ್ನೂ ಸೇರಿಸಿರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಶಿವಮೊಗ್ಗದಲ್ಲಿ ೧೨ ವರ್ಷಗಳಿಂದ ಕೇವಲ ೮೦೦ ಚಿಲ್ಲರೆ ಸೈಟುಗಳನ್ನು ನೀವು ಹಂಚಿದ್ದೀರಿ. ಆದರೆ ಶಿವಮೊಗ್ಗದಲ್ಲಿ ಡಿಮ್ಯಾಂಡ್ ಇರುವುದು ಸುಮಾರು ಇಪ್ಪತ್ತು ಎರಡು ಸಾವಿರ ಸೈಟುಗಳಿಗೆ.

೪-೦೦ ಪಿ.ಎಂ.

ಏನೆಂದರೆ There is some flaw in basic scheme that you are trying to implement. ಇದನ್ನು ನೀವು ಗಮನಕ್ಕೆ ತೆಗೆದುಕೊಳ್ಳಬೇಕಾಗಂತ್ತದೆ. ಅವರನ್ನು ನಿರ್ದಿಷ್ಟ ಕೆಲಸ ಮಾಡುವುದಕ್ಕೆ ಹಚ್ಚಬೇಕಾಗುತ್ತದೆ. ಏನಾಗಿದೆ ಎಂದರೆ ಒಂದು ಕಡೆ ಸಿಐಟಿಬಿ, ಇನ್ನೊಂದು ಕಡೆ ಹೌಸಿಂಗ್ ಬೋರ್ಡ್, ಮುನಿಸಿಪಾಲಿಟಿ, ಮತ್ತು ಪ್ಲಾನಿಂಗ್ ಅಥಾರಿಟಿ ಈ ನಾಲ್ಕೂ ಸೇರಿಕೊಂಡು ಏನೂ ಕೆಲಸ ಮಾಡಿದೆ. ಯಾರಿಗೂ ನಿವೇಶನ ಸಿಕ್ಕದೆ ಜನ ಸುಮ್ಮನೆ ಕೂತಿರುವುದಕ್ಕೆ ಆಗುವುದಿಲ್ಲ. ಅದಕ್ಕೇ ಅವರು ಎಲ್ಲಿ ಬೇಕೋ ಅಲ್ಲಿ ಮನೆ ಕಟ್ಟಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಶಿವಮೊಗ್ಗ ಟೌನನ್ನೇ ತೆಗೆದುಕೊಳ್ಳಿ ಅದರ ಸುತ್ತ ಮುತ್ತ ಇರುವ ಎಲ್ಲ ಲ್ಯಾಂಡ್ಸ್‌ಗೂ ಬೋರ್ಡ್ ಹಾಕಿಬಿಟ್ಟಿದ್ದಾರೆ. "This property is going to be aquired by CITB, Shimoga." There is a Board. ಯಾರೂ ಏನೂ ಮಾಡುವ ಹಾಗಿಲ್ಲ. ಈ ಸಿಐಟಿಬಿ ಯವರು ಸೈಟ್ ಮಾಡುತ್ತಾರೆಂದು ತಿಳಿದುಕೊಂಡಿದ್ದೆವು. ಆದರೆ ೧೨ ವರ್ಷದಿಂದ ೮೦೦ ಸೈಟ್ ಮಾತ್ರ ಮಾಡಿ ಹಂಚಿದ್ದಾರೆ. ಮಿಕ್ಕಿದ ಎಲ್ಲಾ ಖಾಲಿ ಭೂಮಿಗೂ ಯಾವಾಗ ಇವರು ಬೋರ್ಡ್ ಹಾಕುವುದಕ್ಕೆ ಶುರು ಮಾಡಿದರೋ ಇಲ್ಲವೋ ಅಲ್ಲಲ್ಲಿ ಮಧ್ಯೆ ಇರುವವರು ಸಿಐಟಿಬಿ ಮುಖ್ಯಸ್ಥರ ಹತ್ತಿರ ಬರುವುದು, ನಮ್ಮ ಇಂಥಾ ಒಂದೇ ಸರ್ವೆ ನಂಬರನ್ನು ಬಿಟ್ಟುಬಿಡಿ ಎಂದು ಕೇಳುವುದು, ಅದಕ್ಕೆ ಅವರು ನೋಡಪ್ಪ, ಇದು ನನ್ನೊಬ್ಬನದಲ್ಲ, ಮೇಲ್ಮಟ್ಟದಲ್ಲಿ ತೀರ್ಮಾನ ತಗೋಬೇಕು ಎಂದು ಹೇಳಿ ಇಂತಿಂಥ ಕಡೆಯೆಲ್ಲಾ ಇಂತಿಂಥಾ ಉಪಚಾರ ಆಗಬೇಕು ಎಂದು ಹೇಳಿ ಎಲ್ಲ ಆದ ಮೇಲೆ ಅದನ್ನು ಡಿಲಿಟ್ ಮಾಡುವುದು—ಇದು ನಡೆಯುತ್ತಿದೆ. ಆದರೆ ಯಾರು ಪ್ರೈವೇಟ್ ಲೇಔಟ್ ಮಾಡುವವರೋ ಅವರಿಗೆಲ್ಲಾ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಡುವರು. ಏನಿದರ ಹಿನ್ನೆಲೆ? ೧೯೨೪ನೇ ಇಸವಿಯಿಂದ ಒಳ್ಳೆಯ ಕೆಲಸ ಮಾಡುತ್ತಾ ಬಂದಿರುವ ಅತ್ಯುತ್ತಮವಾದ ಹೌಸಿಂಗ್ ಸೊಸೈಟಿ ಶಿವಮೊಗ್ಗದಲ್ಲಿದೆ. ಬೆಂಗಳೂರಿನ ತರಹದ ಸೊಸೈಟಿ ಅಲ್ಲ, ಅದು ಒಳ್ಳೆಯ ಕೆಲಸ ಮಾಡಿರುವ ಸೊಸೈಟಿ. A genuine society which has been responsible for at least half of the development of the city. ಅಂಥಾ ಸೊಸೈಟಿ ಯಾವ ಭೂಮಿಯನ್ನಾದರೂ ಸೈಟ್ ನಿರ್ಮಾಣಕ್ಕಾಗಿ ಕೇಳಿದರೆ ತಕ್ಷಣ ಅದಕ್ಕೆ ಅಬ್ಜೆಕ್ಷನ್ ಹಾಕುತ್ತಾರೆ. ಹೀಗಾಗಿ ಅವರೂ ಸೈಟ್ ನಿರ್ಮಾಣ ಮಾಡಿ ಜನರಿಗೆ ಕೊಡುವಂತಿಲ್ಲ. ಸಿಐಟಿಬಿನವರೂ ಲೇಔಟ್ಸ್ ನಿರ್ಮಾಣ ಮಾಡಿ ಕೊಡುವಂತಿಲ್ಲ. ಬರೀ ಕಂಡ ಕಂಡ ಕಡೆಯೆಲ್ಲಾ ಬೋರ್ಡ್ ಹಾಕುತ್ತಾ ಹೋಗುವುದು ಇವರ ಕೆಲಸವಾಗಿದೆ. ಇಂಥಾದ್ದಕ್ಕೆ ಏನಾದರೂ ಬೆಲೆ ಇದೆಯೇ? ಬರೀ ಕಾರ್ ಮುಂದೆ ಸಿಐಟಿಬಿ ಎಂದು ಬೋರ್ಡ್ ಹಾಕಿಕೊಂಡು ಓಡಾಡುವುದಷ್ಟೆ ಇವರ ಕೆಲಸ. ಇವರು ನೋಟಿಫೈ ಮಾಡಿ ಬೋರ್ಡ್ ಹಾಕಿರುವ ಲ್ಯಾಂಡನ್ನೆಲ್ಲಾ ಸೈಟ್ ಮಾಡಿ ಕೊಡುವುದಾದರೆ ಬೇಕಾದರೆ ಶಿವಮೊಗ್ಗದ ಡಿಮ್ಯಾಂಡ್ ಅಷ್ಟೇ ಅಲ್ಲ ಬೆಂಗಳೂರಿನಲ್ಲಿ ಎಷ್ಟು ಡಿಮ್ಯಾಂಡ್ ಇದೆಯೋ ಅದನ್ನೂ ಮೀಟ್ ಮಾಡಿಬಿಡಬಹುದು. ಆದರೆ ಇದುವರೆಗೂ ಇವರು ಕೊಟ್ಟಿರುವುದು ಬರೀ ೮೦೦ ಸೈಟ್‌ಗಳು ಮಾತ್ರ ಆದ್ದರಿಂದ ಸರ್ಕಾರಕ್ಕೆ ಸ್ಪಷ್ಟವಾದ ಒಂದು ಮಾತನ್ನು ಹೇಳುತ್ತೇನೆ. ಈ ಬಿಲ್‌ನಲ್ಲಿ ಎಷ್ಟೋ ಜನರನ್ನು ತುಂಬಿದ್ದೀರಿ. ಅವಶ್ಯಕತೆ ಇದೆಯೆಂದು ನೀವು ತುಂಬಿದ್ದೀರಿ. ಆದರೆ ಅದನ್ನು ಅವಶ್ಯಕವೇ ಎಂದು ನೋಡಿ. ಇನ್ನೊಂದೇನೆಂದರೆ ವಿವಿಧ ಇಲಾಖೆಗಳ ಪ್ರತಿನಿಧಿಗಳು ಅವನು ಯಾವನೇ ಇರಲಿ, ಒಂದು ಸಲ ಇಲ್ಲಿ ಅವನು ಪ್ರತಿನಿಧಿಯಾಗಿ ಕುಳಿತು ಚರ್ಚೆ ಮಾಡಿದ ಮೇಲೆ ಆವನ ತೀರ್ಮಾನವನ್ನು ಡಿಪಾರ್ಟ್‌ಮೆಂಟಿನಲ್ಲಿ ಪ್ರಶ್ನೆ ಮಾಡುವ ಹಾಗಿರಬಾರದು. ಅವರು ಇಲ್ಲೇ ಕೂತು ಚರ್ಚೆ ಮಾಡಬೇಕು. Department must be bound to carry out the decision of this Authority. Then only this representation has a meaning. ಇಲ್ಲದಿದ್ದರೆ ಉಪಯೋಗವಿಲ್ಲ. ಕಮ್ಯೂನಿಟಿ ಏರಿಯಾ ಡೆವಲಪ್‌ಮೆಂಟ್ ಎಂದು ಇದೆ. ಅದರಲ್ಲಿ ಎಲ್ಲಾ ಡಿಪಾರ್ಟ್‌ಮೆಂಟಿನವರು ಇದ್ದರು. ಅಲ್ಲಿ ಏನಾಗಿದೆ ಎಂದರೆ They don't feel that they belonged to that C A D A Instead they think that they belonged to their Department. They come with a mental reservation. They don't really contribute to the discussion of the Board. ಆಮೇಲೆ ಡಿಪಾರ್ಟಮೆಂಟಿನಲ್ಲಿ ಡಿಸಿಷಾನ್‌ಗಳನ್ನು ಚೇಂಜ್ ಮಾಡುವುದು. ಇಲ್ಲಿ ಒಂದು ಸಲ ತೀರ್ಮಾನ ಆದ ಮೇಲೆ ಯಾವ್ಯಾವ ಇಲಾಖೆಗಳ ಪ್ರಾತಿನಿಧ್ಯ ಇದೆಯೋ ಆ ಇಲಾಖೆಗಳು they

must be bound by the decision of this Authority. ಅದಕ್ಕೆ ಒಂದು ಇಲ್ಲಿ ಕಲಮು ಹಾಕಬೇಕು. ಇಲ್ಲದಿದ್ದರೆ ಉಪಯೋಗವಿಲ್ಲ, ಎರಡನೆಯದು, ಇದರಲ್ಲಿ ಯಾರು ಹಣದ ಶಕ್ತಿ ಇಲ್ಲದವರು ದುರ್ಬಲರು ಇದ್ದಾರೆ ಅವರಿಗೆ ನಿವೇಶನ ನೀಡುವುದು ಆದ್ಯ ಕರ್ತವ್ಯ ಎಂದು ಈ ಶಾಸನದಲ್ಲಿ ಬರೆಯಬೇಕು. ಅದಕ್ಕೆ ಬೇಕಾದ ಕನ್‌ಸೆಷನ್ ಕೊಡುವುದಕ್ಕೂ ಅಥಾರಿಟಿ ಇರಬೇಕು. ನೋ ಫ್ರಾಫಿಟ್ ನೋಲಾಸ್ ನೀತಿ ಎಲ್ಲಾ ಕಡೆ ಅನ್ವಯಿಸುವುದಕ್ಕೆ ಆಗುವುದಿಲ್ಲ ಸ್ವಾಮಿ. ಆ ರೀತಿ ಮಾಡಿದರೆ ಬಡವರಿಗೆ ಸೈಟು ಕೊಡಲು ಆಗುವುದಿಲ್ಲ. ಅದನ್ನು ಬದಲಾವಣೆ ಮಾಡಿ ದುರ್ಬಲರಿಗೆ ಮತ್ತು ಹಣಕಾಸು ಇಲ್ಲದವರಿಗೆ ಸೈಟ್ ಕೊಡುವ ಸಂದರ್ಭದಲ್ಲಿ even if the CITB were to incur loss, provide for it in the Act, they should be given. Provide them some aid from the Government or let them adjust from somewhere else. ಹಾಗೇನಾದರೂ ಮಾಡದೇ ಹೋದರೆ ಸಿ.ಐ.ಟಿ.ಬಿ.ಗೆ ನಿಜವಾದಂತಹ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಶಕ್ತಿ ಬರುವುದಿಲ್ಲ ಆ ರೀತಿಯ ಕಾಲಂ ಅನ್ನು ಇದರಲ್ಲಿ ಸೇರಿಸಬೇಕೆಂದು ಒತ್ತಾಯಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) —ಮಾನ್ಯ ಅಧ್ಯಕ್ಷರೇ, ಕರ್ನಾಟಕ ಡೆವಲಪ್‌ಮೆಂಟ್ ಅಥಾರಿಟಿ ಮಸೂದೆಯನ್ನು ತಂದಂತಹ ಒಂದು ಉದ್ದೇಶ ಏನಿದೆ ಅದರ ಬಗ್ಗೆ ಬಹಳ ಸಂಶೋಧನೆಯನ್ನು ಮಾಡಬೇಕಾಗುತ್ತದೆ. ವಾಸ್ತವವಾಗಿ ಹೇಳುವುದಾದರೆ, ಈ ಮಸೂದೆಯನ್ನು ತಂದಂತಹ ಉದ್ದೇಶ ಈ ಪುರಸಭೆಗಳಲ್ಲಿರತಕ್ಕಂತಹ ಮತ್ತು ಪಟ್ಟಣಗಳಲ್ಲಿರತಕ್ಕಂತಹ ನಾಗರೀಕರ ಸಮಸ್ಯೆಗಳನ್ನು ಪರಿಹಾರ ಮಾಡಲೀ ಎಂದು ಅಲ್ಲ, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಮತ್ತು ಪ್ಲಾನಿಂಗ್ ಅಥಾರಿಟಿಯ ಅಧಿಕಾರಿಗಳಿಗೆ ಅಥವಾ ಈ ಎರಡೂ ಒಂದು ಪ್ರಾಧಿಕಾರ ಮತ್ತು ಪ್ಲಾನಿಂಗ್ ಅಥಾರಿಟಿಯ ಪ್ಲಾನಿಂಗ್ ಆಫೀಸರ್ಸ್, ಈ ಎರಡೂ ಪ್ರಾಧಿಕಾರದ ಅಧಿಕಾರಿಗಳಿಗೆ ಇರತಕ್ಕಂತಹ ವಾಸ್ತವಿಕವಾದಂತಹ ಸಂಘರ್ಷಣೆಗಳನ್ನು ಹೋಗಲಾಡಿಸಲಿಕ್ಕೆ ತಂದ ಹಾಗೆ ನನಗೆ ಕಾಣುತ್ತದೆ. ಇದರಿಂದ ಯಾವ ಜನರಿಗೆ ಅನುಕೂಲತೆಯನ್ನು ಒದಗಿಸತಕ್ಕಂತಹ ಒಂದು ವ್ಯವಸ್ಥೆ ಅಥವಾ ಒಂದು ಉದ್ದೇಶ ಖಂಡಿತವಾಗಿಯೂ ಬರಲಿಕ್ಕೆ ಸಾಧ್ಯವಿಲ್ಲವೆಂದು ನನಗನ್ನಿಸುತ್ತದೆ. ಇದು ಒಂದು ಪ್ರಾಮುಖ್ಯವಾದಂತಹ ಮಸೂದೆ ಎಂದು ನನಗನ್ನಿಸುತ್ತದೆ. ಇದರ ಬಗ್ಗೆ ಹೆಚ್ಚು ಚರ್ಚೆಯನ್ನು ಬೆಳೆಸಲಿಕ್ಕೆ ಹೋಗದೇ ಇಷ್ಟು ವರ್ಷಗಳಲ್ಲಿ ಸಿ.ಐ.ಟಿ.ಬಿ., ಪ್ಲಾನಿಂಗ್ ಅಥಾರಿಟಿ ಇವರು ನಡೆದುಕೊಂಡು ಬಂದ ದಾರಿ ಮತ್ತು ಎದುರಿಸತಕ್ಕಂತಹ ಸಮಸ್ಯೆಗಳ ಒಂದು ಅನುಭವದ ಮೇಲೆ ತಾವು ಇಂತಹ ಒಂದು ಮಸೂದೆಯನ್ನು ಈ ಸದನಕ್ಕೆ ತರುವುದು ಒಳ್ಳೆಯದೆಂದು ನಾನು ಈ ಸರಕಾರಕ್ಕೆ ಪ್ರಾಥಮಿಕವಾಗಿ ಸೂಚನೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಏಕೆಂದರೆ ತಾವು ಈ ಪ್ಲಾನಿಂಗ್ ಅಥಾರಿಟಿ ಮತ್ತು ಸಿ.ಐ.ಟಿ.ಬಿ., ಈ ಎರಡನ್ನೂ ಸಂಯೋಜನಗೊಳಿಸಲಿಕ್ಕೆ ಇದರಲ್ಲಿ ಹಾಕುತ್ತಿದ್ದೀರಿ. ಇದರ ಬಗ್ಗೆ ತಾವು ಸರಿಯಾದಂತಹ ತಂತ್ರಜ್ಞರ, ಪರಿಣಿತರ ಹತ್ತಿರ ಟೌನ್ ಡೆವಲಪ್‌ಮೆಂಟ್ ಅಥವಾ ಪ್ಲಾನಿಂಗ್ ಬಗ್ಗೆ ಯಾವ ಅಭಿವೃದ್ಧಿಯಾಗಬೇಕು ಎಂಬ ಬಗ್ಗೆ ವಿಚಾರ ಮಾಡಿದ್ದೀರಾ ? ಏಕೆಂದರೆ ಮುಂದೆ ಪುರಸಭೆಗಳಲ್ಲಿ ಏನು ಸವಾಲು ಎದುರಿಸುತ್ತಿದ್ದೇವೆ, ಅದು ಇದೊಂದು ವರ್ಷಕ್ಕೆ ಅಥವಾ ತಾತ್ಕಾಲಿಕವಾಗಿ ಇರತಕ್ಕಂಥಾ ಸಂಘರ್ಷಣೆಯ ಪರಿಹಾರಕ್ಕೆ ಅಷ್ಟಕ್ಕೇ ಸೀಮಿತವಾಗಿ ಈ ಮಸೂದೆಯನ್ನು ತಾವು ತಾತ್ಕಾಲಿಕವಾಗಿ ಮಾಡಿದರೆ ಇದರಿಂದ ಹೆಚ್ಚಿನ ಪರಿಣಾಮ ನಗರಗಳ ಅಭಿವೃದಿಯ ಮೇಲೆ ಆಗುತ್ತದೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಾವು ಹೇಳಬೇಕು ಇಂತಹ ಮಸೂದೆಯ ಅಗತ್ಯವಿದೆಯೇ? ಪಟ್ಟಣದ ಜನಗಳಿಗೆ ಹೆಚ್ಚು ಅನುಕೂಲವಾಗುವ ಬಗ್ಗೆ ಅಡ್ಮಿನಿಸ್ಟ್ರೇಟಿವ್ ಎಕ್ಸ್‌ಪರ್ಟ್ ಅಥವಾ ಟೌನ್ ಪ್ಲಾನಿಂಗ್ ಎಕ್ಸ್‌ಪರ್ಟ್ಸ್ ತಮಗೆ ಅಭಿಪ್ರಾಯ ಕೊಟ್ಟ ಮೇಲೆ ಈ ಮಸೂದೆಯನ್ನು ತಂದಿದ್ದೇ ಆದರೆ I can agree with it. ಒಂದು ತಾತ್ಕಾಲಿಕವಾದಂತಹ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಈ ಸದನವನ್ನು ಉಪಯೋಗ ಮಾಡಿಕೊಂಡು ಈ ಮಸೂದೆಯನ್ನು ತರುವುದಿದ್ದರೆ ಅದರಿಂದ ಯಾವ ರೀತಿಯ ಪ್ರಯೋಜನವೂ ಆಗುವುದಿಲ್ಲ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಪ್ಲಾನಿಂಗ್ ಅಥಾರಿಟಿ, ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್ ಮೇಲೆ ಒಂದು ರೀತಿಯ ಅಂಕುಶ ಹಾರಲಿಕ್ಕೆ ಇರತಕ್ಕಂಥಾದ್ದು ಒಂದು ಪ್ರಾಧಿಕಾರ, ಇದರಿಂದ ಏನಾಗುತ್ತದೆ ಅಂದರೆ ನನ್ನ ಮೇಲೆ ನಾನೇ ಸ್ವಯಂ ಅಂಕುಶ ಹಾಕತಕ್ಕಂತಹ ಇನ್‌ಬಿಲ್ಟ್ ಅಥಾರಿಟಿಯಾಗಿ ಇದರ ಮೂಲಕ ತಾವು ಕಾನೂನನ್ನು ಮಾಡಲಿಕ್ಕೆ ಹೊರಟಿದ್ದೀರಿ, ಇದು ವ್ಯವಹಾರಿಕವಾಗಿ ನಡೆಯಲಿಕ್ಕೆ ಸಾಧ್ಯವೇ ? Ultimately the planning itself will be a big target.

ಅದು ಸಂಪೂರ್ಣವಾಗಿ ಪ್ಲಾನಿಂಗ್ ಪ್ರೊಸಸ್‌ನ್ನೇ ಇವತ್ತು ನಾಶ ಮಾಡತಕ್ಕಂಥ ಮತ್ತು ಡೆವಲಪ್‌ಮೆಂಟ್ ಅಭಿವೃದ್ಧಿಯನ್ನು ಮಾಡತಕ್ಕಂಥ ಒಂದು ನೆಪದಲ್ಲಿ ಸಂಪೂರ್ಣವಾದಂಥ ಒಂದು ಪ್ಲಾನಿಂಗ್‌ನ ಒಂದು ಪ್ರೊಸೆಸ್‌ನ್ನೇ ಈ ಒಂದು ಮಸೂದೆ ನಾಶ ಮಾಡಲಿಕ್ಕೆ ಬರುತ್ತದೆ. ತನ್ಮೂಲಕವಾಗಿ ಒಂದು ಸಂಪೂರ್ಣವಾದಂಥ ಅಸ್ತವ್ಯಸ್ತತೆ ಈ ಪುರಸಭೆಗಳ ವ್ಯವಸ್ಥೆಯಲ್ಲಿ ಬರುವುದಕ್ಕೆ ಸಾಧ್ಯ ಇದೆ ಎಂಬುದನ್ನು ತಾವು ಇವತ್ತು ತಿಳಿದುಕೊಳ್ಳಬೇಕಾಗಿದೆ. ಇದನ್ನು ಜಂಟಿ ಸಲಹಾ ಸಮಿತಿಗೆ ಅದನ್ನು ಕಳುಹಿಸಿ, ಅದನ್ನು ವಿಚಾರ ಮಾಡಿ. ಜಂಟಿ ಸಲಹಾ ಸಮಿತಿಯು ಪರಿಣಿತರನ್ನು ವಿಚಾರಿಸಿ. ಅವರ ಹತ್ತಿರ ಮಾತನಾಡಿ ವಿಷಯಗಳನ್ನು ಚರ್ಚೆಮಾಡಿ ಇದರ ಬಗ್ಗೆ ಪರಿಷ್ಕೃತವಾದಂಥ ಒಂದು ಮಸೂದೆಯನ್ನು ತಂದರೆ ಕರ್ನಾಟಕ ರಾಜ್ಯದ ಜನರಿಗೆ ಇದರಿಂದ ಹೆಚ್ಚು ಪ್ರಯೋಜನವಾಗುತ್ತದೆ ಎಂಬುದನ್ನು ಇವತ್ತು ತಾವು ತಿಳಿದುಕೊಳ್ಳಬೇಕಾಗಿದೆ. ಈ ಮಸೂದೆಯನ್ನು ತಾವು ಒಂದು ಡೆಫನಿಷನ್ ಕೊಟ್ಟಿದ್ದೀರಿ. ಅದನ್ನು ದಯಮಾಡಿ ನೋಡಿ. ಈ ರೀತಿ ಆದರೆ ಕಂಟ್ರಾಡಿಕ್ಟರಿ ಬರುತ್ತದೆ. ಈ ಡೆವಲಪ್‌ಮೆಂಟ್ ಏನು ? ಎಂದು ಹೇಳುತ್ತೇವೆ, ಕ್ಲಾಸ್–೨ಸಬ್ ಕ್ಲಾಸ್ (ಹೆಚ್‌ಜೆ) ಇದರಲ್ಲಿ ಸ್ಪಷ್ಟವಾಗಿ ಇದೆ. ಈ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ನವರ ಪ್ರಾಮುಖ್ಯವಾದ ಕಾರ್ಯ ಏನೆಂದರೆ ಸೈಟುಗಳನ್ನು ಮಾಡತಕ್ಕಂಥದ್ದು. ಅದರಲ್ಲಿ ಬಡವರು ಇರಬಹುದು, ಮಧ್ಯಮವರ್ಗದವರು ಇರಬಹುದು, ಅಥವಾ ಹೆಚ್ಚಿಗೆ ಹಣ ಕೊಟ್ಟು ಪಡೆದುಕೊಳ್ಳುವವರು ಇರಬಹುದು, ಸೈಟುಗಳನ್ನು ಫಾರ್ಮೇಷನ್ ಮಾಡಲಿಕ್ಕೆ, ರೋಡ್‌ಗಳನ್ನು ಮಾಡಲಿಕ್ಕೆ ಡೆವಲಪ್‌ಮೆಂಟ್ ಕಕ್ಷೆಯಲ್ಲಿ ಬರುತ್ತದೆ. ಇಂಜಿನಿಯರಿಂಗ್ ಲೇಔಟ್ ಇದರಲ್ಲಿ ಆಗುತ್ತದೆಯೋ? ಇಂಜಿನಿಯರಿಂಗ್ ಎಂದರೆ ಸೈಟುಗಳನ್ನು ಕೊಡುವುದಾಗುತ್ತದೆಯೋ ? ಇಂಜಿನಿಯರಿಂಗ್ ಆಪರೇಷನ್ ಎಂದು ಇದೆ. ಫಾರ್ಮೇಷನ್ ಆಫ್ ಲೇಔಟ್ಸ್ ಎಂದರೆ ಸೈಟು ಕೊಡುವುದು ಆಗುತ್ತದೆ. Award or grant of sites ಇದರಲ್ಲಿ ಬರುತ್ತದೆ. ಏಕೆಂದರೆ ನಂಬರ್ ಆಫ್ ಡೆಫನಿಷನ್ ಇದರಲ್ಲಿ ಕೊಟ್ಟಿದ್ದೀರಿ. ಸೈಟುಗಳನ್ನು ತಯಾರು ಮಾಡತಕ್ಕಂಥದ್ದು, ಮಾಡತಕ್ಕಂಥ ಅಧಿಕಾರ ಡೆವಲಪ್‌ಮೆಂಟ್‌ನಲ್ಲಿ ಎಲ್ಲಿ ಬರುತ್ತದೆ ? ತಾವು ದಯಮಾಡಿ ಹೇಳಬೇಕಾಗುತ್ತದೆ. Engineering operations may be formation of lay outs, formation of roads, lay outs for the purpose of distributing sites or formation of sites. ತಾವು ಇದನ್ನು ಅಮೆಂಡ್‌ಮೆಂಟ್ ಮಾಡುತ್ತೀರೋ ಯಾವ ರೀತಿ ಸರಿಪಡಿಸುತ್ತೀರೋ ತಾವು ದಯಮಾಡಿ ನೋಡಬೇಕು. ಇನ್ನು ಕ್ಲಾಸ್–೧೫ರಲ್ಲಿ Power of authority to undertake works and incur expenditure for development etc., ಹೇಳಿದ್ದಕ್ಕೆ ಏನಾಗುತ್ತದೆ ಎಂದು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಶ್ರೀನಿವಾಸ್‌ರವರು ಕೂಡಾ ಬಹಳ ಚೆನ್ನಾಗಿ ಹೇಳಿದರು. ಅನೇಕ ಕಡೆ ನಾವು ಪ್ಲಾನಿಂಗ್ ಅಥಾರಿಟಿಯಲ್ಲಿರತಕ್ಕಂಥ ಅಧಿಕಾರಿಗಳು ಅಥವಾ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್‌ನಲ್ಲಿರತಕ್ಕಂಥ ಅಧಿಕಾರಿಗಳು ಎಲ್ಲಿಯಾದರೂ ತಪ್ಪು ಇದ್ದರೆ ಅವರು ಜವಾಬ್ದಾರಿಯನ್ನು ಗುರುತಿಸಿ ಶಿಕ್ಷೆ ಮಾಡಲಿಕ್ಕೆ ಸರಿಯಾದ ಒಂದು ವ್ಯವಸ್ಥೆ ಇತ್ತು. ಈಗ ತಾವು ಬೋರ್ಡ್‌ಗಳನ್ನು ಮಾಡಿ ಅರ್ಬನ್ ಅಥಾರಿಟೀಸ್‌ಗಳನ್ನು ಮಾಡಿ, ಕೊನೆಯ ಪರಿಣಾಮ ಏನಾಗುತ್ತದೆ ಎಂದು ಹೇಳಿದರೆ you will be putting a seal of authority for all illegal things and irregularities. ಇದಕ್ಕೆ ಒಂದು ಸೀಲ್ ಆಫ್ ಅಥಾರಿಟಿ, ಅರ್ಬನ್ ಅಥಾರಿಟಿಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೀರಿ. ಯಾರೂ ಜವಾಬ್ದಾರಿ ವಹಿಸಿಕೊಳ್ಳುವುದಿಲ್ಲ. ಈ ಜವಾಬ್ದಾರಿ disparse ಆಗುತ್ತದೆ. ಇದರಿಂದ ಏನೇ ಅನ್ಯಾಯವಾಗಲೀ, ಏನೇ ಅವ್ಯವಹಾರವಾಗಲೀ ಇದಕ್ಕೆ ಸಂಪೂರ್ಣವಾದಂಥ ಅನುಮತಿಯನ್ನು ಈ ಡೆವಲಪ್‌ಮೆಂಟ್ ಅಥಾರಿಟಿಗೆ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಇದರಲ್ಲಿ ತಾವು ಮಾಡಿದ್ದೀರಿ ಎಂಬುದನ್ನು ತಾವು ಆಲೋಚನೆ ಮಾಡಬೇಕಾಗುತ್ತದೆ. ಇನ್ನು ಕ್ಲಾಸ್ ೭೮ರಲ್ಲಿ ಬಾಗಲಕೋಟೆ ಡೆವಲಪ್‌ಮೆಂಟ್ ಅಥಾರಿಟಿಗೆಲ್ಲಾ ಕೂಡಾ ತಾವು ರಿಪೀಲ್ ಮಾಡುತ್ತಿದ್ದೀರಿ. ಬಹುಶ: ಬಾಗಲಕೋಟೆ ಸಬ್‌ಮರ್ಷನ್ ಆಗುತ್ತದೆ. ಆದರೂ ಅದು ಕಮಾಂಡ್ ಏರಿಯಾಗೆ ಸಂಬಂಧಪಟ್ಟಿದ್ದು ಆಗಿರುತ್ತದೆ. It is a specialised authority for special purpose.

ಇದರ ಜೊತೆ specialised, authority for the specialised purpose ಅದನ್ನು ತಾವು ಕೂಡ ರಿಪೀಟ್ ಮಾಡತಕ್ಕದ್ದು ಸರಿಯೇ? ಬಾಗಲ್‌ಕೋಟೆ ರೀ–ಕನ್‌ಸ್ಟ್ರಕ್ಷನ್‌ಗೆ ಬೇರೆ ಪುರಸಭೆಗಳಿಗೆ ಅನ್ವಯಿಸುವ ಪ್ಯಾರಾಮೀಟರ್ ಅನ್ನು ಹಾಕಿದರೆ ಹೇಗೆ? ಅದನ್ನು ಬಹುಶಃ ತಪ್ಪಾಗಿ ಬಾಗಲ್‌ಕೋಟೆ ಎಂದು ಸೇರಿಸಿದ್ದೀರಿ ಎಂದು ನನಗೆ ಅನ್ನಿಸುತ್ತದೆ. ಈ ಟೌನ್ ಡೆವಲಪ್‌ಮೆಂಟ್, ಇದರಲ್ಲಿ ಏನು

ಆಗಿದೆ? ಯಾವಾಗಲೂ ಹೇಳುತ್ತಿದ್ದೇನೆ. ಜನಗಳ ಪ್ರತಿನಿಧಿಗಳು ಜನರಿಗೆ ಜವಾಬ್ದಾರಿ ಇರುತ್ತಾರೆ. ಇದರಲ್ಲಿ ನಾನು ನೋಡಿದ ಹಾಗೆ ಸುಮಾರು ೧೨ ಸದಸ್ಯರು ಬರುತ್ತಾರೆ. ಇಬ್ಬರು ಮಾತ್ರ ಜನರ ಪ್ರತಿನಿಧಿಗಳು ಇರುತ್ತಾರೆ, ಇನ್ನು ಉಳಿದವರು ೧೦ ಜನ ಅಧಿಕಾರಿಗಳು ಇರುತ್ತಾರೆ. ಇದರ ಅರ್ಥ ಏನು ಆಗುತ್ತದೆ ಅಂದರೆ ಅಧಿಕಾರಿಗಳು ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡುತ್ತಾರೆ, ಅಧಿಕಾರೇತರರು ಕೆಲಸ ಮಾಡುವುದಿಲ್ಲ ಎಂದು ನಾವೇ ಈ ಮಸೂದೆಯನ್ನು ಮಂಜೂರು ಮಾಡಿದ ಹಾಗೆ ಆಗುತ್ತದೆ. ಅಧಿಕಾರೇತರರಿಗೆ ಯಾಕೆ ಹೆಚ್ಚು ಪ್ರಾತಿನಿಧ್ಯ ಕೊಡಬಾರದು ಇದನ್ನು ತಾವು ಆಲೋಚನೆ ಮಾಡಬೇಕು. ಈಗ ಕಾರ್ಪೊರೇಷನ್‌ಗಳು, ಸಿಟಿ ಮುನಿಸಿಪಾಲಿಟಿಗಳು ಮತ್ತು ಒಂದಕ್ಕೊಂದು ಸಂಬಂಧಿಸಿದಂತೆ ಸಮಸ್ಯೆಗಳು ಇರುವುದರಿಂದ, ಕೆಲವು ಅಧಿಕಾರಿಗಳಿಗೆ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್‌ನಲ್ಲಿ ಅನೇಕ ಫಂಕ್ಷನ್‌ಗಳನ್ನು ಚಟುವಟಿಕೆಗಳನ್ನು ತಾವು ಕಾರ್ಪೊರೇಷನ್‌ಗೆ ಕೊಡಬೇಕಾಗುತ್ತದೆ. ಇದನ್ನು ತಾವು ಆಲೋಚನೆ ಮಾಡಬೇಕಾಗಿದೆ. ಮಂಗಳೂರು ನಗರ ಯಾವ ರೀತಿ ಬೆಳೆಯುತ್ತಿದೆ ಎಂಬುದನ್ನು ಮಾನ್ಯ ಸದಸ್ಯರು ನೋಡಿರಬಹುದು. ಅಲ್ಲಿ ಗಗನಚುಂಬಿ ಕಟ್ಟಡಗಳು ಬರುತ್ತವೆ. ಬೆಂಗಳೂರಿನಲ್ಲಿ, ಮಂಗಳೂರಿನಲ್ಲಿ ಬರುತ್ತವೆ. ಇವೆಲ್ಲಾ ಕೂಡ ಎಲ್ಲಾ ಕಾರ್ಪೊರೇಷನ್‌ಗಳು ಕೊಡಬಾರದೆಂದು ಇದ್ದರೂ ಪ್ಲಾನಿಂಗ್ ಅಥಾರಿಟಿ ಅಲ್ಲಿ ಬರುತ್ತಾರೆ. ವಿಧಾನಸೌಧಕ್ಕೆ ಮಂಜೂರಾತಿಗಾಗಿ ಬರುತ್ತಾರೆ. ಕಟ್ಟಡವನ್ನು ಕಟ್ಟಿಯೇ ಬಿಡುತ್ತಾರೆ, ಆದ್ದರಿಂದ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಾರೆ. ಈ ಪ್ಲಾನಿಂಗ್ ಅಥಾರಿಟಿ ಅಧಿಕಾರಿಗಳ ಕೈಯಲ್ಲಿ ಇರುತ್ತವೆ. ಹಾಗೂ ಅಧಿಕಾರಿಗಳ ಅಂಕುಶ ಇರುತ್ತವೆ. ವಿಧಾನಸೌಧದಲ್ಲಿ ಈ ಅಂಕುಶದಿಂದ ಅಧಿಕಾರಿಗಳು ಹೇಳುವ ಹಾಗೆ ಕುಣಿಯುವಂತಹ ಪರಿಸ್ಥಿತಿ ಬರುತ್ತದೆ. ಯಾವ ಒಂದು ಹತೋಟಿಯನ್ನು ಹಾಕಬೇಕು ಎಂದು ನಮ್ಮ ಉದ್ದೇಶವಿದೆಯೋ ಅದು ಸಫಲವಾಗುವುದಿಲ್ಲ. ಅಧಿಕಾರಿಗಳು ಯಾವ ರೀತಿಯಲ್ಲಿ ಇವೊತ್ತು ಕಾನೂನನ್ನು ಸಂಪೂರ್ಣವಾಗಿ ಮುರಿದು ಸದೆಬಡಿಯುತಕ್ಕ ಕೆಲಸ ಮಾಡುತ್ತಾರೆ. ಎಂಬುದರ ಬಗ್ಗೆ ಬಹುಶಃ ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ಡಿವಿಜನ್ ಬೆಂಚಿನ ಒಂದು ಜಡ್ಜ್‌ಮೆಂಟ್ ಆಗಿದೆ. ಅದು ಗ್ರೀನ್ ಬೆಲ್ಟ್‌ಗೆ ಸಂಬಂಧಪಟ್ಟಂತೆ ಒಂದು ನಿರ್ಣಯ ಆಗಿದೆ. Mr. Justice, Rama Jois, Justice Ramakrishna ಅವರು Spl. D. C. Vs Bhargavi Madhavan ಡಿಸಿಷನ್‌ನಲ್ಲಿ Indian Law Report, Karnataka ILR 1987 Page 1260 ಒಂದು ನಿರ್ಣಯ ಕೊಟ್ಟಿದ್ದಾರೆ. ಯಾಕೆ ಒಂದು ಉದಾಹರಣೆ ಕೊಡುತ್ತಿದ್ದೇನೆ ಎಂದರೆ ಅಧಿಕಾರಿಗಳು ಯಾವ ರೀತಿ ಅಧಿಕಾರವನ್ನು ದುರುಪಯೋಗ ಮಾಡುತ್ತಿದ್ದಾರೆ ಎಂಬುದನ್ನು ತಮಗೆ ಮನವರಿಕೆ ಮಾಡಿಕೊಡಲು ಇದು ಪ್ರಮುಖವಾಗಿ ಬೆಂಗಳೂರು ಸುತ್ತಮುತ್ತ ಇರುವ ಗ್ರೀನ್ ಬೆಲ್ಟ್. ಇದು ಮಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ ನಗರಗಳಲ್ಲಿ, ಬೆಂಗಳೂರಿನಲ್ಲಿ ನಡೆಯುತ್ತಿರಬಹುದು. ಈ ಪರಿಸ್ಥಿತಿಯನ್ನು ತನಿಖೆ ಮಾಡಿ ಉದ್ಭವವಾದ ವರದಿಯನ್ನು ತರಿಸಬಹುದು. ಇಂತಹ ಅನೇಕ ಪ್ರಕರಣಗಳು ನಡೆದಿದೆ. ಇದರಲ್ಲಿ ೧೯೮೬ರಲ್ಲಿ ಸಿ.ಡಿ.ಪಿ. ಪ್ಲಾನ್ ಎಲ್ಲಾ ಮಂಜೂರು ಆಗಿದೆ. ಅದನ್ನು ಅನುಷ್ಠಾನ ಮಾಡಬೇಕು, ಕಾನೂನು ಇದ್ದರೂ ಕೂಡ ಅದನ್ನು ಸಂಪೂರ್ಣವಾಗಿ ಉಲ್ಲಂಘಿಸಿ ವಿಧಾನಸೌಧದಿಂದ ಒಂದು ಸರ್ಕ್ಯುಲರ್ ಕೊಟ್ಟಿದ್ದಾರೆ. ಈ ಜಡ್ಜ್‌ಮೆಂಟ್‌ನಲ್ಲಿ ಏನು ಹೇಳಿದ್ದಾರೆಂದರೆ,—

> "After more than $1\frac{1}{2}$ years after Comprehensive Development Plan came into force the Government had issued directions to all the Deputy Commissioners including the Deputy Commissioner, Bangalore, not to reject the permission for conversion of agricultural land for non-agricultural use assuming the existence of Green Belt. There is no mention to the CDP in the Gov rnment Circular dated 29-7-1986 which was sent the Deputy Commissionerof Bangalore City and Rural Districts.

OBITER

The gravity and magnitude of subversion of law disclosed in this case are such as would call for an immediate enquiry and in particular in respect of the following matters :

(1) Why in issuing the directions to the Deputy Commissioner Bangalore regarding grant of permission for conversion of agricultural lands laying in the Green Belt area for non-agricultural use and in Circular dated 29-7-1986 issued by the Government informing the Deputy Commissioners of all the Districts including those of Bangalore Urban and Rural Districts. The existence of Green Belt for Bangalore City Planning area under the CDP was ignored andwho were all responsible for its issue when the CDP which specified the Green Belt for Bangalore City Planning Area had been approved by the Government itself on 12-10-1984 and was published in the official Gazette on 18-10-1984 and the Government had itself relief on it before this Court in the case of Jayashree decided on 25-8-1985 and its plea had been upheld and what action should be taken in the matter ?

(ii) How many permissions have been granted in violation of the CDP and what action should be taken to annual such permissions given in contravention of the CDP?

(iii) Why a ground relying on the CDP was not taken in these cases before, the Tribunal before the Learned Judge and in these appeals?"

ದಿನಾಂಕ ೨೫–೮–೧೯೮೫ರಲ್ಲಿ ಈ ಒಂದು ತೀರ್ಮಾನ ಬಂದಿದೆ. There is a subversion of law. ಈ ತೀರ್ಮಾನವನ್ನು ನೋಡಿದಾಗ ನೀವು ಕಾನೂನನ್ನು ಸಂಪೂರ್ಣವಾಗಿ ಸಡಿಬಡಿದಿದ್ದೀರಿ ಎಂದು ಅರ್ಥವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಹೇಗೆ?

ಶ್ರೀ ಎಂ. ಚಂದ್ರಶೇಖರ್.—ಬಂದಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನಿಮ್ಮ ಗಮನಕ್ಕೆ ಬಂದಿದ್ದರೆ ಇದರ ಬಗ್ಗೆ ಏತಕ್ಕೆ ವಿಚಾರಣೆ ಮಾಡಲಿಲ್ಲ ? ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಬೇಕು. ಇದು ಹೈಕೋರ್ಟಿನ ಡಿವಿಜನ್ ಬೆಂಚ್‌ನಿಂದ ಬಂದಿರುವಂತಹ ತೀರ್ಮಾನ. ಇದರ ಬಗ್ಗೆ ಅಂದರೆ ಕಾನೂನನ್ನು ಮುರಿದ ಬಗ್ಗೆ ಸರ್ಕಾರ ತನಿಖೆ ಮಾಡಬೇಕು. ಇದಕ್ಕೆ ಸಂಬಂಧ ಪಟ್ಟಂತೆ ಅವರೇ ಇಷ್ಯೂಸ್ ಫ್ರೇಮ್ ಮಾಡಿದ್ದಾರೆ. ಎನ್‌ಕ್ವೈರಿ ರೆಫರೆನ್ಸ್ ಸಹ ಅವರು ನಿಮ್ಮ ಇಲಾಖೆಗೆ ಕೊಟ್ಟಿದ್ದಾರೆ. ಆದ್ದರಿಂದ ಇದಕ್ಕೆ ಯಾರು ಯಾರು ಜವಾಬ್ದಾರರು ಎಂಬ ಬಗ್ಗೆ ತನಿಖೆ ನಡೆಸಬೇಕು. ಹೈಕೋರ್ಟಿನವರು ಇದರ ಬಗ್ಗೆ ತನಿಖೆ ಮಾಡಬೇಕೆಂದು ಹೇಳಿದ ಮೇಲೂ ಸಹ ನೀವು ಏತಕ್ಕೆ ವಿಚಾರಣೆ ನಡೆಸಲಿಲ್ಲ ? ಇದಕ್ಕೆ ಏನು ಕಾರಣ ಎಂಬುದನ್ನು ನೀವು ನಮಗೆ ಹೇಳಬೇಕಾಗುತ್ತದೆ. ಸಿ. ಡಿ. ಪಿ. ಏರಿಯಾ ಮೀರಿದು ಎಷ್ಟು ಕಡೆಗಳಲ್ಲಿ ಇಂತಹ ಪರ್ಮಿಷನ್ ಕೊಟ್ಟಿದ್ದಾರೆಂಬುದನ್ನು ತಾವು ತಿಳಿಸಬೇಕು. ಈ ಸದನಕ್ಕೆ ತಾವು ಎಲ್ಲಾ ರೀತಿಯ ವಿವರಗಳನ್ನು ಕೊಡಬೇಕು ಮತ್ತು ಇದರ ಬಗ್ಗೆ ತಾವು ನ್ಯಾಯಾಂಗ ವಿಚಾರಣೆ ಮಾಡಬೇಕು. ಹೈಕೋರ್ಟಿನ ಈ ತೀರ್ಮಾನವನ್ನು ತಾವು ಓದಿದ್ದರೆ ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಾವು ಹೇಳಬೇಕು. ಇಂತಹ ಒಂದು ಗಂಭೀರ ಆಪಾದನೆಯ ಬಗ್ಗೆ ತಾವು ಕ್ರಮ ತೆಗೆದು

ಕೊಳ್ಳದೆ, ಈ ಒಂದು ತೀರ್ಮಾನವನ್ನು ತಾವು ತಮ್ಮ ಕುರ್ಚಿಯ ಅಡಿಯಲ್ಲಿಟ್ಟುಕೊಂಡು, ಅದರ ಮೇಲೆ ಕುಳಿತುಕೊಳ್ಳುವಂತಹ ದಾಷ್ಟ್ಯತನವನ್ನು ತೋರಿಸುವುದಾದರೆ ತಾವೂ ಸಹ ಇದರಲ್ಲಿ ಭಾಗಿಯಾಗಿದ್ದೀರಿ ಎಂದು ಅರ್ಥವಾಗುತ್ತದೆ. ನ್ಯಾಯಾಲಯ ಕೊಟ್ಟಂತಹ ಯಾವುದೇ ಒಂದು ತೀರ್ಪನ್ನು ಅಥವಾ ಆಜ್ಞೆಯನ್ನು ನೀವು ಗಣನೆಗೆ ತೆಗೆದುಕೊಳ್ಳುವುದಿಲ್ಲವೆನ್ನುವುದಾದರೆ. ನ್ಯಾಯಾಂಗವನ್ನು ಉಲ್ಲಂಘನೆ ಮಾಡಿ ನ್ಯಾಯಾಂಗದ ಮೇಲೆ ಸವಾರಿ ಮಾಡುವಂತಹ ಸರ್ಕಾರ ಇದು ಎಂದು ನಾವು ಭಾವಿಸಬೇಕಾಗುತ್ತದೆ. ಇದೇ ನಿಮ್ಮ ಧೋರಣೆ ಮತ್ತು ನೀತಿಯಾಗಿದ್ದರೆ ಮತ್ತು ನ್ಯಾಯಾಂಗದ ಮೇಲೆ ನಿಮಗೆ ಗೌರವ ಇಲ್ಲದಿದ್ದರೆ, ಅದನ್ನು ನೀವು ಇಲ್ಲಿ ಹೇಳಬೇಕೆಂದು ಒತ್ತಾಯ ಮಾಡಿ ಹೇಳುತ್ತೇನೆ. ಇವತ್ತು ಕಾನೂನು ಏನು ತಂದಿದ್ದಾರೆ, ಅಕ್ರಮಗಳಿಗೆ ಅವಕಾಶ ಮಾಡಿಕೊಡತಕ್ಕಂಥಾದ್ದು ಮತ್ತು ಪ್ಲಾನಿಂಗ್ ಪ್ರೊಸೆಸನ್ನು ಸದೆ ಬಡಿಯತಕ್ಕಂಥಾದ್ದು ಏನು ಮಾಡಿದ್ದೀರಿ ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು, ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೊಡಬೇಕು. ಈ ಒಂದು ತೀರ್ಪಿನಲ್ಲಿ ಕೊಟ್ಟಹಾಗೆ, ಪರ್ಮಿಷನ್ ಕೊಟ್ಟ ವಿಚಾರದಲ್ಲಿ ನ್ಯಾಯಾಂಗ ವಿಚಾರಣೆ ನಡೆಸಬೇಕು ಎಂದು ತಮ್ಮ ಮುಖೇನ ಸರ್ಕಾರಕ್ಕೆ ಆಗ್ರಹಪಡಿಸಿ, ನನಗೆ ಕೆಲವು ಮಾತುಗಳನ್ನು ಆಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀಮಂತಿ ಬೇಗಂ ಅವರೇ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾಳೆ ಡಿಸ್ಕಷನ್ ಕಂಟಿನ್ಯೂ ಮಾಡಬಹುದು. ಈಗ ಅಟ್ರಾಸಿಟೀಸ್ ವಿಚಾರವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಇಬ್ಬರು ಮಾತನಾಡಲಿ, ಮಾನ್ಯ ಲಕ್ಷ್ಮೀಸಾಗರ್‌ರವರು ಬರಲಿ, ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೆಳಿಗ್ಗೆ ೧೧ ಗಂಟೆಯಿಂದ ಕುಳಿತಿದ್ದೇವೆ. ಈಗ ೪–೩೦ ಆಗುತ್ತಿದೆ. ಇನ್ನು ಯಾವಾಗ ತೆಗೆದುಕೊಳ್ಳುವುದು ?

ಅಧ್ಯಕ್ಷರು.—ಯಾವುದನ್ನು ಬಿಡುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಮಹತ್ವವಾದಂಥ ವಿಷಯ. ಐದೈದು ನಿಮಿಷ ಮಾತನಾಡಿದರೆ ಹೇಗೆ ಸರಿಹೋಗುತ್ತದೆ. ೨–೩ ತಾಸು ಚರ್ಚೆಗೆ ಕೊಡಬೇಕು.

ಶ್ರೀ ಎಂ. ಚಂದ್ರಶೇಖರ್.—ಈಗ ಇದರ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ಅದನ್ನು ಇವತ್ತು ಮುಗಿಸಬೇಕು, ನಾಳೆ ಕೌನ್ಸಿನಲ್ಲಿ ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ದಯವಿಟ್ಟು ಇದನ್ನು ಮುಗಿಸಿ ಕೊಡಬೇಕು.

ಅಧ್ಯಕ್ಷರು.—ಈಗ ಇದನ್ನು ಮುಗಿಸಿ, ಆಮೇಲೆ ಅದನ್ನು ತೆಗೆದುಕೊಳ್ಳೋಣ. ಶ್ರೀಮಂತಿ ಬೇಗಂರವರೆ, ಪ್ರಾರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ೫–೬ ಗಂಟೆ ಆದಮೇಲೆ ಯಾವಾಗ ತೆಗೆದುಕೊಳ್ಳುತ್ತೀರಿ. ಸಮಯ ಎಲ್ಲಿದೆ.

ಶ್ರೀ ಬಿ. ಲಕ್ಕಪ್ಪ.—ಅರ್ಧ ಗಂಟೆ ಚರ್ಚೆ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೇಕಾದರೆ ಸೋಮವಾರದ ದಿವಸ ಡಿಸ್ಕಷನ್‌ಗೆ ರೆಡಿ ಇದ್ದೇನೆ. ಸೋಮವಾರ ಹಾಕಿಬಿಡಿ.

ಅಧ್ಯಕ್ಷರು.—ಅದನ್ನೂ ಮುಗಿಸೋಣ, ನಿಮ್ಮದನ್ನೂ ಮುಗಿಸೋಣ. ಸೆನ್ಸ್ ಆಫ್ ದಿ ತೆಗೆದುಕೊಂಡು ಮುಂದೆ ಹೋಗಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರದು ಬ್ರೂಟ್ ಮೆಜಾರಿಟಿ ಇದೆ, ಅವರು ಬೇಡ ಅಂದರೆ ತಳ್ಳಿಹಾಕುತ್ತೀರಾ ?

ಅಧ್ಯಕ್ಷರು.—ಸದನದ ಅಭಿಪ್ರಾಯ ಇದೆ.

ಶ್ರೀ ಆರ್. ಎನ್. ನಾಯಕ್.—ಸದನ ಕರೆಯಬೇಕಾದರೆ ಸದನದ ಅಭಿಪ್ರಾಯ ಕೇಳಿದಿರಾ...

ಅಧ್ಯಕ್ಷರು.—ಶ್ರೀಮಂತಿ ಬೇಗಂರವರೇ ಪ್ರಾರಂಭ ಮಾಡಿ.

† SMT. MUKTHARUNNISA (Narasimharaja).—Mr. Speaker, Sir, I thank you for giving me an opportunity to speak on this Bill, Sir, On page 11 it is mentioned:

> "14. Objects of the Authority.—The objects of the Authority shall be the planning and promoting and securing the development of the urban area and for these purposes the Authority shall have the power to acquire........."

Secondly on page 14, in para 18 it is mentioned as 'Sanction of the scheme'. I would like to say a few points on these two subjects. In Mysore City, already 2000 houses in revenue lands were Demolished in 1985 with bulldozer. When the poorest sections failed to get the site in the City limits, they purchased sites on revenue lands and constructed houses. By taking loans from banks and money-lenders, they costructed small houses. At that time, they had no idea at all about the conversion and alienation, etc. The concerned persons also have not advised them and not directed them to do so. Somehow, unfortunately this incident happened. They appealed and started agitation also. I am very thankful to the Hon. Chief Minister because.

4-30 p. m.

He had declared to regularise 24 layouts which were outside the Corporation limits. He was kind enough to form a Committee consisting of all MLAs of Mysore and the Mayor as the Chairman, who conducted four meetings. We have already started the work and one area viz., Gundu Rao Nagar is already completed. Still we are going area by area. Mysore City is an urban area. There is Town Planning Department and City Improvement Trust Board. I learnt there is a proposal to combine the Board to be called as Mysore Development Authority. It is a good proposal. I would like to know when will it be finalised.

Secondly, they have announced a scheme called "Asha Mandir' for Mysore City. There are so many siteless and houseless people including poor and middle-income group people who need houses. We joined together and met the Chairman, who announced that in each area, meeting will be conducted. It came in newspapers also and the public is also attending those meetings from the day the announcement was made regarding allotment of sites. I would like to ask the Hon. Minister, whether they have announced this "Asha Mandir" scheme and whether they have drawn a detailed scheme and taken approval from the department. Also, whether the scheme is

sanctioned by the Government before the announcement was made in Mysore city ? I am not opposing. But why I am asking is, unfortunately the schem, was sanctioned,

ಶ್ರೀ ವೇದಾಂತ ಹೆಮ್ಮಿಗೆ,—ಸ್ವಾಮಿ, ಮುಕ್ತರುನ್ನೀಸಾ ಅವರು ಆಶಾಮಂದಿರದ ಸಭೆಗಳಲ್ಲಿ ಭಾಗವಹಿಸಿ, ಇದು ಒಳ್ಳೆಯ ಯೋಜನೆ ಬಡವರಿಗೆ ಸೈಟು ಹಂಚುವಂಥ ಯೋಜನೆ ಎಂದು ಹೇಳುತ್ತಿದ್ದರು. ಇಲ್ಲಿ ಇದಕ್ಕೆ ಸರ್ಕಾರದ ಮಂಜೂರಾತಿ ಸಿಕ್ಕಿದೆಯೋ ಎಂದು ಕೇಳುತ್ತಿದ್ದಾರೆ.

SMT. MUKTHARUNNISA.—I am alao attending that meeting. I am happy if sitless people get sites and houseless people get houses for which I am also fighting f r in Mysore city. I am not opposing, but one should not get the impression that the scheme is not sanctioned by the Govrnment because there is no money. Wo are facing the public I am also attending the meetings. Don t think because it is a Jana.ta Gavernment sponsored scheme I am opposing. For betterment and progress of Mysore city, I always join and I have been a ttending every meeting. So, people are very happy. No doubt every week they are getting the order on hand and they have already paid Rs. 50 for EWS and lower income groups and Rs. 200 for middle-income group. When they bring that order slip in the meet ing, they will get the allotment order and they have to pay Rs. 2000 Rs. 4000 according to the rates fixed. I am happyabout it. But, what I am afraid of is, there is no layout uptill now. Ehen where are we going to provide sites and houses ? We cannot see if any unfortunate thing occurs. Now the Hon'ble Chief Minister is sitting here I am requesting him to sanction the scheme and approve the layyurs According to rules, if it is approved by the department. I have no objection : if it is sanctioned I have no objection. If it is not sanctioned, kindly take up this matter and see that the layouts are sanctioned immediately.

Sir, there are some places outside Mysore City. People used to cultivate lands there. Now what has happend is that the population has grown like a ocean and buildings will have to come up like a ocean. Some revenue land is being cultivated by some poorest sections of the people. Now some people wanted alienation. The matter came up before the Trust Board. People are cultivating on the lands which are very close to the city and on such lands some people have formed societies, some are genuine societies formed by Officials of State Bank of India and some Officials from Agricultural Department have also formed a society in order to form sites. I feel that these places should be sanctioned to the societies and the same should be regularised as has been agreed to by our Chief Minister to regularise 24 layouts in Mysore City.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ಸಚಿವರು ಈ ದಿವಸ ಸಭೆಯ ಮುಂದೆ ಏನು ಮಸೂದೆಯನ್ನು ತಂದಿದ್ದಾರೆ ಇದರ ಬಗ್ಗೆ ನನಗೆ ಒಂದು ಸಂಶಯ ಇದೆ.

ಎರಡನೆಯದಾಗಿ, ಈ ಮಸೂದೆಯನ್ನು ಏತಕ್ಕಾದರೂ ತಂದರೋ ಎಂಬುದು ನನಗೆ ಅರಿವಾಗುತ್ತಿಲ್ಲ. ಅರ್ಬನ್ ಏರಿಯಾಗಳಲ್ಲಿ ಇಂಥ ಸಂಸ್ಥೆಗಳನ್ನು ಹೊಸದಾಗಿ ನಿರ್ಮಾಣ ಮಾಡಬೇಕೆಂದು ಮಾಡಿದ್ದಾರೆ. ಇದರಿಂದ ಏನಾಗುತ್ತದೆಂದರೆ ಎಷ್ಟು ಮುನಿಸಿಪಾಲಿಟಿಗಳು ನಮ್ಮಲ್ಲಿವೆ ಅಷ್ಟು ಸಂಸ್ಥೆಗಳನ್ನು ನಿರ್ಮಾಣ ಮಾಡಬೇಕು. ಮೈಸೂರು ಸಿಟಿ ಕಾರ್ಪೊರೇಷನ್ ಆಗಿದೆ. ಅದನ್ನು ಇದರಲ್ಲಿ ಸೇರಿಸಿದ್ದಾರೆ. ಆದರೆ ಹುಬ್ಬಳ್ಳಿ, ಬೆಳಗಾಂ ಮುಂತಾದ ಬೇರೆ ಕಾರ್ಪೊರೇಷನ್‌ಗಳನ್ನು ಇದರಲ್ಲಿ ಸೇರಿಸಿಲ್ಲ. ಇದರಉದ್ದೇಶವಾದರೂ ಏನು ? ಇದರ ಹಿನ್ನೆಲೆ ಏನು ? ಈ ಬೆಂಗಳೂರನ್ನು ಏತಕ್ಕೆ ಸೇರಿಸಲಿಲ್ಲ ? ಬೆಂಗಳೂರು ಪ್ರಾಧಿಕಾರವನ್ನು ಏತಕ್ಕೆ ಇದರಲ್ಲಿ ಸೇರಿಸಲಿಲ್ಲ ? ನಾನು ಹಿಂದೆ ಪೌರಾಡಳಿತ ಸಚಿವನಾಗಿದ್ದಾಗ ಇದೇ ಕೆಲಸವನ್ನು ಮಾಡಿದ್ದೇನೆ. ಹಿಂದೆ ಇದು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಅಂತ ಇತ್ತು. ಈಗ ನೀವು ಏನು ಮಾಡುತ್ತಿದ್ದೀರಿ ಎಂದರೆ ಎಲ್ಲ ಕಡೆಗಳಲ್ಲೂ ಅಥಾರಿಟಿಗಳನ್ನು ಮಾಡಬೇಕೆಂದು ಹೊರಟಿದ್ದೀರಿ, ಆದರೆ ರಾಜ್ಯದಲ್ಲಿ ಎಷ್ಟು ಅಥಾರಿಟಿಗಳನ್ನು ನಿರ್ಮಾಣ ಮಾಡಬೇಕು. ಅವುಗಳಿಗೆ ಎಷ್ಟೆಷ್ಟು ಹಣವನ್ನು ಕೊಡಬೇಕೆಂದು ಮಾಡಿದ್ದೀರಿ ಅದು ಏನನ್ನೂ ಇಲ್ಲಿ ಹೇಳಿಲ್ಲ, ಇವುಗಳ ಕೆಲಸ ಏನು ? ಜಮೀನನ್ನು ಅಕ್ವೈರ್ ಮಾಡಿಕೊಳ್ಳತಕ್ಕದ್ದು. ಲೇಔಟ್‌ಗಳನ್ನು ಮಾಡತಕ್ಕದ್ದು, ಯಾರ್ಯಾರಿಗೆ ನಿವೇಶನಗಳಿಲ್ಲ ಅಂಥವರಿಗೆ ಕೊಡಬೇಕೆಂದು ಮಾಡಿದ್ದೀರಿ. ಹಿಂದೆ ನಾನು ಇದ್ದಾಗ ರಿವಾಲ್ವಿಂಗ್ ಫಂಡ್ ಎಂದು ಮುನಿಸಿಪಾಲಿಟಿಗಳಲ್ಲಿ ಇತ್ತು. ಆದರೆ ಬಹಳಷ್ಟು ಮುನಿಸಿಪಾಲಿಟಿಗಳು ಆ ಫಂಡನ್ನೆಲ್ಲಾ ತಿಂದು ಹಾಕಿದವು. ಈಗ ನಿಮ್ಮ ಈ ಅಥಾರಿಟಿಗಳೂ ಕೂಡ ಅದೇ ಕೆಲಸವನ್ನು ಮಾಡುತ್ತೇವೆಂದು ನನಗೆ ಅರಿವು. ಮುನಿಸಿಪಾಲಿಟಿಗಳು ಎಂದರೆ ಅವು ಜನರ ಸಂಸ್ಥೆಗಳು. ನೀವು ಎಲ್ಲಾ ಅಧಿಕಾರಿಗಳನ್ನೂ ಜನರ ಕೈಗೆ ಕೊಡಬೇಕೆಂದು ಹೊರಟಿರುವಾಗ ಈ ಅಧಿಕಾರವನ್ನೂ ಅವರಿಗೇ ಕೊಡುವುದನ್ನು ಬಿಟ್ಟು ಇದನ್ನು ಅವರ ಕೈಯಿಂದ ಏತಕ್ಕೆ ಕಿತ್ತುಕೊಳ್ಳುವ ಪ್ರಯತ್ನ ಮಾಡುತ್ತಿದ್ದೀರಿ. ಚುನಾವಣೆಯ ಸಂದರ್ಭದಲ್ಲಿ ನಾವು ಜನರ ಕೈಗೇ ಎಲ್ಲಾ ಅಧಿಕಾರಗಳನ್ನೂ ಕೊಡುತ್ತೇವೆ ಎಂದುಹೇಳುತ್ತೀರಿ ಆದರೆ ಈ ಚುನಾವಣೆಯಲ್ಲಿ ಗೆದ್ದು ಬಂದಮೇಲೆ ಅವರಅಧಿಕಾರವನ್ನು ನೀವು ಕಿತ್ತುಕೊಂಡು ಇಂಥ ಅಥಾರಿಟಿಗಳನ್ನು ಮಾಡುತ್ತೇವೆಂದು ಹೇಳುತ್ತಿರುವುದುಸರಿಯೋ ? ಇದನು ನೀವೇ ಯೋಚನೆ ಮಾಡಿ, ನೀವು ಜನರನ್ನು ಏಕೆ ನಂಬುದಿಲ್ಲ. ನೀವುಜನರನ್ನು ನೀವು ನಂಬಬೇಕು. ಈಗ ನೀವುಏನು ಅಥಾರಿಟಿಯನ್ನು ಮಾಡಲು ಹೋಗುತ್ತಿದ್ದೀರಿ ಅದು ಸರಿಯಲ್ಲ ಏಕೆಂದರೆ, ಈಗಾಗಲೇ ನೀವು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ಮಾಡಿ ಬಹಳಷ್ಟು ಪಶ್ಚಾತ್ತಾಪಪಡುತ್ತಿದ್ದೀರಿ. ಮತ್ತೆ ಈಗ ಅಥಾರಿಟಿಗಳನ್ನೂ ಮಾಡಿ ಅದೇ ರೀತಿ ಪಶ್ಚಾತ್ತಾಪಪಡಬೇಕಾಗುತ್ತದೆ. ಇದೂ ಅದೇರೀತಿ ಆಗುತ್ತದೆಂದು ಹೇಳಬಯಸುತ್ತೇನೆ. ದಯವಿಟ್ಟು ನೀವು ಈ ಕೆಲಸಮಾಡುವುದಕ್ಕೆ ಹೋಗಬೇಡಿ. ಇದರಲ್ಲಿ ಏನೇನು ಕ್ಲಾಸ್‌ಗಳಿವೆ ಅದೇ ಕ್ಲಾಸ್‌ಗಳೂ ಸಿ. ಐ. ಟಿ. ಬಿ.ಯಲ್ಲೂ ಇದೆ.

ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಒಂದು ಮಾತನ್ನು ನಾನು ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಈ ಅಥಾರಿಟಿಗಳ ಛೇರ್ಮನ್‌ಗಳಾಗಲಿ ಅಧಿಕಾರಿಗಳಾಗಲ್ಲಿ ಏನಾದರೂ ದುರುಪಯೋಗ ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೆ ಶಕ್ತಿ ಇಲ್ಲ. ಯಾರು ಅಯೋಗ್ಯತನ ಮಾಡುತ್ತಾರೆ, ಯಾರು ಭ್ರಷ್ಟಾಚಾರ ಮಾಡುತ್ತಾರೆ. ಯಾರು ಲಂಚವನ್ನು ತೆಗೆದುಕೊಂಡು ಬಡಾವಣೆಗಳನ್ನು ಮಾಡುತ್ತಾರೆ ಅವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಇದರಲ್ಲಿ ಏನಾದರೂ ಅವಕಾಶ ಇದೆಯೆ ಎಂದರೆ, ಏನೂ ಇಲ್ಲ. ಈ ಬೆಂಗಳೂರಿನಲ್ಲಿ ಸುಮಾರು ೩೦೦ ಸೊಸೈಟಿಗಳು ನಾವು ನಿವೇಶನಗಳನ್ನು ಹಂಚುತ್ತೇವೆಂದು ಹೇಳಿಕೊಂಡು ಜನರಿಂದ ಹಣ ಕೇಳುತ್ತಿವೆ. ಈ ಸೊಸೈಟಿಗಳು ನಿವೇಶನಗಳನ್ನು ಹಂಚುವ ನೆಪದಲ್ಲಿ ಜನರಿಂದ ದುಡ್ಡು ಕಿತ್ತುಕೊಳ್ಳಲು ಅವಕಾಶ ಮಾಡಿ ಕೊಟ್ಟಿದ್ದೀರಿ. ನಾನಾದರೂ ಹೇಳುತ್ತೇನೆ, ಬೆಂಗಳೂರು ಪ್ರಾಧಿಕಾರದವರು, ಬೆಂಗಳೂರು ಕಾರ್ಪೊರೇಷನ್‌ನವರು, ಪ್ಲಾನಿಂಗ್ ಅಥಾರಿಟಿಗಳು ಇರುವಾಗ ಈ ಸೊಸೈಟಿಗಳಿಗೆ ನೀವು ಏತಕ್ಕೆ ಅವಕಾಶ ಕೊಡುತ್ತಿದ್ದೀರಿ ? ಕಾರ್ಪೊರೇಷನ್, ಪ್ಲಾನಿಂಗ್ ಅಥಾರಿಟಿಗಳು ಇರುವುದಾದರೂ ಏತಕ್ಕೆ ?

ಸ್ವಾಮಿ, ಬಿ. ಡಿ. ಎ. ಒಂದು ಸಂಸ್ಥೆ. ತಮಗೆಲ್ಲಾ ಗೊತ್ತಿರುವಂತೆ ಇದರಲ್ಲಿ ಹಲವಾರು ದುರುಪಯೋಗಗಳಾಗಿವೆ. ನಿಮ್ಮ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದಾಗ ನಾಡಿನ ಜನರಿಗೆ ಒಂದು ಭರವಸೆಯನ್ನು ಕೊಟ್ಟಿದ್ದರು. ಅದೇನೆಂದರೆ ಇಲ್ಲಿ ಏನೇನು ದುರುಪಯೋಗಗಳಾಗಿವೆ. ಅದರ ಬಗ್ಗೆ ಒಂದು ವೈಟ್ ಪೇಪರ್ (ಶ್ವೇತಪತ್ರ)ನ್ನು ಹೊರಡಿಸಿ ತಪ್ಪಿತಸ್ಥರ ವಿರುದ್ಧ ತೀವ್ರಕ್ರಮ ತೆಗೆದುಕೊಳ್ಳುತ್ತೇವೆಂದು ಜನರಿಗೆ ವಾಗ್ದಾನ ಮಾಡಿದರು. ನಾನು ಇದನ್ನು ವಾಗ್ದಾನ ಮಾಡಿ ಜಾರಿಗೆ ಕೊಡಲಿ ಎಂದು ಕೇಳುವುದಿಲ್ಲ. ಅಷ್ಯೂರೆನ್ಸ್ ಕಮಿಟಿಗೆ ರೆಫರ್ ಮಾಡಿದ್ದರೂ ಅದರ ಬಗ್ಗೆ ಕೇಳಲು ಹೋಗುವುದಿಲ್ಲ. ತಮ್ಮ ಮೇಲೆ ನಂಬಿಕೆ ಇದೆ. ಆ ಶಕ್ತಿಯೂ ತಮಗೆ ಇದೆ. ಅಧಿಕಾರಿಗಳು ಅಧಿಕಾರವನ್ನೂ ದುರುಪಯೋಗ ಮಾಡಿಕೊಂಡು ಜನರಿಗೆ ಮೋಸ ಮಾಡಿದ್ದಾರೆ. ಹಿಂದೆಯೂ ಕೂಡ ಮೋಸ ಮಾಡಿದ್ದರು. ತಮ್ಮ ತಮ್ಮ ಸಂಬಂಧಿಗಳಿಗೆ ಸೈಟುಗಳನ್ನು ಕೊಟ್ಟಿದ್ದಾರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಅವರು ಅಧ್ಯಕ್ಷರಾಗಿ ಇದ್ದಂಥವರು ಅವರ ಹೆಸರನ್ನೂ ಕೂಡ ಹೇಳಿದ್ದೇನೆ. ಈವತ್ತು ಹೇಳುತ್ತೇನೆ. ಶ್ರೀಮಾನ್ ಕೆ. ಕೆ. ಮೂರ್ತಿಯವರು. ಅವರ ಮೇಲೆ ಈವತ್ತಿನವರೆಗೂ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲ. ನಮಗೆ ಉಳಿದ ಮಾರ್ಗ ಏನೆಂದರೆ ನಾವು ನೇರವಾಗಿ ಕ್ರಿಮಿನಲ್ ಕೋರ್ಟಿಗೆ ಹೋಗಿ ಕೇಸ್ ಹಾಕುವುದು. ಅದನ್ನು ಒಂದು ಬಿಟ್ಟರೇ ಬೇರೆ ಯಾವ ಮಾರ್ಗವೂ ಇಲ್ಲ. ಸರ್ಕಾರಕ್ಕೆ ಸ್ಥೈರ್ಯ ಧೈರ್ಯ ಹಾಗೂ ಸತ್ಯ ಸಂಗತಿಯ ಮೇಲೆ ಪ್ರಜ್ಞೆ ಇರಬೇಕು. ಯಾರು ಅವ್ಯವಹಾರ ಮಾಡಿರುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಆ ಒಂದು ಪ್ರವೃತ್ತಿ ಬರಬೇಕು ಮಾನ್ಯ ರಾಮಕೃಷ್ಣ ಹೆಗಡೆಯವರು ಏನು ವಾಗ್ದಾನ ಮಾಡಿದ್ದಾರೋ ಅದರಂತೆ ಜಾರಿಗೆ ಕೊಡಬೇಕು. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತಾರೋ ಅದನ್ನು ಹೇಳಬೇಕು. ಮತ್ತೆ ಅಮೆಂಡ್‌ಮೆಂಟ್‌ನಲ್ಲಿ Clause 3 (m) "Four persons of whom one shall be a woman and one shall be a person belonging to Scheduled Caste or Scheduled Tribe." ಎಂದು ಮಾಡಿದ್ದೀರಿ. ಜಿಲ್ಲಾ ಪರಿಷತ್ ಜಂಟಿ ಸಲಹಾ ಸಮಿತಿಯಲ್ಲಿ ನಾನು ಕೂಡ ಇದ್ದೆ. ಮಾನ್ಯ ಮಂತ್ರಿಗಳಾದ ನಜೀರ್‌ಸಾಬ್‌ರವರು ನಾವು ಎಲ್ಲಾ ವಾದ ಮಾಡಿದ ಮೇಲೆ ತಪ್ಪು ಆಗಿದೆ ತಿದ್ದಿಕೊಳ್ಳುತ್ತೇವೆಂದು ಹೇಳಿದ್ದಾರೆ. ಜಿಲ್ಲಾ ಪರಿಷತ್ತಿನಲ್ಲಿ ಟಿಕೆಟ್ ಕೊಡಬೇಕಾದರೆ ಜನತಾಪಕ್ಷವಾಗಲಿ, ಕಾಂಗ್ರೆಸ್ ಪಕ್ಷವಾಗಲಿ ಷೆಡ್ಯೂಲ್‌ಕ್ಯಾಸ್ಟ್ ಜನರಿಗೆ ಬಹಳಷ್ಟು ಜನರಿಗೆ ಕೊಡಲಿಲ್ಲ. ಬರೇ ಷೆಡ್ಯೂಲ್‌ಟ್ರೈಬ್ ಜನರಿಗೆ ಕೊಟ್ಟಿದ್ದರಿಂದ ಆ ಜನರಿಗೆ ಅನುಕೂಲವಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ಅಮೆಂಡ್‌ಮೆಂಟ್ ಕೂಡ ಕೊಟ್ಟಿದ್ದೇನೆ. 'or ಎನ್ನುವುದನ್ನು ತೆಗೆದುಬಿಟ್ಟು and 'ಸೇರಿಸಬೇಕೆಂದು ಅಮೆಂಡ್‌ಮೆಂಟ್ ತಂದಿದ್ದೇನೆ. ಈ ಅಮೆಂಡ್‌ಮೆಂಟ್‌ನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಚಂದ್ರಶೇಖರ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ ಈ ಒಂದು ಮಸೂದೆಯಲ್ಲಿ ನಮ್ಮ ವಿರೋಧ ಪಕ್ಷದ ಮಾನ್ಯ ಸದಸ್ಯರು ಭಾಗವಹಿಸಿ ಕೆಲವು ಅಭಿಪ್ರಾಯವನ್ನು ಸೂಚಿಸಿದ್ದಾರೆ. ಅದರ ಬಗ್ಗೆ ಕೆಲವು ವಿವರಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಕೃಷ್ಣನ್‌ರವರು ಪ್ರಾಧಿಕಾರ ರಚನೆಯಲ್ಲಿ ಕಮಿಷನರ್ ಎಂದು ಇದೆ. ಎಕ್ಸ್ ಅಫಿಷಿಯೋ ಎಂದೂ ಇದೆ, ಯಾರೂ ಅವರು ಎಂಬದನ್ನು ಸರಿಯಾಗಿ ಹೇಳಲಿಲ್ಲವೆಂದು ಹೇಳಿದ್ದಾರೆ. ಕಮಿಷನರ್ ಎಂದರೆ ಅರ್ಬನ್ ಡೆವಲಪ್‌ಮೆಂಟ್ ಕಮಿಷನರ್ ಎಂದು. ಎಕ್ಸ್ ಅಫಿಷಿಯೋ ಸೆಕ್ಷನ್ 19ರಲ್ಲಿ ಇರುವಂತೆ ಇರುತ್ತದೆ. ಆಮೇಲೆ ಪೋಲೀಸ್‌ಆಫಿಸರ್ ಒಬ್ಬರನ್ನು ಹಾಕಿದ್ದೀರಿ, ಇವರನ್ನು ಹಾಕತಕ್ಕಂಥ ಅವಶ್ಯಕತೆ ಇತ್ತೆ ಎಂದು ಕೇಳಿದ್ದಾರೆ. ಇದರ ಉದ್ದೇಶವೇನೆಂದರೆ, ಯಾವುದೇ ಒಂದು ಪ್ರದೇಶ, ಒಂದು ನಗರ ಅಭಿವೃದ್ಧಿಯಾಗಬೇಕಾದರೆ ಕಾರ್ಪೋರೇಷನ್, ಮುನಿಸಿಪಾಲಿಟಿ, ಪುರಸಭೆಗಳು ಇರಬೇಕು ಅಲ್ಲಿನ ಪ್ರತಿನಿಧಿಗಳು ಇರಬೇಕು ಅಗತ್ಯಗಳನ್ನು ನೋಡಿಕೊಂಡು ಮಾಡಬೇಕು. ನೀರಿನ ವ್ಯವಸ್ಥೆ, ವಿದ್ಯುಚ್ಛಕ್ತಿಯ ವ್ಯವಸ್ಥೆ ಆರೋಗ್ಯದ ವಿಚಾರ ಇವುಗಳಿಗೆಲ್ಲಾ ಸಲಹೆಗಳನ್ನು ಕೊಟ್ಟು ಯಾವರೀತಿ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗುತ್ತದೆಯೋ ಆ ರೀತಿ ಪೋಲೀಸ್‌ರನ್ನು ಅಳವಡಿಸಿಕೊಳ್ಳಲಾಗಿದೆ. ಏತಕ್ಕೆಂದರೆ ನಗರ ಎಂದು ಹೇಳುವಾಗ ಬಡಾವಣೆಗಳು, ರಸ್ತೆಗಳು ವಾಹನಗಳ ಓಡಾಟಗಳು ಇವೆಲ್ಲಾ ಇರುತ್ತವೆ. ಅದಕ್ಕೋಸ್ಕರವಾಗಿ ಅವರ ಸಲಹೆಯನ್ನು ಪಡೆಯಬೇಕು. ಯಾವುದೇ ಲೇಔಟ್ ಮಾಡಬೇಕಾದರೂ ಸಾರಿಗೆ ಮತ್ತು ರಸ್ತೆಗಳ ವಿನ್ಯಾಸ ಬಹಳಷ್ಟು ಅಗತ್ಯ.

ಒಂದು ವಿಚಾರ ತಮಗೆಲ್ಲಾ ಗೊತ್ತಿರಬಹುದು. ಮಾಧವನ್ ಎಂಬ ಹಿಂದಿನ ಇಂಜಿನಿಯರ್ ಜಯನಗರ ಬಡಾವಣೆಯನ್ನು ಮಾಡಿದರು. ಈಗ ಅದು ನೋಡುವುದಕ್ಕೆ ಬಹಳ ಸುಂದರವಾಗಿ ಕಾಣುತ್ತದೆ. ಆದರೆ ಪೋಲೀಸರು ಮತ್ತು ಸಾರಿಗೆಯವರು ಹೇಳುತ್ತಿದ್ದಾರೆ. ವಾಹನ ಸೌಕರ್ಯದ ವಿಚಾರದಲ್ಲಿ ನೋಡಿದಾಗ ಸರಿಯಾದುದಲ್ಲ, ಅಪಘಾತಗಳು ಆಗುವುದಕ್ಕೆ ಅವಕಾಶ ಇದೆ. ಮುಖ್ಯ ರಸ್ತೆಗಳಿಗೆ ಅಡ್ಡ ರಸ್ತೆಗಳು ಬಂದು ಸೇರುವಾಗ ಅಪಘಾತಗಳಿಗೆ ಅವಕಾಶವಾಗುವಂತೆ ಇದೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.— ಮಾಧವನ್‌ರವರು ಸಿಟಿಯ ರೂಪುರೇಷೆಗಳನ್ನು ಮಾಡಿದ್ದಾರೆ. ಈಗ ಇವರುಗಳ ಸಲಹೆ ಏಕೆ ?

ಶ್ರೀ ಎಂ. ಚಂದ್ರಶೇಖರ್.— ಜಯನಗರ ಇವತ್ತು ಸೌತ್ ಈಸ್ಟ್ ಏಷ್ಯಾದಲ್ಲೇ ಒಳ್ಳೆಯ ಬಡಾವಣೆ ಎಂದು ಹೇಳುವಾಗ, ಆ ಬಡಾವಣೆಯನ್ನು ರೂಪಿಸಿದ ವ್ಯಕ್ತಿಯನ್ನು ನೆನಸಿಕೊಂಡು ಅದರಲ್ಲೇನಾದರೂ ಬದಲಾವಣೆ ಮಾಡುವುದಕ್ಕೆ ಇವರುಗಳ ಸಲಹೆಯೂ ಅಗತ್ಯ ಎಂಬುದು ಒಂದು. ಎರಡನೆಯದು, ಎಲ್ಲರೂ ಚರ್ಚಿಸಿರತಕ್ಕ ವಿಚಾರವನ್ನು ಹೇಳಲೇಬೇಕಾಗುತ್ತದೆ. ಎಷ್ಟು ಪ್ರಯತ್ನ ಮಾಡಿದರೂ ಬಡಾವಣೆಗಳು ಬೆಳವಣಿಗೆ ಯೋಜನಾ ಬದ್ಧವಾಗಿ ಆಗುವುದಕ್ಕೆ ಅವಕಾಶವಾಗುತ್ತಿಲ್ಲ. ಅನಧಿಕೃತವಾದ ಕಟ್ಟಡಗಳು ಬರುತ್ತಿವೆ. ಇಷ್ಟೆಲ್ಲ ಇದ್ದರೂ ಅನಧಿಕೃತ ಕಟ್ಟಡಗಳು ಬಂದಮೇಲೆ ಅವುಗಳನ್ನು ಕೆಡವುವುದಕ್ಕೆ ವ್ಯವಸ್ಥೆ ಮಾಡುವುದರ ಬದಲು ಮೊದಲೇ ಯೋಜನೆಯನ್ನು ಮಾಡುವಾಗ ಅವರುಗಳನ್ನು ಒಳಗೊಂಡಂತೆ ಚರ್ಚೆ ಮಾಡಿ ಇಂಥ ಪ್ರದೇಶದಲ್ಲಿ ನಾವು ಇಷ್ಟು ಜಮೀನನ್ನು ಅಭಿವೃದ್ಧಿಗೆ ತೆಗೆದುಕೊಂಡಿದ್ದೇವೆ ಅಂದಾಗ ಅಷ್ಟು ಪ್ರದೇಶದಲ್ಲಿ ಯಾವುದೇ ಅನಧಿಕೃತ ಬೆಳವಣಿಗೆ ಆಗದೆ ಇರುವುದಕ್ಕೆ ಆ ಇಲಾಖೆಯ ಸಹಾಯ ಅಥಾರಿಟಿಗೆ ಆಗಲಿ ಎಂಬ ಉದ್ದೇಶ ಇದೆ. ಯೋಜನಾ ಬದ್ಧವಾಗಿ ಅಭಿವೃದ್ಧಿ ಆಗಬೇಕೆಂದು ಮಾಡಿ ತಿಳಿವಳಿಕೆ ಇದ್ದೋ ಇಲ್ಲದೆಯೋ ಅನಧಿಕೃತ ಕಟ್ಟಡಗಳು ಬಂದಮೇಲೆ ಕ್ರಮ ಕೈಗೊಳ್ಳುವುದರ ಬದಲು ಮೊದಲೇ ನಿಯಂತ್ರಣ ಮಾಡುವ ಉದ್ದೇಶದಿಂದ ಪೋಲೀಸ್ ಅಧಿಕಾರಿಯನ್ನು ಸದಸ್ಯರನ್ನಾಗಿ ಮಾಡಿದೆ. ಅಧಿಕಾರೇತರರು ಮತ್ತು ಅಧಿಕಾರಿಗಳ ಸಂಖ್ಯೆ ಬಗ್ಗೆ ಹೇಳಿದ್ದಾರೆ. ಸದ್ಯದಲ್ಲಿ ೮ ಜನ ಅಧಿಕಾರೇತರರು ಮತ್ತು ೯ ಜನ ಅಧಿಕಾರಿಗಳು ಮತ್ತು ಒಬ್ಬರು ಶಾಸನಸಭಾ ಸದಸ್ಯರು ಇರುತ್ತಾರೆ. ದೊಡ್ಡದೊಡ್ಡ ನಗರಗಳಿಗೆಲ್ಲಾ ೨-೩ ಕ್ಷೇತ್ರಗಳು ಇರುವುದರಿಂದ ಅವರ ಸಂಖ್ಯೆ ಜಾಸ್ತಿಯಾಗುತ್ತದೆ. ಆದರೂ ಇದರ ಉದ್ದೇಶ, ಹಿಂದೆ ಇದ್ದಂತಹ ಸಿಐಟಿಬಿ. ಮತ್ತು ಟೌನ್ ಪ್ಲಾನಿಂಗ್‌ನಲ್ಲಿ ಏನು ಸದಸ್ಯರು ಇದ್ದರು ಅಷ್ಟಕ್ಕೆ ಸೀಮಿತವಾಗದೆ ನೀರಿನ ವ್ಯವಸ್ಥೆಗಾಗಿ ಕರ್ನಾಟಕ ವಾಟರ್ ಸಪ್ಲೈ ಬೋರ್ಡ್, ವಿದ್ಯುಚ್ಛಕ್ತಿಗೆ ಕೆಇಬಿ. ಹಾಗೆಯೇ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಹೆಲ್ತ್ ಆಫೀಸರ್ ... ಹೀಗೆ ಹೆಚ್ಚಿನ ಜನರ ಉಪಯೋಗ ಮಾಡಿಕೊಳ್ಳಲಿಕ್ಕೆ ಅವರ ಸಲಹೆಗಳನ್ನು ಪಡೆಯುವುದಕ್ಕೆ ಹಾಕಿದ್ದೇವೆಯೇ ಹೊರತು ಅಧಿಕಾರ ನಡೆಸುವುದಕ್ಕೆ ಅಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಹೆಚ್ಚು ಸಂಖ್ಯೆಯ ವ್ಯತ್ಯಾಸ ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಮೀಷನರ್‌ಗೆ ಮತ್ತು ಅಥಾರಿಟಿಗೆ ಏನು ಹಣದ ಅಧಿಕಾರ ಕೊಟ್ಟಿದ್ದೇವೆ ಅದು ಸಾಲದು ಎಂದು ಹೇಳಿದ್ದಾರೆ. ಕಮೀಷನರ್‌ಗೆ ೫ ಲಕ್ಷ, ಅಥಾರಿಟಿಗೆ ೧೫ ಲಕ್ಷ ಎಂದು ಮಾಡಿದ್ದೇವೆ. ಹಿಂದೆ ಇಷ್ಟು ಕೂಡ ಇರಲಿಲ್ಲ. ೩೦–೩೫ ಲಕ್ಷ ಜನಸಂಖ್ಯೆ ಇರತಕ್ಕ ಬೆಂಗಳೂರು ನಗರದ ಪ್ರಾಧಿಕಾರಕ್ಕೂ ಇಷ್ಟೊಂದು ಅಧಿಕಾರವನ್ನು ಕೊಟ್ಟಿರಲಿಲ್ಲ. ಬೆಂಗಳೂರಿಗೆ ಹೋಲಿಸಿ ನೋಡಿದಾಗ ಬೇರೆ ನಗರ ಪ್ರದೇಶಗಳು ಸಣ್ಣವು. ಹುಬ್ಬಳ್ಳಿ ಧಾರವಾಡ ೬ ಲಕ್ಷ, ಮೈಸೂರು ೫½ ಲಕ್ಷ ಜನಸಂಖ್ಯೆಯನ್ನು ಹೊಂದಿದೆ. ಅವೆರಡೇ ದೊಡ್ಡ ನಗರಗಳು, ಮತ್ತೆ ಉಳಿದವೆಲ್ಲ ೨–೨½ ಲಕ್ಷಕ್ಕೆ ಕಡಿಮೆ ಇರತಕ್ಕವುಆಗಿವೆ. ಆ ಕಾರಣದಿಂದಾಗಿ ಅಲ್ಲಿ ನಡೆಯುವಂಥ ಯೋಜನೆಗಳಿಗೆ ಆಗುವ ವೆಚ್ಚವನ್ನು ಅವರ ಅಧಿಕಾರದಲ್ಲಿ ಸೀಮಿತಗೊಳಿಸಿದ್ದೇವೆ. ಅದಕ್ಕಿಂತ ಹೆಚ್ಚಾದರೆ ಸರ್ಕಾರದಲ್ಲಿ ತಂದು ಮಂಜೂರಾತಿ ಪಡೆಯುತ್ತಾರೆ. ಆಮೇಲೆ ಬೆಟರ್‌ಮೆಂಟ್ ಛಾರ್ಜಸ್ ಹೆಚ್ಚಾಗಿದೆ ಅದರಲ್ಲೂ ಆರ್ಥಿಕವಾಗಿ ಹಿಂದುಳಿದ ಪ್ರದೇಶದಲ್ಲಿ ಬೆಳವಣಿಗೆಯಾದಾಗ ಅವರ ಮೇಲೆ ಈ ಛಾರ್ಜ್ ಹಾಕುವುದರಿಂದ ಹೊರೆಯಾಗುತ್ತದೆ. ಆದ್ದರಿಂದ ಮೂರನೇ ಒಂದು ಭಾಗ ಬೆಟರ್‌ಮೆಂಟ್ ಚಾರ್ಜಸ್ ಹಾಕಿರುವುದು ಹೆಚ್ಚು ಎಂಬ ಅಭಿಪ್ರಾಯವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ, ಪ್ರಾಧಿಕಾರದವರು ಬಡಾವಣೆಗಳನ್ನು ಮಾಡಿದಮೇಲೆ ಹಂಚಿಕೆ ಸಮಯದಲ್ಲಿ ನಿಮಗೆಲ್ಲಾ ಗೊತ್ತಿರುವ ಹಾಗೆ ಬೇರೆ ಬೇರೆ ನಿವೇಶನಗಳಿಗೆ ಬೇರೆ ಬೇರೆ ದರಗಳನ್ನು ಹಾಕಿರುವುದು ಉಂಟು. ೩೦–೪೦ ನಿವೇಶನಕ್ಕೆ ಬೇರೆ ರೇಟ್, ೬೦—೪೦ ಅಳತೆ ನಿವೇಶನಕ್ಕೆ ಬೇರೆ ರೇಟ್ ೫೦—೮೦ ನಿವೇಶನಕ್ಕೆ ಬೇರೆ ರೇಟ್ ಹಾಕಿರುವುದು ಗೊತ್ತಿದೆ. ಆರ್ಥಿಕವಾಗಿ ಹಿಂದುಳಿದ

ಜನರಿಗೆ ೨೦—೩೦ ಅಳತೆಯ ನಿವೇಶನವನ್ನು ಮಾಡಿ ಅರ್ಧ ಬೆಲೆಗೆ ಕೊಡುತ್ತಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಕಡಿಮೆ ಬೆಲೆಗೆ ನಿವೇಶನವನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಬೆಟರ್ ಮೆಂಟ್ ಛಾರ್ಜಸ್ ಆ ಜನರಿಗೆ ಅನ್ವಯವಾಗುವುದಿಲ್ಲ. ಪ್ರಾಧಿಕಾರದವರು ಬಡಾವಣೆಗಳನ್ನು ಮಾಡದೆ ಸೊಸೈಟಿಗಳವರು ಮತ್ತು ಖಾಸಗಿಯಾಗಿ ಬಡಾವಣೆಗಳನ್ನು ಮಾಡಿಕೊಳ್ಳುವುದಕ್ಕೆ ತಮ್ಮ ಆಸ್ತಿ ಬೆಲೆಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ ಅವರ ಮೇಲೆ ಇದನ್ನು ಹಾಕುತ್ತೇವೆ. ಅದೇನೂ ತಪ್ಪಾಗುವುದಿಲ್ಲ. ಅವರ ವೈಯಕ್ತಿಕವಾದ ಆಸ್ತಿ ಬೆಳವಣಿಗೆ ಆದಾಗ ಹೆಚ್ಚು ಪಾಲು ಅವರಿಂದ ತೆಗೆದುಕೊಂಡರೆ ತೊಂದರೆಯೇನೂ ಆಗುವುದಿಲ್ಲ ಎಂದು ಹೇಳಬಯಸುತ್ತೇನೆ. ಸದಸ್ಯರ ಪೈಕಿ ಒಬ್ಬರು ಕಾರ್ಮಿಕರು ಇರಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ಹೆಚ್ಚು ಜನ ಕಾರ್ಮಿಕರಿದ್ದಾರೆ ಎಂದು ಅವರಿಗೆ ಪ್ರಾತಿನಿಧ್ಯ ಕೊಟ್ಟಿದ್ದುಂಟು. ಆದರೆ ಅನೇಕ ಪ್ರದೇಶಗಳಲ್ಲಿ ಕಾರ್ಮಿಕರಿಗೆ ಪ್ರಾತಿನಿಧ್ಯ ಕೊಡಬೇಕೆಂದಾಗ ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಸಮುದಾಯದವರು ನಮಗೆ ಪ್ರಾತಿನಿಧ್ಯ ಕೊಡಬೇಕೆಂದು ಹೇಳುತ್ತಾರೆ. ನಮ್ಮ ಜಮೀನುಗಳನ್ನು ತೆಗೆದುಕೊಳ್ಳುತ್ತಿದ್ದೀರಿ ಆದ್ದರಿಂದ ನಮಗೂ ಕೊಡಿ ಎಂದು ಕೇಳಬಹುದು ಅದೇ ರೀತಿ ವ್ಯಾಪಾರಸ್ಥರು ಕೇಳಬಹುದು ಅದೇರೀತಿ ಬೇರೆಬೇರೆಯವರೂ ಕೇಳಬಹುದು. ಈ ತಿದ್ದುಪಡಿ ಮೂಲಕ ನಾಲ್ಕು ಜನರಿಗೆ ಅಧಿಕಾರೇತರರಿಗೆ ಅವಕಾಶ ನೀಡುವ ವಿಚಾರವನ್ನು ತರುತ್ತಿದ್ದೇವೆ. ಹೆಣ್ಣುಮಕ್ಕಳಿಗೆ, ಪರಿಶಿಷ್ಟ ಪಂಗಡಕ್ಕೆ ಸೇರಿದವರಿಗೆ ಮತ್ತು ಇನ್ನಿಬ್ಬರಿಗೆ ಏನು ಅವಕಾಶ ಮಾಡುತ್ತಿದ್ದೇವೆ ಇದರಲ್ಲಿ ಆಯಾ ಪ್ರದೇಶದಲ್ಲಿ ಪ್ರಾತಿನಿಧ್ಯ ಕೊಡಬಹುದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಮತ್ತೊಂದು ವಿಚಾರವನ್ನು ಅವರು ಹೇಳಿದ್ದಾರೆ. ಬೆಂಗಳೂರು ನಗರದ ಅನುಭವದ ಮೇಲೆ ಅವರು ಆ ಮಾತನ್ನು ಹೇಳಿದ್ದಾರೆ. ಪ್ರಾಧಿಕಾರ ಜವಾಬ್ದಾರಿ ತೆಗೆದುಕೊಂಡು ಬಡಾವಣೆ ಮಾಡುತ್ತೇವೆಂದು ಹೇಳಿದರೂ ಕೆಲಸಕಾರ್ಯ ಮುಗಿಸುವುದಕ್ಕೆ ೧೦-೧೫ ವರ್ಷಗಳಾಗುತ್ತದೆ, ಅಷ್ಟರಲ್ಲಿ ಮನೆ ಕಟ್ಟಿಕೊಂಡವರಿಗೆ ದಿನನಿತ್ಯದ ಸೌಕರ್ಯಗಳಿಲ್ಲದೆ ತೊಂದರೆಯಾಗುತ್ತಿದೆ. ಶೌಚದ ಕೆಲಸ ಮತ್ತು ಪೌರಕಾರ್ಮಿಕರ ವ್ಯವಸ್ಥೆ ಇಲ್ಲದೆ ತೊಂದರೆಯಾಗುತ್ತದೆ, ಆದ್ದರಿಂದ ಹೆಚ್ಚು ಭಾಗ ಅಭಿವೃದ್ಧಿ ಆಗಿರುವುದನ್ನು ನೋಡಿಕೊಂಡು ಉಳಿದ ಕಾಮಗಾರಿಗಳಿಗೆ ಅಲ್ಲಿಯೇ ಸ್ಥಳೀಯ ಸಂಸ್ಥೆಗಳಿಗೆ ಹಣ ಕೊಟ್ಟು ಬಡಾವಣೆಯನ್ನು ವರ್ಗಾವಣೆ ಮಾಡುವುದಕ್ಕೆ ಅವಕಾಶ ಇರಬೇಕಾದುದು ಉತ್ತಮ ಎಂದು ಹೇಳಿದ್ದಾರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ೬೪ ಲೇ ಔಟಿನಲ್ಲಿ ೩ ಕೋಟಿ ರೂಪಾಯಿಗಳ ಕಾಮಗಾರಿ ಉಳಿದಿತ್ತು. ಆ ಮೂರು ಕೋಟಿ ರೂಪಾಯಿಗಳನ್ನು ಪ್ರಾಧಿಕಾರದವರು ನಗರಪಾಲಿಕೆಗೆ ಕೊಡುವ ಹಾಗೆ ಮತ್ತು ನಗರಪಾಲಿಕೆಯವರು ಆ ಕೆಲಸಗಳನ್ನು ಮಾಡುವ ಹಾಗೆ ವ್ಯವಸ್ಥೆ ಆಗುತ್ತಿದೆ. ಆ ಒಂದು ಅವಕಾಶ ಇರುತ್ತದೆ, ಅದನ್ನು ಮಾಡಬಹುದು ಎಂದು ಹೇಳುತ್ತೇನೆ. ಜನರ ಅಗತ್ಯ ನೋಡಿಕೊಂಡು ಈ ಕೆಲಸ ಆಗಲೇಬೇಕು, ಆದಷ್ಟು ಜಾಗ್ರತೆ ಕೆಲಸ ಮಾಡುವ ಉದ್ದೇಶದಿಂದ ಪ್ರಾಧಿಕಾರದಿಂದ ವರ್ಗಾವಣೆ ಆಗುವುದು ಉತ್ತಮ ಎಂದು ತಿಳಿದುಕೊಂಡು ಅದನ್ನು ಮಾಡುತ್ತಿದ್ದೇವೆ. ಆ ಕೆಲಸ ಆಗುತ್ತಿದೆ, ಮಾನ್ಯ ಬಂಗಾರಪ್ಪನವರು ನಾಮಕರಣ ಮಾಡುವಾಗ ಒಂದಲ್ಲ ಒಂದು ರೀತಿಯಲ್ಲಿ ಪರಿಣತರನ್ನು ಹಾಕಿದರೆ ಉತ್ತಮವಾಗುತ್ತದೆಂದು ಸಲಹೆ ಕೊಟ್ಟಿದ್ದಾರೆ. ಆದಷ್ಟೂ ಆಯಾ ಪ್ರದೇಶದಲ್ಲಿ ಅಂಥವರನ್ನೇ ಹುಡುಕಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಕೆಲವು ಸಂದರ್ಭದಲ್ಲಿ ಅದು ಆಗದೇ ಹೋಗಬಹುದು. ಆದರೆ ಅಧಿಕಾರೇತರ ಪ್ರಾತಿನಿಧ್ಯ ಅಗತ್ಯ ಎಂದು ತಾವೇ ಒಪ್ಪಿಕೊಂಡಿರುವುದರಿಂದ ಆ ರೀತಿಯಾಗಿ ಪ್ರಾತಿನಿಧ್ಯ ಇಟ್ಟು ಕೆಲಸ ಮಾಡುತ್ತೇವೆ,

೫-೦೦ ಪಿ. ಎಂ.

ಆಮೇಲೆ ಶ್ರೀಮಾನ್ ಕೆ. ಹೆಚ್. ಶ್ರೀನಿವಾಸ್‌ರವರು ಮಾತನಾಡುವಾಗ ಸುಮಾರು ೨೦ ಸಾವಿರ ನಿವೇಶನಗಳಿಗೆ ಬೇಡಿಕೆ ಇದ್ದರೂ ಕಳೆದ ಒಂದು ವರ್ಷದಿಂದ ಶಿವಮೊಗ್ಗ ಸಿ.ಐ.ಟಿ.ಬಿ ಯವರು ಕೇವಲ ೬೫೦ ನಿವೇಶನಗಳನ್ನು ಕೊಟ್ಟಿದ್ದಾರೆ. ಎಂದು ಹೇಳಿದರು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಗರಗಳ ಬೆಳವಣಿಗೆಗೆ ತಕ್ಕಂತೆ ಅಭಿವೃದ್ಧಿ ಕಾರ್ಯಗಳಾಗಿಲ್ಲ, ಅದಕ್ಕೆ ಕಾರಣವನ್ನು ಅವರೇ ಹೇಳಿದ್ದಾರೆ, ಅದೇನೆಂದರೆ, ಸಿ ಐ.ಟಿ.ಬಿ. ಯವರು ಒಂದು ಕಾರ್ಯಕ್ರಮವನ್ನು ತೆಗೆದುಕೊಂಡರೆ, ಅದಕ್ಕೆ ಪ್ಲಾನಿಂಗ್ ಅಥಾರಿಟಿಯವರು ವಿರೋಧ ಮಾಡುತ್ತಾರೆ. ಆ ಒಂದು ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಈ ಎರಡೂ ಸಂಸ್ಥೆಗಳನ್ನೂ ಒಂದೇ ಕಡೆ ತಂದಿದ್ದೇವೆಯಲ್ಲ. ಮೈಸೂರು ನಗರದ ವಿಶ್ವಸ್ತ ಮಂಡಲಿ

ಯುವರು ಕೈಗೊಂಡಿರುವಂತಹ ಕ್ರಮವನ್ನು ಉದಾಹರಣೆಗೆ ಹೇಳುವುದಾದರೆ, ಮೈಸೂರು ನಗರದಲ್ಲಿ ಹೋದ ವರ್ಷ ನಿವೇಶನಗಳನ್ನು ಬೇಡಿ ಸುಮಾರು ೪೫ ಸಾವಿರ ಅರ್ಜಿಗಳು ಬಂತು, ಆ ೪೫ ಸಾವಿರ ಅರ್ಜಿಗಳನ್ನೂ ಪರಿಷ್ಕರಣ ಮಾಡಿ, ಯಾವ್ಯಾವ ವಿಭಾಗದಲ್ಲಿ ಎಷ್ಟೆಷ್ಟು ಅರ್ಜಿಗಳು ಬಂದಿವೆ ಎಂಬುದನ್ನು ವಿಂಗಡಿಸಿ ಆ ಬಗ್ಗೆ ಪ್ರತಿಯೊಂದು ಬಡಾವಣೆಯಲ್ಲೂ ಸಾರ್ವಜನಿಕ ಸಭೆಗಳನ್ನು ಮಾಡಿ, ಇಂತಿಂತ ಭಾಗಗಳಿಂದ ಇಷ್ಟಿಷ್ಟು ಅರ್ಜಿಗಳು ಬಂದಿವೆ, ಒಂದು ತಿಳಿಸಿ ಅರ್ಜಿದಾರರನ್ನೆಲ್ಲಾ ಸಭೆಗೆ ಕರೆಸಿ ಸಾರ್ವಜನಿಕ ಸಭೆಯಲ್ಲಿ ನಿವೇಶನಗಳನ್ನು ನೀಡಬೇಕಾದರೆ ಕೆಲವು ನಿಯಮಗಳಿವೆ. ಆ ನಿಯಮಗಳಿಗನುಸಾರವಾಗಿ ನಿವೇಶನಗಳನ್ನು ಕೊಡಬೇಕಾಗುತ್ತದೆ. ಆ ನಿಯಮಗಳು ಯಾವುವೆಂದರೆ, ನಿಮ್ಮ ಹೆಸರಿನಲ್ಲಾಗಲಿ ಅಥವಾ ನಿಮ್ಮ ಕುಟುಂಬದ ಇತರೇ ಸದಸ್ಯರ ಹೆಸರಿನಲ್ಲಾಗಲಿ, ಮೈಸೂರು ನಗರದಲ್ಲಿ ಮನೆ ಅಥವಾ ನಿವೇಶನ ಇರಬಾರದು, ಹಾಗೇನಾದರೂ ಇದ್ದರೆ ನೀವು ಕಟ್ಟಿರುವಂತಹ ಠೇವಣಿಯನ್ನೂ ಮುರಿದು ಕೊಳ್ಳುತ್ತೇವೆ. ಜೊತೆಗೆ ಅಂತಹವರ ಮೇಲೆ ಶಿಸ್ತಿನ ಕ್ರಮವನ್ನೂ ಕೂಡ ಕೈಗೊಳ್ಳುತ್ತೇವೆಂದು ಆ ಒಂದು ಸಾರ್ವಜನಿಕ ಸಭೆಯಲ್ಲಿ ತಿಳಿಸಿದಾಗ ಆಗ ಅಲ್ಲಿದ್ದಂತಹ ಜನರಲ್ಲಿ ಅರ್ಧದಷ್ಟು ಜನರು ವಾಪಸ್ಸು ಹೊರಟು ಹೋದರು ಇದರಿಂದಾಗಿ ಅಲ್ಲಿ ಅರ್ಧದಷ್ಟು ಡಿಮ್ಯಾಂಡ್ ಕಡಿಮೆಯಾಗಿದೆ. ಅಲ್ಲಿ ಪ್ರತಿಯೊಂದು ಭಾಗದಲ್ಲೂ ಇರುವಂತಹ ಅರ್ಜಿದಾರರುಗಳನ್ನು ಕ್ರಾಸ್ ಚೆಕಿಂಗ್ ಮಾಡಲಾಗುತ್ತಿದೆ. ಆಗ ಇನ್ನಷ್ಟು ಬೇಡಿಕೆ ಕಡಿಮೆಯಾಗುತ್ತದೆ. ಇದರಲ್ಲಿ ಏನು ಮಾಡುತ್ತಾರೆಂದರೆ, ಬೆಳೆಯುತ್ತಿರುವ ನಗರಗಳಲ್ಲಿ ನಿವೇಶನಗಳನ್ನು ಮಾಡಿದರೆ, ೫-೧೦ ವರ್ಷಗಳಲ್ಲಿ ಎರಡು ಪಟ್ಟು, ಮೂರು ಪಟ್ಟು ಬೆಲೆಯಾಗುತ್ತದೆ. ಇದರಿಂದ ಹೆಚ್ಚು ಹಣವನ್ನು ಪಡೆಯಬಹುದು ಎನ್ನುವ ಉದ್ದೇಶದಿಂದ ನಿವೇಶನಗಳಿಗೆ ಅರ್ಜಿಗಳನ್ನು ಹಾಕುವಂತಹ ಜನ ಇದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಏನು ೨೦ ಸಾವಿರ ನಿವೇಶನಗಳಿಗೆ ಬೇಡಿಕೆ ಇದೆ ಅಂತ ಹೇಳಿದ್ದಾರೆ, ಅದು ನಿಜವಿರಲಾರದು. ಇದರ ಬಗ್ಗೆ ನಾನು ಈಗಾಗಲೇ ಎಲ್ಲಾ ಸಿ.ಐ.ಟಿ.ಬಿ. ಹಾಗೂ ಪ್ಲಾನಿಂಗ್ ಅಥಾರಿಟಿಗೆ ಸಂಬಂಧಪಟ್ಟ ಅಧಿಕಾರಿಗಳ ಸಭೆಯನ್ನು ಕರೆದಿದ್ದೆ. ಆ ಸಭೆಯಲ್ಲಿ ಪ್ರತಿಯೊಂದು ನಗರಾಭಿವೃದ್ಧಿ ಮಂಡಲಿಯವರು ಹಾಗೂ ಸಣ್ಣ ಸಣ್ಣ ನಗರಸಭೆಗಳವರೂ ಕೂಡ ಮೈಸೂರು ನಗರಾಭಿವೃದ್ಧಿಯವರು ಮಾಡುತ್ತಿರುವ ರೀತಿಯಲ್ಲೇ ಮಾಡಬೇಕೆಂದು ಹೇಳಿದ್ದೇನೆ. ಆಗ ಯಾರು ನಗರ ನಿವಾಸಿಗಳಿದ್ದಾರೆ, ಅವರಿಗೆ ಮೊದಲು ಆದ್ಯತೆಯನ್ನು ಕೊಟ್ಟು ನಿವೇಶನಗಳನ್ನು ಕೊಡೋಣ ಬೇರೆಯವರಿಗೆ ಆಮೇಲೆ ಕೊಡೋಣ ಅಂತ ಕೂಡ ಆ ಸಭೆಯಲ್ಲಿ ಹೇಳಿದ್ದೇನೆ. ಆಮೇಲೆ ಜನರಲ್ ಅಲಾಟ್‌ಮೆಂಟ್ ರೂಲ್ಸ್ ಬಗ್ಗೆ ಕಾರ್ಯಕ್ರಮ ಇಲ್ಲ ಅಂತ ಹೇಳಿದರು. ಆ ಬಗ್ಗೆ ಈ ಒಂದು ತಿದ್ದುಪಡಿಯ ಸೆಕ್ಷನ್ ೭೧ (೧) (ಜಿ) ರಲ್ಲಿ ಈ ರೀತಿಯಾಗಿ ಮಾಡಿದ್ದೇವೆ.

"Regulating the allotment or sale by auction of sites by the Authority."

ಶ್ರೀ ಕೆ.ಹೆಚ್. ಶ್ರೀನಿವಾಸ್.—ಆ ರೂಲ್ಸ್ ಮಾಡುವುದರಲ್ಲಿ "regulating the allotment or sale by auction of sites by the Authority" ಅಂತ ಹೇಳಿಬಿಟ್ಟು ಅದರ ಬಗ್ಗೆ ರೂಲ್ಸ್ ಮಾಡಬಹುದು ಅಂತ ಇದೆ. ಇದರ ಬಗ್ಗೆ ಈ ಅಂಶವನ್ನು ತೆಗೆದುಕೊಂಡು ರೂಲ್ಸನ್ನು ಮಾಡುತ್ತೀರೋ ಅಥವಾ ಬಿಡುತ್ತೀರೋ ಗೊತ್ತಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಬಿ.ಡಿ.ಎ. ನಲ್ಲಿ ಮಾಡಿದ್ದೇವೆ. ಪ್ರತಿಯೊಂದು ವರ್ಗದವರಿಗೂ ಇಷ್ಟು ಅರ್ಜಿಗಳು, ಅವರಿಗೆ ಕೊಡಲೇಬೇಕೆಂಬ ರೀತಿಯಲ್ಲಿ ಮಾಡಿದ್ದೇವೆ. ಆ ರೀತಿ ಇಂಪ್ರೂವ್‌ಮೆಂಟ್ ಮಾಡಿಕೊಳ್ಳಬಹುದು. ಆರ್ಥಿಕವಾಗಿ ಹಿಂದುಳಿದವರಿಗೆ, ಬೇರೆ ಬೇರೆ ವರ್ಗಗಳಿಗೆ ಇವರಿಗೆ ಯಾವ ರೀತಿಯಲ್ಲಿ ಹಂಚಿಕೆಯಾಗಬೇಕು ಅಂತ ಇದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ರೂಲ್ಸ್ ಮಾಡಿ, ಕೊನೆಗೆ ಅದರ ತಾತ್ಪರ್ಯ ಏನಾಗುತ್ತದೆ ಎಂದರೆ ಸಿ.ಐ.ಟಿ.ಬಿ.ಯವರು ದೊಡ್ಡ ದೊಡ್ಡ ನಿವೇಶನಗಳನ್ನು ಮಾಡುವುದು ಸರಿಯಾಗಿರತಕ್ಕ ದಡೂತಿ ಆಸಾಮಿಗಳಿಗೆ ಕೊಡುವುದಕ್ಕೋಸ್ಕರ ಅದಕ್ಕಾಗಿಯೇ ಈ ಅಥಾರಿಟಿ ಇರುವುದು: ಎನ್ನುವ ಅಭಿಪ್ರಾಯ ಬರುತ್ತದೆ. ಅದನ್ನು ತಪ್ಪಿಸಿ ಬಡವರಿಗೂ ನಿವೇಶನಗಳನ್ನು ಕೊಡುವಂತಹ ಹಾಗೂ ಅವರಿಗೆ ಮನಶಾಂತಿಯನ್ನು ಕೊಡುವಂತಹ ವಾತಾವರಣವನ್ನು ಕ್ರಿಯೇಟ್ ಮಾಡಬೇಕು.

ಅದನ್ನು ತಪ್ಪಿಸುವುದಕ್ಕೆ ಈ ಒಂದು ಆಕ್ಟ್‌ನಲ್ಲಿ ಸರಿಯಾದ ನಿರ್ದೇಶನವನ್ನು ಕೊಡಬೇಕು. ದುರ್ಬಲ ವರ್ಗದವರಿಗೆ, ಶಕ್ತಿ ಇಲ್ಲದಂತಹವರಿಗೆ ನೆರವು ಮಾಡುವುದಕ್ಕೆ ಸಂಸ್ಥೆ ಇದೆ ಎಂದು ಆಕ್ಟ್‌ನಲ್ಲಿ

ತಂದರೆ ಬದಲಾವಣೆ ಆಗುತ್ತದೆ. ಇಲ್ಲದಿದ್ದರೆ ಮೇಜರ್ ಆಕ್ಟಿವಿಟೀಸ್ ಬೇರೆ, ಇದು ಮಾತ್ರ ಬೈ-ಪ್ರಾಡೆಕ್ಟ್ಸ್ ಎನ್ನುವ ರೀತಿಯಲ್ಲಿ ಅಲ್ಲಿ ಕೆಲಸ ಆಗುತ್ತದೆ. ಅದನ್ನು ನೀವು ಮುಂದುವರಿಸುತ್ತಿದ್ದೀರಿ ಅಷ್ಟೇ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ನನ್ನ ಮತ್ತು ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯದಲ್ಲಿ ಹೇಳುವುದಾದರೆ, ಪ್ರಾಧಿಕಾರದ ಉದ್ದೇಶ ಕೇವಲ ಆರ್ಥಿಕವಾಗಿ ಹಿಂದುಳಿದವರಿಗೇ ಕೆಲಸ ಮಾಡುವಂತಹದ್ದಲ್ಲ. ನಗರದ ಬೆಳವಣಿಗೆಯಲ್ಲಿ ಎಲ್ಲಾ ವರ್ಗದ ಜನರೂ ಇದ್ದಾರೆ. ೨೦ × ೩೦ ಅಡಿ ಸೈಟ್‌ನಿಂದ ಹಿಡಿದು ೫೦ × ೮೦ ಅಡಿ ಸೈಟ್‌ಗಳವರೆಗೆ ಕೊಳ್ಳುವಂತಹ ಜನ ನಗರದಲ್ಲಿದ್ದಾರೆ. ಅದಕ್ಕೆ ತಕ್ಕ ಪ್ರಮಾಣದಲ್ಲಿ ಬೆಲೆ ತರುವಂತಹ ಜನರೂ ಇದ್ದಾರೆ. ಇಂತಹ ಎಲ್ಲಾ ಜನರಿಗೂ ಈ ಪ್ರಾಧಿಕಾರ ನಿವೇಶನಗಳನ್ನು ಮಾಡಬೇಕೇ ಹೊರತು ಕೇವಲ ಒಂದೇ ಒಂದು ಆರ್ಥಿಕವಾಗಿ ಹಿಂದುಳಿದವರ ಉದ್ದೇಶಕ್ಕಾಗಿ ಮಾಡುತ್ತೇವೆಂದರೆ ಹೇಳಿದರೆ ಅರ್ಥ ಬರುವುದಿಲ್ಲ. ಹಾಗಾದರೆ ಖಾಸಗಿಯಾಗಿ ಹೌಸಿಂಗ್ ಸೊಸೈಟಿಗಳು ಏನಿವೆ ಅವುಗಳ ಮೂಲಕ ಹಣವಂತರಿಗೆ ಸೈಟ್‌ಗಳನ್ನು ಮಾಡಲು ಅವಕಾಶ ಕೊಟ್ಟು ಕೇವಲ ಹಿಂದುಳಿದವರಿಗೆ ಸೈಟುಕೊಡಲು ಪ್ರಾಧಿಕಾರ ಇರಬೇಕಾಗುತ್ತದೆ ಅಷ್ಟೇ. ನಮ್ಮೆಲ್ಲರ ಉದ್ದೇಶ ಅದಲ್ಲ. ನಗರದಲ್ಲಿ ವಾಸ ಮಾಡತಕ್ಕ ಎಲ್ಲಾ ವರ್ಗದವರಿಗೆ ಅವಕಾಶ ಮಾಡಿಕೊಡಬೇಕೆನ್ನುವಾಗ ಆರ್ಥಿಕವಾಗಿ ಹಿಂದುಳಿದವರಿಗೂ ಹೆಚ್ಚಿನ ಪ್ರಾತಿಥ್ಯ ಕೊಡಬೇಕು ಎಂಬುದನ್ನು ನಿಯಮ ಮಾಡುವಾಗ ಮಾಡಬಹುದು. ಬೆಂಗಳೂರಿನಲ್ಲಿ ಅದು ಜಾರಿಯಲ್ಲಿದೆ. ಬಹಳ ಜನರು ಅದನ್ನು ಒಪ್ಪಿಕೊಂಡಿದ್ದಾರೆ. ಸರಿಯಾದ ರೀತಿಯಲ್ಲಿ ಅದು ನಡೆದುಕೊಂಡು ಹೋಗುತ್ತಿದೆ. ಇನ್ನು ಅನೇಕ ಸದಸ್ಯರನ್ನು ಹಾಕಿದ್ದೀರಿ. ಅವರು ಸಲಹೆ ಕೊಟ್ಟು ಹೋದಮೇಲೆ ಇವರು ಏನು ಮಾಡುತ್ತಾರೆಂದು ಹೇಳುತ್ತಿದ್ದಾರೆ. ಅದಕ್ಕೆ ಸೆಕ್ಷನ್ ೭೭ರಲ್ಲಿ ಈ ರೀತಿ ಇದೆ,

> "To Overrule Other Laws: (i) The provisions of the Act shall have the effect notwithstanding anything inconsistent therewith contained in any other law for the time being in force."

ಅದನ್ನು ಸಾಧ್ಯವಾದಷ್ಟು ಉಪಯೋಗ ಮಾಡುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡಬಹುದು. ಈ ಸಂದರ್ಭದಲ್ಲಿ ರೆವಿನ್ಯೂ ಆಕ್ಟ್ ಮತ್ತು ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್-ಇವೆರಡರಲ್ಲಿ ಗ್ರೀನ್ ಬೆಲ್ಟ್ ವಿಚಾರದಲ್ಲಿ ಉಚ್ಚನ್ಯಾಯಾಲಯದಲ್ಲಿ ಏನು ತೀರ್ಮಾನ ಆಗಿದೆ, ಏನು ಅಭಿಪ್ರಾಯ ಸೂಚಿಸಿದಾರೆಂದರೆ, ನಗರ ಪ್ರದೇಶದಲ್ಲಿ ಕರ್ನಾಟಕ ಟೌನ್, ಕಂಟ್ರಿಪ್ಲಾನಿಂಗ್ ಆಕ್ಟ್ ಅನ್ವಯ ಏನು ಅಭಿವೃದಿ. ಆಗಬೇಕೆಂದು ಜಮೀನುಗಳು ಬರುತ್ತವೆ ಆ ಏರಿಯಾದಲ್ಲಿ. ಸಿ. ಡಿ. ಪಿ. ಯಲ್ಲಿ ಯಾವ ರೀತಿ ವರ್ಗಾವಣೆ ಮಾಡುವುದಕ್ಕೆ ತೀರ್ಮಾನ ಆಗಿದೆ ಆ ಪ್ರಕಾರ ಆಗಬೇಕೇ ಹೊರತು ಲ್ಯಾಂಡ್ ರೆವಿನ್ಯೂ ಆಕ್ಟ್ ಅರ್ಜಿ ಸಲ್ಲಿಸಿದ್ದಾರೆಂದು ಹೇಳಿ ಅದನ್ನು ನಾನ್ ಅಗ್ರಿಕಲ್ಚರ್ ಎಂದು ಮಾಡಬಾರದು ಎಂದು ಅಭಿಪ್ರಾಯ, ಆ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಾ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಸ್ಪಷ್ಟವಾದ ಅಭಿಪ್ರಾಯಪಟ್ಟಿದ್ದಾರೆ. ತಾವು ಸರ್ಕಾರದ ಕಾನೂನು ಮುರಿದು...They said that the magnitude of subversion of law which has been done by the Government will have to be enquired into." They have said that you have to frame issues and do enquiry. ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ಹೇಳಿದ್ದಾರೆ. ಆ ಬಗ್ಗೆ ವಿಚಾರ ಮಾಡಿದ್ದೀರಾ ಎಂದು ನಾವು ಕೇಳುತ್ತಿರುವುದು ಎಷ್ಟು ಜನರಿಗೆ ಕನ್‌ವರ್ಷನ್‌ಗೆ ಪರ್ಮಿಷನ್ ಕೊಟ್ಟಿದ್ದೀರಿ ? ಸಿ. ಡಿ. ಪಿ. ಆದಮೇಲೆ ಎಷ್ಟು ಜನರಿಗೆ ಕೊಟ್ಟಿದ್ದೀರಿ ? ಹೈಕೋರ್ಟ್ ತೀರ್ಮಾನ ಮೇಲೆ ಯಾರು ತಪ್ಪಿತಸ್ಥರು ಇದ್ದಾರೆ ಅವರ ಬಗ್ಗೆ ನೀವು ವಿಚಾರಣೆ ಮಾಡಬೇಕು. ಅದನ್ನು ಪರಿಶೀಲನೆ ಮಾಡುತ್ತಾ ಕುಳಿತುಕೊಂಡರೆ ಹೇಗೆ ?

ಶ್ರೀ ಎಂ. ಚಂದ್ರಶೇಖರ್.—ಒಂದೊಂದು ಕಡೆ ಇಂಡಿಪೆಂಡೆಂಟಾಗಿ ಅವರ ರೀತಿಯಲ್ಲಿ ಮಾಡುತ್ತಿದ್ದಾರೆ. ಲ್ಯಾಂಡ್ ರೆವಿನ್ಯೂ ಆಕ್ಟ್ ಕಂದಾಯ ಇಲಾಖೆಯವರು ಮಾಡುತ್ತಿದ್ದಾರೆ. ಟೌನ್ ಪ್ಲಾನಿಂಗ್, ಅರ್ಬನ್ ಲ್ಯಾಂಡ್ ಸೀಲಿಂಗ್ ಅದು ನಾಸು ಹೂಡುವುದು. ಇದರಿಂದ ಹೊಂದಾಣಿಕೆಗ

ಬಾರದೆ ಇದುವರೆಗೆ ಆಗಿರುವುದು ಹಾಗೆ. ಅದು ಗೊಂದಲವಾಗಿದೆ. ಅದನ್ನು ಸರಿಪಡಿಸುವುದಕ್ಕೆ ಕೋ ಆರ್ಡಿನೇಷನ್ ಕಮಿಟಿ ಮಾಡಬೇಕಾಗಿದೆ ಅದು ನಗರ ಪ್ರದೇಶಗಳಿಗೆ ಸೀಮಿತವಾಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಹೈಕೋರ್ಟ್ ತೀರ್ಪಿನ ಪ್ರಕಾರ ನೀವು ನ್ಯಾಯಾಂಗ ವಿಚಾರಣೆ ಮಾಡಬೇಕು. ಮಂತ್ರಿಗಳು, ಮುಖ್ಯ ಮಂತ್ರಿಗಳು ಅವ್ಯವಹಾರದಲ್ಲಿ ಶಾಮೀಲಾಗಿದ್ದೀರಿ ಎಂದು ನ್ಯಾಯಾಂಗ ವಿಚಾರಣೆ ಮಾಡುವುದಿಲ್ಲ ಎಂದು ಹೇಳಬೇಕಾಗುತ್ತದೆ. ಹೈಕೋರ್ಟಿನವರು ಇಷ್ಯೂಸ್ ಫ್ರೇಮ್ ಮಾಡಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಅದು ಇವಾಗಿನಿಂದ ಅಲ್ಲ ಹಿಂದಿನಿಂದ ಇದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಅವ್ಯವಹಾರ ಆಗಿದೆ, ಕಾನೂನನ್ನು ಮುರಿದ್ದಾರೆ. ಅದರ ಬಗ್ಗೆ ವಿಚಾರಣೆ ಆಗಬೇಕೆಂದು ಹೇಳಿದ ಮೇಲೆ ನೀವು ಚಕ್ಕಂಬಕ್ಲ ಹಾಕಿ ಕುಳಿತುಕೊಂಡರೆ, ಅಕ್ರಮ ಅವ್ಯವಹಾರಗಳು ನಡೆಯುತ್ತಿದ್ದರೆ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆಯೆಂದು ತಿಳಿದುಕೊಳ್ಳ ಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಆ ಬಗ್ಗೆ ಹೈಕೋರ್ಟಿನ ತೀರ್ಪನ್ನು ಒಪ್ಪಿಕೊಂಡಿದ್ದೇವೆ. ಆ ಬಗ್ಗೆ ತೀರ್ಮಾನ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹೈಕೋರ್ಟ್ ತೀರ್ಪನ್ನು ಜಾರಿಗೆ ಕೊಡುವ ಬಗ್ಗೆ ಎಷ್ಟು ದೂರ ಹೋಗಿದ್ದೀರಿ ಎಂಬುದನ್ನು ಈ ಮನೆಗೆ ತಿಳಿಸಬೇಕು. ಇಲ್ಲದಿದ್ದರೆ ಗುರುತರವಾದ ಅಪಾದನೆ ನಿಮ್ಮ ಮೇಲೆ ಇರುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಏಪ್ರಿಲ್ ತಿಂಗಳಿನಲ್ಲಿ ಹೈಕೋರ್ಟ್ ತೀರ್ಪು ಬಂದಿದೆ. ಈಗಾಗಲೇ ಐದಾರು ತಿಂಗಳುಗಳು ಆಗಿವೆ. ಹಾಗಾದರೆ ನಿಮಗೆ ಹೈಕೋರ್ಟಿನ ತೀರ್ಪಿನ ಬಗ್ಗೆ ಮನ್ನಣೆ ಇಲ್ಲವೇ ? ಹೈಕೋರ್ಟ್ ತೀರ್ಪನ್ನು ತಿರಸ್ಕಾರ ಮಾಡುತ್ತೀರಾ ? ಎಷ್ಟರ ಮಟ್ಟಿಗೆ ನೀವು ಶಾಮೀಲಾಗಿದ್ದೀರಿ ಎನ್ನುವ ಬಗ್ಗೆ ಜನತೆ ತೀರ್ಪು ಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ .—ಈಗ ಹೈಕೋರ್ಟಿನವರು ತೀರ್ಪು ಕೊಟ್ಟಿದ್ದಾರೆ ಅಧಿಕಾರಿಗಳ ಬಗ್ಗೆ ಹೇಳಿದ್ದಾರೆ ಇನ್ನು ಎಷ್ಟು ದಿವಸಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೀರಿ? ಸರಿಯಾದ ಸಮಯವನ್ನು ಹೇಳಿ. ಇಷ್ಯೂಸ್ ಫ್ರೇಮ್ ಮಾಡಿದ್ದಾರೆ ಹೈಕೋರ್ಟಿನವರು ಸರ್ಕಾರಕ್ಕೆ ಸುಲಭ ಮಾಡಿದ್ದಾರೆ. ಏನೇನು ಮಾಡಬೇಕೆಂದು ಸಹ ತಿಳಿಸಿದ್ದಾರೆ ತತ್‌ಕ್ಷಣ ಏನೇನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ? ಪ್ರತಿಯೊಂದು ಇಷ್ಯೂಸ್‌ಗೂ ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್:—ಇಷ್ಟೇ ದಿವಸ ಇಷ್ಟೇ ತಿಂಗಳು ಎಂದು ಅವಧಿಯನ್ನು ಹೇಳುವುದಕ್ಕೆ ಆಗುವುದಿಲ್ಲ. ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಬಂಗಾರಪ್ಪ:—ಹೈಕೋರ್ಟ್ ತೀರ್ಪು ಏಪ್ರಿಲ್ ತಿಂಗಳಲ್ಲಿ ಬಂದಿದೆ ಈಗ ನಾವು ಸೆಪ್ಟೆಂಬರ್ ತಿಂಗಳಿನಲ್ಲಿದ್ದೇವೆ. ಐದು ತಿಂಗಳಾಯಿತು ಆದರೂ ಕೂಡ ನೀವು ನೋಡಲಿಲ್ಲ ಅಂದರೆ ಹೇಗೆ ? ಕಾಲವನ್ನು ನಿಗಧಿ ಮಾಡಬೇಕಾಗುತ್ತದೆ. ಎರಡು ತಿಂಗಳು ಅಥವಾ ಮೂರು ತಿಂಗಳು ಎಂದು ಹೇಳಿ ಒಂದು ದಿವಸಕ್ಕೆ ೨೪ ಗಂಟೆಗಳು ಇದೆ ಅವು ಪುಕ್ಕಟೆ ಬರುತ್ತವೆ ಏನು ?

ಅಧ್ಯಕ್ಷರು :—ಮಂತ್ರಿಗಳ ಉತ್ತರ ಸ್ವಲ್ಪ ಸ್ಪೀಡ್ ಆಗಲಿ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಬಸವಲಿಂಗಪ್ಪನವರು ಮಾತನಾಡುವಾಗ ಲೋಕಲ್ ಅಥಾರಿಟಿ ಮಾಡುವಾಗ ಹೇಗಿರಬೇಕೆಂದು ತಮ್ಮ ಅಭಿಪ್ರಾಯ ಸೂಚಿಸಿದರು. ಪ್ಲಾನಿಂಗ್ ಅಂಡ್ ಡೆವಲಪ ಮೆಂಟ್ ಅಥಾರಿಟಿಯೇ ಹೊರತು ಅದು ಅಡ್ಮಿನಿಸ್ಟ್ರೇಟಿವ್ ಅಥಾರಿಟಿ ಅಲ್ಲ ನಗರಪಾಲಿಕೆ ಪುರಸಭೆಗಳು ಎಲೆಕ್ಟೆಡ್ ಬಾಡಿ ಇರಬೇಕು ಹೆಚ್ಚು ಅಧಿಕಾರೇತರರು ಇರಬೇಕೆಂದು ಹೇಳಿದರು ಅದು ದಿನನಿತ್ಯ ಆಡಳಿತ ನಡೆಸುವುದಿಲ್ಲ ಅಲ್ಲಿ ಟೆಕ್ನಿಕಲ್ ಪರ್ಸನ್ಸ್ ಇರಬೇಕು ಹಾಗೂ ಜನಸಾಮಾನ್ಯರ ಪ್ರತಿನಿಧಿಗಳು ಇರಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ:—ಸ್ವಾಮಿ ನಾನು ಹೇಳಿದ್ದು ಜನಗಳ ಕೈಗೆ ಅಧಿಕಾರ ಕೊಡುತ್ತೇವೆಂದು ಹೇಳಿ ಮುನಿಸಿಪಾಲಿಟಿಗಳಿಗೆ ಚುನಾವಣೆ ಮಾಡಿದ್ದೀರಿ. ಏನು ಟೆಕ್ನಿಕಲ್ ಬಾಡಿ ಎಂದು ಹೇಳುತ್ತಿದ್ದೀರಿ

ಆ ಬಾಡಿ ಯಾರು ? ಚುನಾವಣೆ ಆದಮೇಲೆ ಪ್ರತಿನಿಧಿಗಳು ಕೆಲಸ ಮಾಡುವುದಕ್ಕೆ ಅವಕಾಶ ಕೊಡಬೇಕೇ ಹೊರತು ಸ್ವತಂತ್ರವಾಗಿ ಅವರೇ ಕೆಲಸ ಮಾಡುವುದಕ್ಕೆ ಪರ್ಮಿಷನ್ ಕೊಟ್ಟರೆ ಹೇಗೆ ? ಬುದ್ಧಿವಾದ ಹೇಳುವುದಕ್ಕೆ ಬರುತ್ತಾರೆ ಮುನಿಸಿಪಾಲಿಟಿಗಳಲ್ಲಿ ಟೆಕ್ನಿಕಲ್ ಮ್ಯಾನ್‌ಗಳಿಗೆ ಕೆಲಸ ಮಾಡುವುದಕ್ಕೆ ಮನಸ್ಸಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಇಲ್ಲಿ ಪ್ಲಾನಿಂಗ್ಸ್ ಮಾಡಬೇಕಾಗುತ್ತದೆ ಡೆವಲಪ್‌ಮೆಂಟ್ಸ್ ವರ್ಕ್ಸ್ ಮಾಡಬೇಕಾದರೆ ಯಾರ್‍ಯಾರು ಇರಬೇಕೆಂದು ಹೇಳಿದೆ.

ಶ್ರೀ ಬಿ. ಬಸವಲಿಂಗಪ್ಪ:—ಮುನಿಸಿಪಾಲಿಟಿ ವಿಂಗ್ ಮಾಡಿ ಅವರ ಕೈ ಕೆಳಗೆ ಕೆಲಸ ಮಾಡಿಯೆಂದು ಹೇಳಿದರೆ ಆಯಿತು.

ಶ್ರೀ ಎಂ. ಚಂದ್ರಶೇಖರ್:—ಆಮೇಲೆ ಅಧ್ಯಕ್ಷರೇ ಸುಮ್ಮನೆ ಹೇಳಿದ್ದಾರೆ ಎಷ್ಟು ನಗರಗಳಿಗೆ ಅನ್ವಯವಾಗುತ್ತದೆ ಎಂದು ಹೇಳಿಲ್ಲ ಬೆಂಗಳೂರು ನಗರ ಮಾತ್ರ ಇದೆ. ಬೇರೆ ಕಡೆ ಬಗ್ಗೆ ಹೇಳಿಲ್ಲ ಎಂದು ಹೇಳಿದ್ದಾರೆ ಸದ್ಯಕ್ಕೆ ಸರ್ಕಾರ ಆರು ದೊಡ್ಡ ಪಟ್ಟಣಗಳಿಗೆ ಅನುಗುಣವಾಗುವ ರೀತಿಯಲ್ಲಿ ಪ್ರಮುಖವಾಗಿ ಮಾಡುತ್ತದೆ. ಮೈಸೂರು. ಹುಬ್ಬಳ್ಳಿ, ಧಾರವಾಡ, ಬೆಳಗಾಂ, ಮಂಗಳೂರು. ಗುಲ್ಬರ್ಗಾ ಮತ್ತು ಕಾರವಾರ ಈ ಬರ್ಡ್ ಪ್ರಾಜೆಕ್ಟ್ ಏನಿದೆ, ಇದರಿಂದಾಗಿ ಕಾರವಾರ ಹೆಚ್ಚು ಬೆಳವಣಿಗೆ ಆಗುವ ನಿರೀಕ್ಷೆ ಇದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಶಿವಮೊಗ್ಗದಲ್ಲಿ ಪ್ಲಾನಿಂಗ್ ಅಥಾರಿಟಿ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಕಾಂಗ್ರೆಸ್ ಸರ್ಕಾರ ಏನು ಮಾಡಿದೆ, ಅದನ್ನೇ ಮಾಡಿದ್ದೇವೆ ಎಂದು ಹೇಳುತ್ತಾರೆ. ಹೊಸದಾಗಿ ಮಾಡಿರಿ.

ಶ್ರೀ ಎಂ ಚಂದ್ರಶೇಖರ್.—ಮುಂದೆ ಬೇರೆ ನಗರಗಳಿಗೂ ಇದು ಅನ್ವಯವಾಗುತ್ತದೆ. ಇಲ್ಲಿ ಶ್ರೀ ಬಸವಲಿಂಗಪ್ಪನವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕವಾಗಿ ಬೇಕು ಎಂದು ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲ.

ಶ್ರೀ ಎಂ. ಚಂದ್ರಶೇಖರ್.—ಎಲ್ಲಿ ಯಾವ ಜನಾಂಗ ಜಾಸ್ತಿಯಾಗುತ್ತದೆ, ಅವರಿಗೆ ಪ್ರಾತಿನಿಧ್ಯ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ನಾನು ಹೇಳಿದ್ದನ್ನು ಅರ್ಥಮಾಡಿಕೊಂಡರೆ ಸರಿ. ಜಿಲ್ಲಾ ಪರಿಷತ್ತಿನಿಂದ ಆಗಿರತಕ್ಕ ಅನಾಹುತವನ್ನು ಸರಿಪಡಿಸುತ್ತೇನೆ ಎಂದು ಶ್ರೀ ನಜೀರಸಾಬ್ ಅವರು ಹೇಳಿದ್ದಾರೆ. ಆರ್ ಅಂತ ಇದೆಯಲ್ಲಾ ಇದನ್ನು......

ಶ್ರೀ ಎಂ. ಚಂದ್ರಶೇಖರ್:—ಜಿಲ್ಲಾ ಪರಿಷತ್ತು ಎಂದರೆ ಎಂಟು ಹತ್ತು ತಾಲ್ಲೂಕುಗಳು ಸೇರಿ ಲಕ್ಷಾಂತರ ಜನರು ಇರುವಂತ ಕಡೆಯಲ್ಲಿ ಆ ವರ್ಗಗಳು ಈ ವರ್ಗಗಳು ಅಂತ ಇರುತ್ತಾರೆ ನಗರ ಪ್ರದೇಶಗಳಲ್ಲಿ ಎರಡು ವರ್ಗಗಳು ಮಾತ್ರ ಇರುತ್ತವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:—ಏನು ಆಗುತ್ತದೆ ಎಂದರೆ ಸಂವಿಧಾನದ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ೧೫ ಪರ್ಸೆಂಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರಿಗೆ ೩ ಪರ್ಸೆಂಟ್ ಪ್ರಾತಿನಿಧ್ಯ ಇದೆ. ನಾಳೆ ಏನು ಆಗುತ್ತದೆ? ಎಲ್ಲೋ ಒಂದು ಕಡೆ ನಗರಪ್ರದೇಶದಲ್ಲಿ ಷೆಡ್ಯೂಲ್ ಕಾಸ್ಟ್ ಬಹುಸಂಖ್ಯೆಯಲ್ಲಿದ್ದರೂ ಕೂಡ ನಾಳೆ ನಿಮ್ಮ ಪಕ್ಷ ಇರಬಹುದು ಮತ್ತೊಂದು ಪಕ್ಷ ಇರಬಹುದು ಏನು ಮಾಡುತ್ತಾರೆ ಎಂದರೆ it is to suppress genuine peop e belonging to scheduled caste ತಮಗೆ ಬೇಕಾದವರೊಬ್ಬರನ್ನು ರೆಪ್ರೆಸೆಂಟಿಂಗ್ ಟ್ರೈಬ್ ಅಂತ ಹಾಕಿಬಿಟ್ಟು ನಿಯಮಪಾಲನೆ ಆಗಿದೆಯೆಂದು ಹೇಳಿಬಿಡುತ್ತಾರೆ ಆತನಿಗೆ ಬಡವರ ಬಗ್ಗೆ ಆಸಕ್ತಿ ಇರುವುದಿಲ್ಲ ಮೆಜಾರಿಟಿ ಕಮ್ಯುನಿಟಿ ೧೫ ಪರ್ಸೆಂಟ್ ಅನ್ನು ರೆಪ್ರೆಸೆಂಟ್ ಮಾಡತಕ್ಕದ್ದೂ ಇರುವುದಿಲ್ಲ ಈಗಾಗಲೆ ಜಿಲ್ಲಾಪರಿಷತ್ತುಗಳಲ್ಲಿ ಅನಾಹುತ ಮಾಡಿದ್ದಾರೆ. ಆದ್ದರಿಂದ ಇದನ್ನು ತಪ್ಪಿಸುವ ಸಲುವಾಗಿ ಅವರ ಕೈಗೆ ನ್ಯಾಯ ಕೊಡುವ ಸಲುವಾಗಿ, ನಾವು ಹೇಳಿರುವ ಹಾಗೆ ಮಾಡಬೇಕು. ಆ ರೀತಿ ಮಾಡದಿದ್ದರೆ ಅದು ನಮ್ಮ ದುರಾದೃಷ್ಟ...

ಶ್ರೀ ಎಂ. ಚಂದ್ರಶೇಖರ್.—ಜಿಲ್ಲೆಗಳನ್ನು ಪರಿಗಣನೆಗೆ ತೆಗೆದುಕೊಂಡು ನಾಮಕರಣ ಮಾಡುತ್ತೇವೆ.

SRI B. BASAVALINGAPPA.—Who is he to tell us? Who is he to advice us? ನಾವು ಏನು ಹೇಳುತ್ತೇವೆ ಎಂದರೆ, ಕಾನ್‌ಸ್ಟಿಟ್ಯೂಷನ್ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ... ..

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ.....

ಅಧ್ಯಕ್ಷರು.—ಶ್ರೀ ಬಸವಲಿಂಗಪ್ಪನವರೇ, ಸ್ವಲ್ಪ ತಡೆಯಿರಿ. ಮಂತ್ರಿಗಳು ಏನು ಹೇಳುತ್ತಾರೆ ಎಂದು ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಬೇರೆ ಬೇರೆ ಇದೆ. ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಏನು ಇದೆ ಅದನ್ನು ಮಾಡಿ, ಷೆಡ್ಯೂಲ್ಡ್ ಟ್ರೈಬ್‌ಗೆ ಏನು ಮಾಡಬೇಕೋ ಅದನ್ನು ಮಾಡಿ. ಅದನ್ನು ಜಂಟಿ ಮಾಡಬೇಡಿ. 'ಆರ್' ಅಂತ ಇದೆ. ನಾನು ಹೇಳಿದ್ದು ತಮಗೆ ಅರ್ಥವಾಗಿದ್ದರೆ ಸರಿ. ಅರ್ಥ ಆಗದೆ ಇದ್ದರೆ ಮತ್ತೊಂದು ಸಾರಿ ಹೇಳುತ್ತೇನೆ.

ಅವರಿಗೆ ಅನ್ಯಾಯ ಮಾಡಬೇಕೆಂಬ ಇಚ್ಛೆ ಇದ್ದರೆ ನೀವು ಮಾಡಿ. ನಿಮ್ಮ ಪಾರ್ಟಿಯವರು ಏನೇನು ಮಾಡುತ್ತೀರೋ ಅದನ್ನು ಮಾಡಿ. ಆಮೇಲೆ ನಾವು ಮಾಡಿಕೊಳ್ಳುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮಗೆ ಅರ್ಥವಾಗಿದೆ. ಮಾನ್ಯ ಸದಸ್ಯರು ಹೇಳುವಂತಾದ್ದು ಅರ್ಥವಾಗಿದೆ. ಮಂತ್ರಿಗಳಿಗೆ ನೀವು ಯಾರು ಎಂದು ಕೇಳಿದರೆ, ಅವರು ನಿಮ್ಮನ್ನು ನೀವು ಯಾರು ಎಂದು ಕೇಳಿದರೆ, ಉತ್ತರ ಹೇಳುವುದು ಕಷ್ಟ......

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಯಾರು ಎಂದರೆ ವ್ಯಕ್ತಿಗತವಾಗಿ ಅಲ್ಲ ಹೇಳಿದ್ದು. ಕಾನ್‌ಸ್ಟಿಟ್ಯೂಷನ್ ಪ್ರಕಾರ ಎಸ್. ಸಿ ಎಸ್. ಟಿ ಒಂದು ಮಾಡಿ ಪ್ರಾತಿನಿಧ್ಯ ಕೊಡುವುದಕ್ಕೆ ಯಾರಿಗೂ ಅಧಿಕಾರ ಇಲ್ಲ. ಆದ್ದರಿಂದ ನೀವು ಯಾರು ಎಂದು ಹೇಳಿದ್ದು...

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜ್ಯಾಂಗ ಬಿಟ್ಟು ನಾವು ಮಾಡುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ಕೋರ್ಟಿಗೆ ಹೋಗಿದ್ದಾರೆ. ಎಸ್. ಸಿ ಎಸ್. ಟಿ. ವಿವಾದ ಕೋರ್ಟ್ ಮುಂದೆ ಇದೆ. ಜಿಲ್ಲಾ ಪರಿಷತ್ತಿನಲ್ಲಿ ಆದ ವಿಚಾರ ಕೋರ್ಟಿನಲ್ಲಿದೆ. ಒಂದು ತಾವು ಅರ್ಥಮಾಡಿಕೊಳ್ಳಬೇಕು. ಎಸ್.ಟಿ ವಿಚಾರದಲ್ಲಿ ಕೆಲವೊಂದು ಗೊಂದಲ ಇದೆ. ಪರಿವಾರ, ನಾಯಕರು ಇವರುಗಳ ಸಂಖ್ಯೆ ಜಾಸ್ತಿ ಇದೆ. ಎಸ್. ಟಿ. ಎಂಬ ಡೆಫಿನಿಷನ್ ಬಗ್ಗೆ ಬಹಳ ಗೊಂದಲವಾಗಿದೆ, ಈ ರಾಜ್ಯದಲ್ಲಿ ಎಸ್. ಟಿ. ಯಾರು ಎನ್ನುವುದರ ಬಗ್ಗೆ ಹಿಂದೆ ಗೋಕಾಕ ಮತ್ತು.........

ಶ್ರೀ ಕೆ. ಹೆಚ್. ಶ್ರೀನಿವಾಸ್.—ಎಸ್.ಸಿ. ಯವರಿಗೂ ಅನ್ಯಾಯವಾಗುತ್ತಿದೆ. ಎಸ್. ಟಿ. ಸಂಖ್ಯೆ ಕಾರಣಾಂತರಗಳಿಂದ inflate ಆಗಿದೆ. ಆದ್ದರಿಂದ ಜನಸಂಖ್ಯೆ ಮೇಲೆ ಕೊಡುತ್ತೇವೆಂದು ಹೇಳಿದಾಗಲೂ ಕೂಡ ಎಸ್. ಸಿ. ಯವರಿಗೆ ಅನ್ಯಾಯವಾಗುತ್ತದೆ. ಅದಕ್ಕೋಸ್ಕರ ಎಸ್. ಸಿ. ಅವರಿಗೆ ರೆಪ್ರಸೆಂಟೇಷನ್ ಕೊಡುವಂತಿದ್ದರೆ ಅವರಿಗೇ ಕೊಡಿ. ಎಸ್.ಸಿ. ಅವರಿಗೆ ಕೊಡುವುದು ಬೇಡ ಎಂದರೆ ಬಿಟ್ಟುಬಿಡಿ. ಎಸ್.ಸಿ ಅಥವಾ ಎಸ್. ಟಿ. ಎಂದು ಹೇಳಿದರೆ ಅನ್ಯಾಯವಾಗುತ್ತದೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಸಿ ಐ.ಟಿ.ಬಿ. ಏರಿಯಾದಲ್ಲಿ ನೀವು ಏನು ಎಲ್ಲಾ ವೋಟರ್ ಲಿಸ್ಟ್ ಇಟ್ಟುಕೊಂಡು, ಮೆಜಾರಿಟಿ ಇಟ್ಟುಕೊಂಡು, ಕ್ಯಾಸ್ಟ್ ಎಲ್ಲಾ ತೆಗೆದುಕೊಂಡು, ರೆಪ್ರಸೆಂಟೇಷನ್ ಕೊಡುತ್ತೇವೆಂದು ಹೇಳಿದರೆ, ನಾಮಿನೇಷನ್‌ಗೆ ಯಾರು ಆ ಕೆಲಸ ಮಾಡುತ್ತಾರೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ಅರ್ಬನ್ ಏರಿಯಾದಲ್ಲಿ ಎಸ್.ಟಿ. ಗಳೂ ಇದ್ದಾರೆ......

ಶ್ರೀ ಕೆ. ಹೆಚ್ ಶ್ರೀನಿವಾಸ್.—೧೦—೧೫ ಜನರ ಬೋರ್ಡ್ ಮಾಡುತ್ತೀರಿ, ಒಬ್ಬ ಎಸ್. ಸಿ. ಎಸ್. ಟಿ. ರೆಪ್ರಸೆಂಟೇಷನ್ ಕೊಡಿ. ಇಲ್ಲದೇಹೋದರೆ, ಕೊಡಲೇಬೇಡಿ......

ಶ್ರೀ ಎಸ್. ಆರ್. ಬೊಮ್ಮಾಯಿ.—ಎಸ್.ಸಿ.ಎಸ್.ಟಿ. ಯವರಿಗೂ ೧೮ ಪರ್ಸೆಂಟ್ ಕೊಡುತ್ತಿದ್ದೇವೆ......

ಶ್ರೀ ಬಿ. ಬಸವಲಿಂಗಪ್ಪ.—ಅವರಿಗೆ ಬೇರೆ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾಲ್ಲೂಕು ಬೋರ್ಡ್ ಆಕ್ಟ್‌ನಲ್ಲಿ ನೋಡಿ ಹಿಂದೆ ಇದ್ದ ಆಕ್ಟ್‌ನಲ್ಲಿ ಏನಿದೆ ಬೇಕಾದರೆ ನೋಡಿ, ಬೇರೆ ಬೇರೆ ಇಲ್ಲ......

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಬೊಮ್ಮಾಯಿಯವರು ಊದುವುದನ್ನು ಕೊಟ್ಟು ಬಾರಿಸುವುದನ್ನು ತಂದರು ಎಂದು ಮಾಡುತ್ತಾರೆ, ನಾನು ಹೇಳಿದ್ದು ಒಂದು ಅವರು ಮಾತನಾಡಿದ್ದು ಒಂದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಒಂದು ಸೀಟು ಎಸ್.ಸಿ.ಎಸ್.ಟಿ. ಕೊಡುವುದಕ್ಕೆ ಅವಕಾಶ ಇದೆ. ಒಂದೇ ಸೀಟು ನೀವು ಮಾಡಿದಾಗ, ಎರಡೂ ಕೂಡಿ ರೆಪ್ರಸೆಂಟೇಷನ್ ಹೇಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಸೇರಿಸುವುದಿಲ್ಲ. ರಾಜ್ಯಾಂಗದಲ್ಲಿ ಸೇರಿಸಿ ಬಿಟ್ಟಿದ್ದಾರೆ

ಶ್ರೀ ಬಿ. ಬಸವಲಿಂಗಪ್ಪ.—ಸೇರಿಸಿಲ್ಲ, ಅವರು ಸಪರೇಟ್ ಮಾಡಿದ್ದಾರೆ, I think he is ignorant of the Constitution. I am so sorry for you Mr. Bommai. I know you and you know me, Scheduled Castes Constitutional Order 1950 and Scheduled Tribes Constitutional Order 1950 are separate Constitutional orders. I just request you to recognise both the orders. ಎಸ್. ಸಿ. ಬೇರೆ ಮಾಡಿ, ಎಸ್.ಟಿ. ಬೇರೆ ಮಾಡಿ ಸೇರಿಸಿಬಿಟ್ಟು ಏನೇನೋ ಮಾಡುತ್ತಿದ್ದೀರಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಕೊಡುವ ಬಗ್ಗೆ ನಮ್ಮ ರಾಜ್ಯದಲ್ಲಿಗತಕ್ಕ ಕಾನೂನುಗಳನ್ನು ನೋಡಿ. ತಾಲ್ಲೂಕು ಬೋರ್ಡ್‌ನಲ್ಲೂ ಕಾನೂನು ಇದೆ, ಅದರಲ್ಲಿ ಏನು ವರ್ಡಿಂಗ್ ಇದೆ ಎಂಬುದನ್ನು ನೋಡಿ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಒಂದು ಪ್ರಶ್ನೆ ಉದ್ಭವವಾಗಿದೆ. ಜಿಲ್ಲಾ ಪರಿಷತ್ ಆಕ್ಟ್ ಬಗ್ಗೆ ಸಾಕಷ್ಟು ವಾದ ಮಾಡಿದ್ದೇನೆ, ಸಾಕಷ್ಟು ವಾದವಾಡಿ, ಕಾನ್‌ಸ್ಟಿಟ್ಯೂಷನಲ್ ರೈಟ್ಸ್ ಷೆಡ್ಯೂಲ್ಡ್ ಕಾಸ್ಟ್‌ಗೆ ಬೇರೆ ಇದೆ, ಷೆಡ್ಯೂಲ್ಡ್ ಟ್ರೈಬ್‌ಗೆ ಬೇರೆ ಇದೆ, ಅದನ್ನು ಒಂದಕ್ಕೊಂದಕ್ಕೆ ಸೇರಿಸುವುದಕ್ಕೆ ಆಗುವುದಿಲ್ಲ, ಅವರು ಇವರು ಬೇರೆ ಇದ್ದಾರೆ, ಕಾನೂನುಗಳು ಬೇರೆ ಇದಾವೆ, ಕಾನ್‌ಸ್ಟಿಟ್ಯೂಷನಲ್ ಆರ್ಡರ್ಸ್ ಬೇರೆ ಇದ್ದಾವೆ, ಎಸ್. ಸಿ.ಗೆ ರಿಸರ್ವೇಷನ್ ಕೊಡಬೇಕೆಂದರೆ ಬೇರೆ ಕೊಡಲೇಬೇಕು ಎಂದು ಹೇಳಿದೆ. ಎಸ್.ಟಿ.ಗೆ ರಿಸರ್ವೇಷನ್ ಕೊಡಬೇಕೆಂದರೆ ಬೇರೆ ಕೊಡಲೇಬೇಕು ಎಂದು ಹೇಳಿದೆ. ಇದನ್ನು ದಯುವಿಟ್ಟು ತಿಳಿದುಕೊಂಡು ಮಾತನಾಡಿ. ಚರ್ಚೆ ಸಾಕಷ್ಟು ಮಾಡಿದ್ದೇವೆ ಕೊನೆಗೆ ಮಾನ್ಯ ನಜೀರ್ ಸಾಹೇಬರು ಏನು ಹೇಳಿದರು ಎಂದರೆ ಇದನ್ನು ಸರಿ ಮಾಡುತ್ತೇವೆ. ಎಂದು ಇದೇ ಸದನದಲ್ಲಿ ಹೇಳಿದ್ದಾರೆ. ಇದು ತಪ್ಪಾಗಿದೆ ಇದನ್ನು ಸರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆರ್ ಎಂಬುದನ್ನು ತೆಗೆದು ಅಮೆಂಡ್‌ಮೆಂಟ್ ತರುತ್ತೇವೆ ಎಂದು ಹೇಳಿದ್ದರು. ಈ ಸಲ ತರಬೇಕಾಗಿತ್ತು. ಆದರೆ ತರಲಿಲ್ಲ. ಆದುದರಿಂದ ದಯುವಿಟ್ಟು ಪುನಃ ತಪ್ಪು ಮಾಡುವುದಕ್ಕೆ ಹೋಗಬೇಡಿ. ಎಸ್.ಸಿ. ಆರ್ ಎಸ್.ಟಿ. ಎಂದು ಹಾಕುವುದು ಬೇಡ. ಎಸ್.ಸಿ. ಅಂಡ್ ಎಸ್.ಟಿ. ಎಂದು ಹಾಕಿ. ನೀವು ನಮ್ಮನ್ನು ಏನು ಮಾಡಬೇಕು ಎಂದು ಮಾಡಿದ್ದೀರಿ. ನಿಮ್ಮ ಪಾರ್ಟಿಯವರು ಅಧಿಕಾರಕ್ಕೆ ಬಂದುಬಿಟ್ಟು ಆಕಾಶದಿಂದ ಏನನ್ನೋ ತಂದುಬಿಡುತ್ತೇವೆ ಎಂದು ಹೇಳಿದ್ದಿರಿ. ಬೆಳಗಿನಿಂದ ಇಸವಿಯಿಂದ ನಿಮ್ಮ ಮಾನ್ಯ ಮುಖ್ಯಮಂತ್ರಿಗಳು ಏನೇನು ಹೇಳಿದ್ದಾರೆ. ಅದೆಲ್ಲಾ ಧೂಳೀಪಟವಾಗಿದೆ, ನೀವು ಇನ್ನೂ ಧೂಳಿಪಟ ಮಾಡುವುದಕ್ಕೆ ಹೋಗುತ್ತಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಸ್.ಸಿ. ಎಸ್.ಟಿ. ಇಬ್ಬರಿಗೂ ಪೇರ್ ಆಗಿರಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಬ್ಬರಿಗೂ ಕೊಡಿ, ಅವರನ್ನು ಕಿತ್ತುಹಾಕಿ ಎಂದು ಹೇಳುತ್ತಿಲ್ಲ. ಎಸ್.ಟಿ.ಗೆ ಕೊಡಬೇಡಿ ಎಂದು ಅವರ ಅಭಿಪ್ರಾಯ ಅಲ್ಲ, ಎಸ್.ಸಿ, ಅಂಡ್ ಎಸ್.ಟಿ. ಎಂದು ಹಾಕಿ ಇಬ್ಬರಿಗೂ ಕೊಡಿ ಎಂದು ಹೇಳುತ್ತಿದ್ದಾರೆ.

ಶ್ರೀ ವೀರಣ್ಣ (ಸಾರಿಗೆ ರಾಜ್ಯ ಮಂತ್ರಿಗಳು).—ನಮ್ಮ ಸ್ನೇಹಿತರಾದ ಬಸವಲಿಂಗಪ್ಪನವರು ಎಸ್. ಸಿ. ಗಳಿಗೆ ಕೊಡತಕ್ಕಂಥ ರೈಟ್ಸ್‌ನ್ನು ಕರ್ಟೈಲ್ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ ಉದಾಹರಣೆಗೆ ಸೀಟ್ಸ್ ಎಸ್.ಸಿ. ಎಸ್.ಟಿ.ಗೆ ಅಂದರೆ ಎಲೆಕ್ಷನ್‌ನಲ್ಲಿ ಕಂಟೆಸ್ಟ್ ಮಾಡಿದರೆ ಎಂಟು

ಜನರೂ ಎಸ್. ಸಿ. ಯವರೇ ಬರಬಹುದು. ಐದು ಎಸ್.ಸಿ.ಗೆ ಮತ್ತು ಮೂರು ಎಸ್.ಟಿ.ಗೆ ಎಂದರೆ ಎಸ್. ಸಿ. ಗಳಿಗೆ ಕಡಿಮೆಯಾಗುತ್ತದೆ. ಐದೇ ಜನ ಏತಕ್ಕೆ ಬರಬೇಕು, ಎಂಟೂ ಜನರು ಬರುವುದು ನಿಮಗೆ ಬೇಡವೇ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಮಿಸ್ ಇಂಟರ್‌ಪ್ರಿಟ್ ಮಾಡುತ್ತಿದ್ದಾರೆ.

ಶ್ರೀ ಎಂ. ಚಂದ್ರಶೇಖರ್,—ಈಗಲೂ ಯಾವುದೇ ಒಂದು ನಾಮಿನೇಷನ್ ನೋಡಿದಾಗ ಅಲ್ಲಿ ಎಸ್.ಸಿ, ಗಳಿಗೆ ಹೆಚ್ಚಾಗಿ ಎಲ್ಲಾ ಕಡೆ ನಾಮಿನೇಟ್ ಮಾಡುತ್ತಿದ್ದೇವೆ, ಅವರನ್ನು ನಾವು ಪರಿಗಣನೆಗೆ ತೆಗೆದುಕೊಂಡಿದ್ದೇವೆ. ಯಾರದ್ದು ಹೆಚ್ಚು ಜನಸಂಖ್ಯೆ ಇದೆ, ಯಾರು ಹೇಗಿದ್ದಾರೆ ಅದೆಲ್ಲಾ ನೋಡಿ, ಎಸ್.ಸಿ, ಯವರನ್ನೇ ಹೆಚ್ಚಾಗಿ ಪರಿಗಣನೆಗೆ ತೆಗೆದುಕೊಂಡಿದ್ದೇವೆ. ಆದುದರಿಂದ ಇದನ್ನು ದಯವಿಟ್ಟು ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಇಷ್ಟು ಹೇಳಿ ಎಲ್ಲಾ ಅಂಶಗಳ ಬಗ್ಗೆ ನಾನು ವಿವರಣೆ ಕೊಟ್ಟಿದ್ದೇನೆ. ಈ ಒಂದು ಮಸೂದೆಯನ್ನು ಪಾಸ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ವೀರಣ್ಣನವರಿಗಾಗಲೀ, ಮಾನ್ಯ ಚಂದ್ರಶೇಖರ್‌ವರಿಗಾಗಲೀ, ಈಗಲೇ ಅಮೆಂಡ್ ತರಬೇಕೆಂದು ನಾವು ಹೇಳುತ್ತಿಲ್ಲ, ಆದರೆ ಪ್ರಶ್ನೆ ಏನಾಗಿದೆ, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳಲ್ಲಿ ತಾವು ಅಂಕಿಸಂಖ್ಯೆ ತರಿಸಿ ನೋಡಿ, ಎಸ್.ಸಿ.ಆರ್. ಎಸ್.ಟಿ. ಎಂದು ಹಾಕಿ ಏನಾಗಿದೆ ಎಂದರೆ ಎಸ್.ಸಿ.ಗಳಿಗೆ ಅನ್ಯಾಯವಾಗಿದೆ, ಎಲ್ಲಾ ಕಡೆ ಷೆಡ್ಯೂಲ್ಡ್ ಟ್ರೈಬ್‌ನವರೇ ಬಂದುಬಿಟ್ಟಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಇದು ಚುನಾವಣೆ ಅಲ್ಲ ಸರಕಾರದ ನಾಮಿನೇಷನ್ ಎಲೆಕ್ಷನ್‌ಸಲ್ಲಿ ಯಾರು ಬರುತ್ತಾರೆ ಅದು ಬೇರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಮಾಜದಲ್ಲಿ ಒಟ್ಟು ಪರಿಣಾಮ ಏನಾಗಿದೆ ಎಂದರೆ ಸೋಷಿಯಲ್ ಹೈರಾರ್ಕಿಯಲ್ಲಿ ಷೆಡ್ಯೂಲ್ ಕಾಸ್ಟ್‌ನವರು ಇನ್ನೂ ಕೆಳಗಿರತಕ್ಕದ್ದು, ಅವರ ಪ್ರಭಾವ ಕಡಿಮೆ ಇರತಕ್ಕದ್ದು ಇದೆ. ಆದುದರಿಂದ ಇವರಿಗೆ ಹೆಚ್ಚು ಪ್ರಾತಿನಿಧ್ಯ ಕೊಡಬೇಕಾಗುತ್ತದೆ. ಎಸ್.ಸಿ, ಎಸ್.ಟಿ, ಇಬ್ಬರೂ ಬೇರೆ ಇರುವಾಗ, ಇಬ್ಬರಿಗೂ ಬೇರೆಯಾಗಿ ಪ್ರಾತಿನಿಧ್ಯ ಕೊಟ್ಟರೆ ಸಾಮಾಜಿಕ ನ್ಯಾಯ ಸರಿಯಾಗಿ ದೊರಕುತ್ತದೆ ಎಂದು ಒತ್ತಾಯ ಮಾಡುತ್ತೇನೆ. ಆದುದರಿಂದ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳಲ್ಲಿ ವಾಸ್ತವವಾಗಿ ಏನು ನಡೆದಿದೆ ಎಂಬುದರ ಆಧಾರದ ಮೇಲೆ ತಾವು ಯಾವುದೇ ಮುಂದೆ ಮಾಡತಕ್ಕಂಥ ಮಸೂದೆಗಳಲ್ಲಿ ಅದು ನಾಮಕರಣ ಇರಲಿ ಏನೇ ಇರಲಿ, ಇಬ್ಬರಿಗೂ ಪ್ರತ್ಯೇಕವಾದ ಪ್ರಾತಿನಿಧ್ಯ ಕೊಡತಕ್ಕಂಥ ವ್ಯವಸ್ಥೆ ಮಾಡಿದರೆ ಮಾತ್ರ ಸಾಮಾಜಿಕ ನ್ಯಾಯ ಕೊಡುವುದಕ್ಕೆ ಆಗುತ್ತದೆ. ಇಲ್ಲದಿದ್ದರೆ ಖಂಡಿತವಾಗಿ ಆಗುವುದಿಲ್ಲ ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಹದಿನೆಂಟು ಪರ್ಸೆಂಟ್ ನಾಮಿನೇಷನ್ ಮಾಡುತ್ತೇವೆ. ಅದರಲ್ಲಿ ೧೫ ಪ್ಲಸ್ ೩ ಪ್ರಮೋಷನ್‌ನಲ್ಲಿ ಮಾಡಬೇಕೆಂದು ವಾದ. ನಾಮಿನೇಷನ್ ಮಾಡುವಾಗ, ಎರಡೂ ಕ್ಲಾಸ್‌ಗೆ ಕೊಡತಕ್ಕಂಥ ಆಲೋಚನೆ ಮಾಡಬೇಕು ಆದರೆ ಅಲ್ಲಿ ಎರಡು ಪ್ರತ್ಯೇಕವಾಗಿ ಮಾಡುವುದಕ್ಕೆ ಆಗುವುದಿಲ್ಲ. ಎರಡು ಮಾಡಿದ್ದರೆ ಪರ್ಸೆಂಟ್ ದೃಷ್ಟಿಯಿಂದ ಜಾಸ್ತಿಯಾಗಿ, ಅದು ೫೦ ಪರ್ಸೆಂಟ್ ಆಗಬಹುದು. ನಾಮಿನೇಷನ್ ಮಾಡುವಾಗ ಬ್ಯಾಕ್‌ವರ್ಡ್ ಕ್ಲಾಸಸ್, ಮೈನಾರಿಟೀಸ್ ಎಲ್ಲಾ ಇರುತ್ತಾರೆ. ಅವರಿಗೂ ಪ್ರಾತಿನಿಧ್ಯ ಕೊಡಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಇದು ಸೂಕ್ತವಾಗಿ ಕಾಣುತ್ತಿದೆ. ಮುಂದೆ ಈ ಮನೆ ಬೇರೆ ಅಭಿಪ್ರಾಯ ಸೂಚಿಸಿದರೆ, ನಮ್ಮದೇನೂ ಅಭ್ಯಂತರ ಇಲ್ಲ. ಅದು ಮುಂದಕ್ಕೆ ಸೇರಿದ್ದು, ಈಗ ಇದನ್ನು ಒಪ್ಪಬಹುದು ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ವಿಷಯ ಏನೆಂದರೆ, ನೀವು ಇದನ್ನು ಒಪ್ಪಿಕೊಳ್ಳಬಹುದು. ಇದರಿಂದ ಇಂಬ್ಯಾಲೆನ್ಸ್ ರಿಮೂವ್ ಮಾಡಿದಹಾಗೆ ಆಗುತ್ತದೆ. ನಾನು ಆಗಲೇ ಕೇಳಿದೆ, ಆದರೆ ತಾವು ಉತ್ತರ ಹೇಳಲಿಲ್ಲ.

೫-೩೦ ಪಿ. ಎಂ.

ಶ್ರೀ ಎಂ. ಚಂದ್ರಶೇಖರ್.—ಅಧಿಕಾರಿಗಳು ಇರುತ್ತಾರೆ. ಅಧಿಕಾರಿಯೇತರರೂ ಇರುತ್ತಾರೆ. ಹೆಣ್ಣು ಮಕ್ಕಳು ಇರುತ್ತಾರೆ. ನಾವುಇಲ್ಲಿ ನಾಮಿನೇಷನ್ಸ್ ಮಾಡುವುದು ಈ ಎಸ್.ಸಿ. ಮತ್ತು ಎಸ್.ಟಿ. ಯವರಿಗೆ ಈಗ ಇಟ್ಟಿರತಕ್ಕ ಪ್ರಾತಿನಿಧ್ಯ ಸಾಲದು ಎಂದು ಕಂಡು ಬಂದರೆ ಮತ್ತೆ ನಾವು ಈ ಮನೆಯ ಮುಂದೆ ಬರುತ್ತೇವೆ. ಆಗತಾವು ಸೂಚನೆ ಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಎರಡು ಮೂರು ಪ್ರಶ್ನೆಗಳನ್ನು ಕೇಳಿದೆ. ಅದಕ್ಕೆ ತಾವು ಉತ್ತರ ಹೇಳಲಿಲ್ಲ. ಈಗ ತಾವು ಕೊಟ್ಟಿರುವ ಪ್ರಾತಿನಿಧ್ಯ ೧೭ ಜನರಿಗೆ ಮಾತ್ರ. ಇದರಲ್ಲಿ ೧೦ ಜನ ಅಧಿಕಾರಿಗಳೇ ಇರುತ್ತಾರೆ. ಇನ್ನು ೭ ಜನರನ್ನು ಮಾತ್ರ ನಾಮಿನೇಷನ್ಸ್ ಮಾಡುತ್ತೀರಿ...

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ದುರ್ಬಲವರ್ಗದವರ ಬಗ್ಗೆ ಸರ್ಕಾರಕ್ಕೆ ಎಷ್ಟು ಅನುಕಂಪ ಇದೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮಗೆಷ್ಟು ಅನುಕಂಪ ಇದೆ ಎಂದು ನಮಗೆ ಚೆನ್ನಾಗಿ ಗೊತ್ತು. ಇದರಲ್ಲಿ ೧೫ ಪರ್ಸೆಂಟ್ ಹರಿಜನರಿಗೆ ೩ ಪರ್ಸೆಂಟ್ ಗಿರಿಜನರಿಗೆ ಇದ್ದೇ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಇದರಲ್ಲಿ ಪರ್ಸೆಂಟೇಜ್ ಎಲ್ಲಿಂದ ಬಂತು? ಎಸ್ ಸಿ ಕಾಲಂ ಎಸ್ ಟಿ ಕಾಲು ಎಂದು ಮಾಡಿ...

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡಿರುತ್ತೇವೆ.

SRI MALLIKARJUN M. KHARGE.—I want to bring to your kind notice about the Constitutional provision under Article 330.

ಶ್ರೀ ಎಂ. ವೀರಪ್ಪಮೊಯ್ಲಿ.—ಹೆಚ್ಚು ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಏತಕ್ಕೆ ಹೆದರುತ್ತೀರಿ? ಹರಿಜನ ಮತ್ತು ಗಿರಿಜನರಿಗೆ ಪ್ರಾತಿನಿಧ್ಯೆಯನ್ನು ಕೊಡಲು ಇಷ್ಟು ಆರ್ಗ್ಯುಮೆಂಟ್ಸ್ ಏತಕ್ಕೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸಮಾಜದಲ್ಲಿ ಎಲ್ಲರಿಗೂ ಅವಕಾಶ ಇರಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—೧೭ ಇದ್ದದ್ದನ್ನು ೧೮ ಮಾಡಿದರೆ ಏನು ನಿಮಗೆ ನಷ್ಟವಾಗುತ್ತದೆ?

ಶ್ರೀ ಎಂ. ಚಂದ್ರಶೇಖರ್.—ಸಮಾಜದಲ್ಲಿರತಕ್ಕಂಥ ಹಿಂದುಳಿದ ವರ್ಗದವರು ಅಲ್ಪ ಸಂಖ್ಯಾತರಿಗೆ ಅವಕಾಶ ಕೊಡುವುದು ಬೇಡವೇ?

ಶ್ರೀ ಎಂ ವೀರಪ್ಪಮೊಯ್ಲಿ.—ನೀವು ನಾಮಿನೇಷನ್ ಮಾಡುವಾಗ ನಿಮ್ಮ ಪಕ್ಷದವರನ್ನೇ ನಾಮಿನೇಷನ್ ಮಾಡಿಕೊಳ್ಳುತ್ತೀರಿ...

ಅಧ್ಯಕ್ಷರು.—ಮಾನ್ಯ ಮಂತ್ರಿಗಳ ಉತ್ತರ ಮುಗಿಯಿತೋ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.—ಮಾನ್ಯ ಅಧ್ಯಕ್ಷರೇ, ರಾಜ್ಯಾಂಗ ವಿಧಿ ೩೩೦ರಲ್ಲಿ ಏನಿದೆ ಎಂಬುದನ್ನು ನೋಡಿ

> I quote from Article 330: "Reservation of seats for Scheduled castes and Scheduled Tribes in the House of the People (1) Seats shall be reserved in the House of the people for-(a) the Scheduled Castes. (b) The Scheduled Tribes except the Scheduled Tribes-(i) in the tribal areas of Assam, (ii) in Nagaland (iii) in Meghalays, (iv) in Arunachal Pradesh and (v) in Mizoram."

ಕೆಲವು ಜನರನ್ನು ಇಲ್ಲಿ ಕೊಟ್ಟಿದ್ದಾರೆ. ರಾಜ್ಯಾಂಗ ವಿಧಿ ೩೩೦ರ ಪ್ರಕಾರ ಷೆಡ್ಯೂಲ್ (ಎ)ನಲ್ಲಿ ಎಸ್.ಸಿ. ಎಂದಿದ್ದಾರೆ. ಷೆಡ್ಯೂಲ್ (ಬಿ)ನಲ್ಲಿ ಎಸ್.ಟಿ. ಎಂದಿದ್ದಾರೆ. ಇವರಿಗೆ ಬೇರೆ ಬೇರೆಯಾಗಿ

ಯಾವ ಯಾವ ರೀತಿ ಮೀಸಲಾತಿ ಕೊಡಬೇಕೆಂದು ಹೇಳಿದ್ದಾರೆ, Under Article 332, "(1) Seats shall be reserved for the Scheduled Castes and the Scheduled Tribes.". in the legislative Assemblies of the States. ಇದರ ಅರ್ಥ ಎಸ್ ಸಿ ಬೇರೆ ಎಸ್ ಟಿ ಬೇರೆ. ರಾಜ್ಯಾಂಗ ವಿಧಿ ೩೩೦ ಮತ್ತು ೩೩೨ರಲ್ಲಿ ಸಪರೇಟ್ ಆಗಿ ಕೊಟ್ಟಿದ್ದಾರೆ. ಇವತ್ತು ನೀವು ಈ ತಿದ್ದುಪಡಿಯನ್ನು ಒಳ್ಳೆಯ ಮನಸ್ಸಿನಿಂದ ತರಬಹುದು. ಆದರೆ ನಾಳೆ ಅಲ್ಲಿ ಕೆಲವು ವೆಸ್ಟೆಡ್ ಇಂಟ್ರೆಸ್ಟ್ ಇರುವವರು ಪ್ರಯತ್ನ ಪಟ್ಟರೆ ಅಂತಹವರನ್ನು ಬೀದರ್ ನಲ್ಲಿ ಹಾಕಬಹುದು, ಬೇರೆ ಕಡೆ ಹಾಕಬಹುದು, ಆದ್ದರಿಂದ ಈ ಪ್ರಾವಿಜನ್‌ನಲ್ಲಿ ಕ್ಲಿಯರ್ ಆಗಿರುವಂತೆ ಮಾಡಬೇಕು.

ಇಲ್ಲದಿದ್ದರೆ ಇದರಿಂದ ಬಹಳ ತೊಂದರೆಯಾಗುತ್ತದೆ. ಅವಕಾಶ ಸಿಕ್ಕಬೇಕಾದವರಿಗೆ ಸಿಕ್ಕುವುದಿಲ್ಲ. ಇದನ್ನು ಕ್ಲಿಯರ್ ಕಟ್ ಮಾಡಿ. ಷೆಡ್ಯೂಲ್ ಕ್ಯಾಸ್ಟ್‌ಗೆ ಬೇರೆ ಪ್ರಾವಿಷನ್ ಮಾಡಿ, ಷೆಡ್ಯೂಲ್ ಟ್ರೈಬ್‌ನವರಿಗೇ ಬೇರೆ ಪ್ರಾವಿಷನ್ ಮಾಡಿ, ೩ ಪರ್ಸೆಂಟ್ ಎಂದು ಮಾಡಿ. ಅಥವಾ ೩ ಡಿಸ್ಟ್ರಿಕ್ಟ್ ಎಂದು ರಿಸರ್ವ್ ಮಾಡಿ, ಅಥವಾ ೩ ಸಿಟಿ ಎಂದು ರಿಸರ್ವ್ ಮಾಡಿ. ಅವರಿಗೆ ಸಪ್ರೆಸ್ ಮಾಡುವುದಕ್ಕೋಸ್ಕರ ಆರ್ (ಅಥವಾ) ಎಂದು ಇಟ್ಟರೆ ಅದು ಅನ್‌ಹೆಲ್ಪ್‌ಫುಲ್ ಆಗುತ್ತದೆ. ನೀವು ಮಾಡಿರುವ ಪ್ರಕಾರ ಬೆಳಗಾಂ ನವರು ಬಂದು ಕೂರ್ಗ್‌ನಲ್ಲಿ ಕಂಟೆಸ್ಟ್ ಮಾಡಬಹುದು. ಕೂರ್ಗ್‌ನವರು ಬಂದು ಗುಲ್ಬರ್ಗಾದಲ್ಲಿ ಕಂಟೆಸ್ಟ್ ಮಾಡಬಹುದು. ಮೈಸೂರಿನವರು ಬಂದು ಬೆಳಗಾಂನಲ್ಲಿ ಕಂಟೆಸ್ಟ್ ಮಾಡಬಹುದು. ಇದು ಎಕ್ಸ್‌ಪ್ಲಾಯಿಟೇಷನ್ ಆಗುತ್ತದೆ. ಯಾವ ಜನಾಂಗಕ್ಕೆ ಸರ್ಕಾರ ನ್ಯಾಯವಾದ ಹಕ್ಕನ್ನು ದೊರಕಿಸಿಕೊಡಬೇಕೋ ಅವುಗಳಿಗೆ ನ್ಯಾಯವಾದ ಹಕ್ಕನ್ನು ಈ ಆ್ಯಕ್ಟ್‌ನಿಂದ ದೊರಕಿಸಿಕೊಡಲು ಸಾಧ್ಯವಾಗುವುದಿಲ್ಲ. Whatever provisions you are making are contrary to Articles 330 and 332 of the Constitution of India. Any Act basically, should not be against the Constitutional provisions. This is my Point of Order.

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರೇ, ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆರ್ಟಿಕಲ್ ೩೩೦ ಮತ್ತು ೩೩೨ಕ್ಕೆ ಇವರು ಮಾಡಿರುವುದು ವಿರೋಧವಾಗುತ್ತದೆ. I have raised this Point of Order.

ಅಧ್ಯಕ್ಷರು.—ಇದರ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಹೇಳಿದ್ದಾರೆ, ಹಾಗೂ ಮಾನ್ಯ ಮೊಯಿಲಿಯವರೂ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ನಾನು ಕಾನ್ಸ್ಟಿಟ್ಯೂಷನ್ ಆರ್ಟಿಕಲ್ ೩೩೦ ಮತ್ತು ೩೩೨ರನ್ನು ಓದಿದ್ದೇನೆ. ಅದರ ಪ್ರಕಾರ ಇದು ವಿರೋಧವಾಗುತ್ತದೆ. ಇದರ ಬಗ್ಗೆ ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ.

ಅಧ್ಯಕ್ಷರು.—ಇಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರುವುದಿಲ್ಲ. This is not the stage at which you can raise a Point of Order. Government will give proper reply to the points raised by you.

ಶ್ರೀ ಬಿ. ಬಸವಲಿಂಗಪ್ಪ.—ಈಗ ಮಾನ್ಯ ಖರ್ಗೆಯವರು ಸ್ಪಷ್ಟವಾಗಿ ಹೇಳಿದ್ದಾರೆ. ಕಾನ್ಸ್ಟಿಟ್ಯೂಷನಲ್ಲಿರುವ ನಿಯಮವನ್ನು ಕ್ಲಿಯರ್ ಆಗಿ ಹೇಳಿದ್ದಾರೆ. ಕಾನ್ಸ್ಟಿಟ್ಯೂಷನ್‌ನ ಆರ್ಟಿಕಲ್ ೩೩೦ ಮತ್ತು ೩೩೨ರಲ್ಲಿ ಹೇಳಿರುವ ಪ್ರಕಾರ ಷೆಡ್ಯೂಲ್ ಕ್ಯಾಸ್ಟ್ ನವರಿಗೇ ಬೇರೆ ಷೆಡ್ಯೂಲ್ ಟ್ರೈಬ್‌ನವರಿಗೇ ಬೇರೆ ರಿಸರ್ವ್ ಮಾಡಬೇಕಾಗುತ್ತದೆ. ನೀವು ಆ ರೀತಿ ಮಾಡುವುದಕ್ಕಾಗುವುದಿಲ್ಲ ಎಂದರೆ ಏನರ್ಥ ?

ಅಧ್ಯಕ್ಷರು. – ಮಾನ್ಯ ಶ್ರೀನಿವಾಸ್‌ರವರೇ ತಾವು ಕೇಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಬೇರೆ ಬೇರೆ ಇಲಾಖೆಯ ಅಧಿಕಾರಿಗಳನ್ನು ಇಲ್ಲಿ ಹಾಕಿದ್ದೀರಿ. ಇವರು ಅಲ್ಲಿ ಸುಮ್ಮನೆ ಕುಳಿತುಕೊಂಡು ತಮ್ಮ ಡಿಪಾರ್ಟ್‌ಮೆಂಟ್‌ಗಳ ರಕ್ಷಣೆಗೋಸ್ಕರ ಮೆಂಟಲ್ ರಿಸರ್ವೇಷನ್ ಇಟ್ಟುಕೊಂಡು ಕೆಲಸ ಮಾಡುತ್ತಾರೆ. I raised a point that the

decisions of this Authority must be binding on all the Departments which are concerned with the development of the area. ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯಲ್ಲೂ ಸಹ ಇದೇ ಹಣೆಬರಹವಾಗಿದೆ. ಒಂದು ಡಿಸೀಷನ್ ಕೂಡ ಕ್ಯಾರಿ ಔಟ್ ಮಾಡುವುದಿಲ್ಲ. ಎರಡು ಇರೋ ಅಥಾರಿಟಿಗಳನ್ನು ಒಂದು ಮಾಡುತ್ತಿದ್ದೀರಿ. ಆದರೆ ಶಿವಮೊಗ್ಗದಲ್ಲಿ ಮಾತ್ರ ನೀವು ಎಕ್ಸೆಪ್ಷನ್ ಏಕೆ ಮಾಡಿದ್ದೀರಿ. ಶಿವಮೊಗ್ಗದಲ್ಲಿ ಪ್ಲಾನಿಂಗ್ ಅಥಾರಿಟಿ ಇದೆ ಮತ್ತು ಸಿ.ಐ.ಟಿ.ಬಿ. ಇದೆ. ಅವುಗಳನ್ನು ಏಕೆ ಒಂದೇ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ? ಇದರಲ್ಲಿ ನಿಮ್ಮ ಇಂಟರೆಸ್ಟ್ ಏನು ಇದೆ? ಇದರ ಅಗತ್ಯ ಶಿವಮೊಗ್ಗದಲ್ಲಿ ಇಲ್ಲವೆ? ತಾವು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್‌ನಲ್ಲಿ "with a view to speeding up Planning and development of land" ಎಂದು ಹೇಳಿದ್ದೀರಿ. ಏನು ಡೆವಲಪ್‌ಮೆಂಟ್ ಮಾಡಿದ್ದೀರಿ? ನಾನು ಈ ಸಿ. ಐ. ಟಿ. ಬಿ. ನವರು ೧೨ ವರ್ಷಗಳಲ್ಲಿ ಕೇವಲ ಎಂಟುನೂರು ಚಿಲ್ಲರೆ ಸೈಟುಗಳನ್ನು ಮಾತ್ರ ಹಂಚಿದ್ದಾರೆಂದು ಆಗಲೇ ಹೇಳಿದ್ದೇನೆ. ಇದಕ್ಕೆ ಕಾರಣಗಳೇನು ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಸಮಾಜದ ಎಲ್ಲಾ ವರ್ಗದ ಜನರಿಗೆ ಪ್ರಾತಿನಿಧ್ಯ ಕೊಡಬೇಕು ಎನ್ನುವ ದೃಷ್ಟಿಯಿಂದ ಮಾತ್ರ ಅಲ್ಲಿ ೪ ಜನ ಅಧಿಕಾರೇತರರನ್ನು ನಾಮಕರಣ ಮಾಡಿರುವುದು ಪರಿಶಿಷ್ಟ ಜಾತಿ ಮತ್ತು ಹೆಣ್ಣು ಮಕ್ಕಳಿಗೆ ಮೀಸಲಾತಿಯನ್ನು ಕಡ್ಡಾಯ ಮಾಡಿದ್ದೇವೆ. ಇನ್ನು ಎರಡನೆಯದರಲ್ಲಿ, ಸಮಾಜದ ಮಿಕ್ಕ ವರ್ಗಗಳಲ್ಲಿ ಯಾರನ್ನು ಬೇಕಾದರೂ ಹಾಕಬಹುದು. ಎಲ್ಲರಿಗೂ ಪ್ರಾತಿನಿಧ್ಯ ಸಿಗುವುದಿಲ್ಲ, ಅಲ್ಪಸಂಖ್ಯಾತರಿರಬಹುದು, ಮಧ್ಯಮವರ್ಗದವರಿರಬಹುದು. ಇದರಲ್ಲಿ ಹಿಂದುಳಿದ ವರ್ಗದವರಿಗೂ ಕೂಡ ಸಿಕ್ಕಿದರೂ ಸಿಗಬಹುದು, ಹಾಗೆಯೇ ಅಲ್ಪಸಂಖ್ಯಾತರಿಗೆ ಮುಂದುವರಿದ ವರ್ಗದವರಿಗೆ ಕೂಡ ಸಿಗಬಹುದು. ಆದುದರಿಂದ ಇವೆರಡನ್ನು ಮಾತ್ರ ಕಡ್ಡಾಯ ಮಾಡಿದ್ದೇವೆ. ಈ ಎರಡು ವರ್ಗಗಳ ಬಗ್ಗೆ ಕಳಕಳಿ ಇರುವುದರಿಂದ ಹೀಗೆ ಮಾಡಿದ್ದೇವೆ. ಯಾರೋ ನಾಲ್ಕು ಜನ ಹೀಗೆ ಮಾಡಿ ಎಂದು ಹೇಳಿಬಿಟ್ಟರು ಎಂದು ನಾವು ಇದನ್ನು ಮಾಡಿಲ್ಲ. ಆ ಎಸ್. ಸಿ. ಮತ್ತು ಎಸ್.ಟಿ. ವರ್ಗಗಳ ಜನರ ಬಗ್ಗೆ ನಮಗೆ ಪ್ರಾಮಾಣಿಕವಾದ ಕಳಕಳಿ ಇರುವುದರಿಂದ ಅವರಿಗೆ ಕಾದಿರಿಸಿದ್ದೇವೆ. ಇಲ್ಲಿ ನಾಲ್ಕು ಜನರಿಗೆ ಅವಕಾಶ ಇರುವುದರಿಂದ ಎಲ್ಲಾ ವರ್ಗಗಳಿಗೂ ಪ್ರಾತಿನಿಧ್ಯ ಕೊಡುವ ಉದ್ದೇಶದಿಂದ ಮಾಡಿದ್ದೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೇ, ಶಿವಮೊಗ್ಗದಲ್ಲಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂವಿಧಾನದ ೩೩೦–೩೩೨ರಲ್ಲಿ ಏನು ಹೇಳಿದೆ ಎಂಬುದನ್ನು ನೋಡಿ. ಇಂತಹ ವಿಷಯಗಳಲ್ಲಿ ಯಾವುದೇ ರೀತಿಯ ಕಾನೂನುಗಳನ್ನು ಮಾಡುವಾಗ ಈ ಪ್ರಾವಿಜನ್‌ನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಬೇಕೆಂದು ಕಾನ್ಸಿಟಿಟ್ಯೂಷನ್ ಮಾಡಿದ್ದು. ನೀವು ಅದರ ವಿರುದ್ಧವಾಗಿ ಯಾವುದೇ ಕಾನೂನು ಮಾಡಿದರೂ ಕೂಡ ಅದು ಅನ್‌ಕಾನ್‌ಸಿಟ್ಯೂಷನಲ್ ಆಗುತ್ತದೆ.

ಅಧ್ಯಕ್ಷರು.—ಅನ್‌ಕಾನ್‌ಸ್ಟಿಟ್ಯೂಷನಲ್ ಮಾಡುವವರು ಯಾರು ?

ಶ್ರೀ ಎಂ. ಎಸ್. ಕೃಷ್ಣನ್.—ಶಾಸನ ರಚನಾಕಾರರು ಎಂದು ಹೇಳಿಕೊಂಡು ನಾವೇ ಹೀಗೆ ಮಾಡಿದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಯಾರು ಮಾಡುತ್ತಾರೆ ಗೊತ್ತೇ ? ರಾಜ್ಯಾಂಗಕ್ಕೆ ವಿರುದ್ಧವಾಗಿರತಕ್ಕಂಥವರು ಮಾಡುತ್ತಾರೆ. We are not a party to all their decisions.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ಏನು ಪ್ರೆಸ್ಟೀಜ್ ಇದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಖರ್ಗೆಯವರು ರಾಜ್ಯಾಂಗದ ಬಗ್ಗೆ ಮಾತನಾಡಿದ್ದಾರೆ. ಅವರು ಓದಿದುದನ್ನು ನಾನೂ ಕೂಡ ಓದಿದ್ದೇನೆ. ಅಧ್ಯಕ್ಷರೇ, ಇಲ್ಲಿ ಚುನಾವಣೆ ಏನೂ ಅಲ್ಲ. ಇದು ನಾಮಿನೇಷನ್. ಇದು ರಾಜ್ಯಾಂಗಕ್ಕೆ ವಿರುದ್ಧವಾಗಿ ಆಗುವುದಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ಇಲ್ಲಿ ಪ್ರಾತಿನಿಧ್ಯ ಕೊಡತಕ್ಕಂಥ ಪ್ರಶ್ನೆ ಬರುತ್ತದೆ. ಚುನಾವಣೆ ಇರಲಿ, ನಾಮಿನೇಷನ್ ಇರಲಿ, ಇಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆ ಬರುತ್ತದೆ. ನಾವು

ಕೇಳುವುದರಲ್ಲಿ ಒಂದು ಪ್ರಾತಿನಿಧ್ಯ ಹೆಚ್ಚಿಗೆ ಆಗುತ್ತದೆ ಅಷ್ಟೇ. ತಾವುಗಳು ಕೌರವರಂತೆ ಒಂದು ಇಂಚು ಜಾಗವನ್ನೂ ಬಿಟ್ಟುಕೊಡುವುದಿಲ್ಲ ಎಂಬ ಹಾಗೆ ಹಠ ಮಾಡುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ನೀವು ಕೌರವರು, ನಾವು ಪಾಂಡವರು.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾಮಿನೇಷನ್‌ನಲ್ಲಿ ಇರುವುದು ನಾಲ್ಕು ಜನರು. ನೀವು ಹೇಳಿದ ಪ್ರಕಾರ ನೀವು ಬೇರೆ ಜನಾಂಗಗಳಿಗೆ ಅನ್ಯಾಯ ಮಾಡುತ್ತಾ ಇದ್ದೀರಿ ಎಂದು ಹೇಳ ಬೇಕಾಗುತ್ತದೆ, ನೀವು ಅಲ್ಪಸಂಖ್ಯಾತರ ಪರವಾಗಿ ಇಲ್ಲ, ಹಿಂದುಳಿದ ವರ್ಗಗಳ ಪರವಾಗಿ ಇಲ್ಲ ಎಂದು ಹೇಳ ಬೇಕಾಗುತ್ತದೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಹಾಗೆಂದಮೇಲೆ, ಇನ್ನೂ ಒಂದು ಹೆಚ್ಚಿಗೆ ಮಾಡಿಬಿಡಿ. One minority. one backward class, one scheduled caste, one scheduled tribe and one woman ಎಂದು ಮಾಡಿ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳ ಬೇಕು. ಅವರು ಹೇಳುವುದನ್ನು ಕೇಳಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ತಮಗೆ ಹೇಳಲಿಕ್ಕೆ ಸುಲಭ ಆದರೆ ...

SRI K.H. SRINIVASA.—We are prepared to agree for that.

ಶ್ರೀ ಎಸ್.ಆರ್. ಬೊಮ್ಮಾಯಿ.—ಹೀಗೆ ನಾಮಿನೇಷನ್ ಮಾಡುವಲ್ಲಿ ಒಬ್ಬರನ್ನು ಎಸ್.ಸಿ. ಮತ್ತು ಎಸ್.ಟಿ. ವರ್ಗದಿಂದ ಮಾಡಬೇಕೆಂದು ಮೀಸಲಾತಿಯನ್ನು ಅಳವಡಿಸಿದ್ದೇವೆ. ಆ ಜನಾಂಗಕ್ಕೆ ಪ್ರಾತಿನಿಧ್ಯ ಕೊಡಲೇ ಬೇಕಾಗಿದೆ. ಅದು ನಮ್ಮ ಉದ್ದೇಶ.

SRI M. VEERAPPAMOILY.—It is an umbrella for your political expediency.

ಶ್ರೀ ಎಸ್.ಆರ್. ಬೊಮ್ಮಾಯಿ.—ಉಳಿದ ಜನಾಂಗಗಳವರೂ ಇದ್ದಾರೆ. ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಇದ್ದಾರೆ........

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ.........

ಶ್ರೀ ಎಂ.ಎಸ್. ಕೃಷ್ಣನ್.—ಚುನಾವಣೆ ಸಂದರ್ಭದಲ್ಲಿ ಇನ್ನೊಂದು ಅಮೆಂಡ್‌ಮೆಂಟ್‌ನನ್ನು ನೀವು ತರುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಜಿಲ್ಲಾ ಪರಿಷತ್ತಿನ ಚುನಾವಣೆಯಲ್ಲಿ ಅವರಿಗೆ ನೋವು ಉಂಟಾಗಿದೆ. ಅದೃಷ್ಟವಾಗಿದೆ.........

ಶ್ರೀ ಎಸ್.ಆರ್. ಬೊಮ್ಮಾಯಿ.—ಜಿಲ್ಲಾ ಪರಿಷತ್ತಿನಲ್ಲಿ ಆಗಿರುವುದನ್ನು ಸರಿಪಡಿಸುತ್ತೇವೆ. ಅದಕ್ಕೆ ತಿದ್ದುಪಡಿ ತರುತ್ತೇನೆ. ಇದು ನಾಮಿನೇಷನ್ ಅಷ್ಟೇ, ಚುನಾವಣೆಯಲ್ಲ. ಇಲ್ಲಿ ಯಾರೋ ಒಂದು ಅರ್ಜಿ ಹಾಕಿದರೆ ಆಗುವುದಿಲ್ಲ. ಆ ಸ್ಥಳದಲ್ಲಿದ್ದವರನ್ನೇ ನಾಮಿನೇಷನ್ ಮಾಡಿಕೊಳ್ಳ ಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಎಷ್ಟು ಎಸ್‌ಸಿ ಮತ್ತು ಎಷ್ಟು ಎಸ್‌ಟಿ ಇರುವುದನ್ನು ಮುಂದೆಯೂ ಮೈನ್‌ಟೇನ್ ಮಾಡುತ್ತೇವೆಂಬ ಭರವಸೆ ಕೊಡುತ್ತೇನೆ.

SRI M. MALLIKARJUNA KHARGE.—Where is the provision for it ?

SRI S.R. BOMMAI.—It is a nomination.

SRI M. MALLIKARJUNA KHARGE –When you are making a provision make a mandatory provision, that will be binding on all the people.

ಶ್ರೀ ಎಸ್.ಆರ್. ಬೊಮ್ಮಾಯಿ.—ಎಸ್‌ಸಿ, ಎಸ್‌ಟಿ ಇಬ್ಬರಿಗೂ ಪ್ರಾತಿನಿಧ್ಯ ಕೊಡುತ್ತೇವೆ. ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ ಆಯಾ ಪ್ರದೇಶದಲ್ಲಿ ಎಸ್‌ಸಿಯವರು ಜಾಸ್ತಿ ಜನಾಂಗ ಇದ್ದರೆ ಎಸ್‌ಸಿ ಪ್ರತಿನಿಧಿಗೆ, ಎಸ್‌ಟಿಯವರು ಜಾಸ್ತಿ ಇದ್ದರೆ ಎಸ್‌ಟಿ ಪ್ರತಿನಿಧಿಗೆ ಅವಕಾಶ ಕೊಡುತ್ತೇವೆ

ಇದನ್ನು ಮುಂದೆ ರೂಲ್ಸ್‌ನಲ್ಲಿ ಅಳವಡಿಸಿಕೊಳ್ಳುತ್ತೇವೆ. ದಯವಿಟ್ಟು ಈಗ ಇದನ್ನು ಪಾಸ್ ಮಾಡಿಕೊಡಿ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೭ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಿಗಳ ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ–೨

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—ಅಧ್ಯಕ್ಷರೇ, ಖಂಡ ೨(ಹೆಚ್) ಉಪ ಖಂಡದಲ್ಲಿ.—

೧) 'ಒಂದು ಬ್ಯಾಂಕು' ಎಂಬ ಪದಗಳ ತರುವಾಯ, 'ಒಂದು ಬಸ್ ಸ್ಟ್ಯಾಂಡ್ ಅಥವಾ ಒಂದು ಬಸ್ ಡಿಪೋ' ಎಂಬ ಪದಗಳನ್ನು ಸೇರಿಸತಕ್ಕದು.

೨) ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ನಡೆಸುವ ಒಂದು ಮನರಂಜನಾ ಕೇಂದ್ರ ಎಂಬ ಪದಗಳ ತರುವಾಯ ಒಂದು ಸಹಕಾರಿ ಸಂಘ ಅಥವಾ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ (೧೯೬೦ರ ಕರ್ನಾಟಕ ಅಧಿನಿಯಮ (೧೭)ರ ಅಡಿಯಲ್ಲಿ ನೋಂದಾಯಿತವಾದ ಒಂದು ಸಂಘದಿಂದ ಅಥವಾ ಸಂಪೂರ್ಣವಾಗಿ ಧರ್ಮಾರ್ಥ ಶೈಕ್ಷಣಿಕ ಅಥವಾ ಧಾರ್ಮಿಕ ಉದ್ದೇಶಗಳಿಗಾಗಿಯೇ ಸೃಜಿಸಲಾದ ಒಂದು ನ್ಯಾಸದಿಂದ ನಡೆಸಲಾಗುವ ಶೈಕ್ಷಣಿಕ, ಧಾರ್ಮಿಕ ಸಾಮಾಜಿಕ ಅಥವಾ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಅಥವಾ ಸೇವಾ ಮನೋಭಾವನೆ ಸೇವೆಗಳಿಗಾಗಿ ಒಂದು ಕೇಂದ್ರ' ಎಂಬ ಪದಗಳನ್ನು ಆವರಣಗಳನ್ನು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು.

ಅಧ್ಯಕ್ಷರು.—ಈ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಖಂಡ ೨(ಹೆಚ್) ಉಪ ಖಂಡದಲ್ಲಿ (೧) 'ಒಂದು ಬ್ಯಾಂಕು' ಎಂಬ ಪದಗಳ ತರುವಾಯ, 'ಒಂದು ಬಸ್ ಸ್ಟ್ಯಾಂಡ್ ಅಥವಾ ಒಂದು ಬಸ್ ಡಿಪೋ' ಎಂಬ ಪದಗಳನ್ನು ಸೇರಿಸುವುದು.

(೨) ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ನಡೆಸುವ ಒಂದು ಮನರಂಜನಾ ಕೇಂದ್ರ ಎಂಬ ಪದಗಳ ತರುವಾಯ ಒಂದು ಸಹಕಾರಿ ಸಂಘ ಅಥವಾ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ (೧೯೬೦ರಂದು ಕರ್ನಾಟಕ ಅಧಿನಿಯಮ (೧೭)ರ ಅಡಿಯಲ್ಲಿ ನೋಂದಾಯಿತವಾದ ಒಂದು ಸಂಘದಿಂದ ಅಥವಾ ಸಂಪೂರ್ಣವಾಗಿ ದರ್ಮಾರ್ಥ ಶೈಕ್ಷಣಿಕ ಅಥವಾ ಧಾರ್ಮಿಕ ಉದ್ದೇಶಗಳಿಗಾಗಿಯೇ ಸೃಜಿಸಲಾದ ಒಂದು ನ್ಯಾಸದಿಂದ ನಡೆಸಲಾಗುವ ಶೈಕ್ಷಣಿಕ, ಧಾರ್ಮಿಕ ಸಾಮಾಜಿಕ ಅಥವಾ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಅಥವಾ ಸೇವಾ ಮನೋ ಭಾವದ ಸೇವೆಗಳಿಗಾಗಿ ಒಂದು ಕೇಂದ್ರ,' ಎಂಬ ಪದಗಳನ್ನು ಆವರಣಗಳನ್ನು ಮತ್ತು ಅಂಕಿಗಳನ್ನು ಸೇರಿಸುವುದು.

ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು

ಖಂಡ ೨ ತಿದ್ದುಪಡಿಯೊಂದಿಗೆ ವಿಧೇಯಕದ ಅಂಗವಾಯಿತು

ಖಂಡ ೩

ಅಧ್ಯಕ್ಷರು.—ಈಗ ೩ನೇ ಖಂಡಕ್ಕೆ ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ಮಂಡಿಸುವುದು.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಖಂಡ ೩ಕ್ಕೆ (೩)ನೇ ಉಪ ಖಂಡದಲ್ಲಿ ಎಲ್ಲಾ ಬಾಬಿಗೆ ಈ ಮುಂದಿನ ಬಾಬುಗಳನ್ನು ಪ್ರತಿಸ್ಥಾಪಿಸತಕ್ಕದು ಎಂದರೆ.—

ಎಲ್) ವಾಸ್ತುಶಿಲ್ಪದಲ್ಲಿ ಅನುಭವವಿರುವ ಒಬ್ಬ ವ್ಯಕ್ತಿ.

ಎಂ) ಒಬ್ಬಳು ಮಹಿಳೆ ಮತ್ತು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ಒಳಗೊಂಡ ನಾಲ್ವರು.

ಎನ್) ಕವಿಷಾಪನರು, ಪದನಿಮಿತ್ತ.

(೨) (೪)ನೇ ಉಪಖಂಡದಲ್ಲಿ 'ಖಂಡ (ಕೆ)' ಎಂಬ ಪದಗಳು ಆವರಣಗಳು ಮತ್ತು ಅಕ್ಷರಕ್ಕೆ 'ಕೆ' ಖಂಡದಿಂದ ಎಂ ಖಂಡದವರೆಗೆ ಎಂಬ ಪದಗಳು ಆವರಣಗಳು ಮತ್ತು ಅಕ್ಷರಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಅಧ್ಯಕ್ಷರು.—ಖಂಡ ೩ಕ್ಕೆ (೩)ನೇ ಉಪ ಖಂಡದಲ್ಲಿ (ಎಲ್) ಬಾಬಿಗೆ ಈ ಮುಂದಿನ ಬಾಬುಗಳನ್ನು ಪ್ರತಿಸ್ಥಾಪಿಸುವುದು, ಅಂದರೆ.—

ಎಲ್) ವಾಸ್ತು ಶಿಲ್ಪದಲ್ಲಿ ಅನುಭವವಿರುವ ಒಬ್ಬ ವ್ಯಕ್ತಿ,

ಎಂ) ಒಬ್ಬಳು ಮಹಿಳೆ ಮತ್ತು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ಒಳಗೊಂಡ ನಾಲ್ವರು.

ಎನ್) ಕವಿಷಾಪನರು, ಪದನಿಮಿತ್ತ,

೨) (೪)ನೇ ಉಪ ಖಂಡದಲ್ಲಿ 'ಖಂಡ (ಕೆ)' ಎಂಬ ಪದಗಳು ಆವರಣಗಳು ಮತ್ತು ಅಕ್ಷರಕ್ಕೆ 'ಕೆ' ಖಂಡದಿಂದ ಎಂ ಖಂಡದವರೆಗೆ ಎಂಬ ಪದಗಳು ಆವರಣಗಳು ಮತ್ತು ಅಕ್ಷರಗಳನ್ನು ಪ್ರತಿಸ್ಥಾಪಿಸುವುದು.

ಖಂಡ ೩

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಖಂಡ ಮೂರು, ತಿದ್ದುಪಡಿ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು,

ಖಂಡ ೪ ರಿಂದ ೭೯ ಸೇರಿದಂತೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಖಂಡ ೪ ರಿಂದ ೭೯ನೇ ಖಂಡಗಳು ಎರಡೂ ಸೇರಿದಂತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ ೪ ರಿಂದ ೭೯ ಖಂಡಗಳು ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ ೧ ಇತ್ಯಾದಿ.

ಅಧ್ಯಕ್ಷರು.—"ಮೊದಲನೆ ಖಂಡ ೧ ಇತ್ಯಾದಿ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಎಂ, ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—೧೯೮೭ನೇ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೭ನೇ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು.— ಮಾನ್ಯ ಖರ್ಗೆಯವರೆ, ವಿಧಾನ ಪರಿಷತ್ತಿನಿಂದ ಯೂನಿವರ್ಸಿಟಿಬಿಲ್ ಬಂದಿದೆ ಅದನ್ನು ಮುಗಿಸೋಣ.

ಶ್ರೀ ಬಿ. ಸೋಮಶೇಖರ್.—ನಾನು ನಿನ್ನೆ ದಿವಸ ಮಂಡಿಸಿದ್ದೇನೆ. ದಯುವಿಟ್ಟು ಅದನ್ನು ಪಾಸ್ ಮಾಡಿಕೊಟ್ಟರೆ ಸಂತೋಷ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾವು ಒಂದು ಪ್ರಮುಖ ವಿಷಯದ ಮೇಲೆ ಮಾತನಾಡ ಬೇಕಾಗಿದೆ. ಇದು ಜನರ ಸಮಸ್ಯೆ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಇದಾದ ಕೂಡಲೇ ತೆಗೆದುಕೊಳ್ಳೋಣ.

ಅಧ್ಯಕ್ಷರು.—ಈಗ ಯುನಿವರ್ಸಿಟಿ ಬಿಲ್ ತೆಗೆದುಕೊಂಡು ನಂತರ ಮಾನ್ಯ ಖರ್ಗೆಯವರದ್ದು ಇದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಳೆ ೧೧ ಗಂಟೆಗೆ ಅದನ್ನು ತೆಗೆದುಕೊಳ್ಳೋಣ. ಇದಾದ ಮೇಲೆ ಬಿಲ್ ಮಾಡೋಣ,

ಶ್ರೀ ಎಸ್.ಆರ್. ಬೊಮ್ಮಾಯಿ.—ನಾಳೆ ಕೂಡ ಬಿಲ್ಸ್ ಇದೆ.

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ನಾನೂ ಸಹ ನಿಯಮಾವಳಿ ೧೫೮ರಲ್ಲಿ ಎಲೆಕ್ಟ್ರಿಸಿಟಿ ದರ ಹೆಚ್ಚಿಸಿರುವುದರ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—೧೫೮ ಹೇಳಿದರೆ ಅವರು ಏನು ಮಾಡುವುದಕ್ಕೆ ಸಾಧ್ಯ ?

(ಗೊಂದಲ)

ಅಧ್ಯಕ್ಷರು.—ನಾನು ನಿಮಗೆ ಅನುಕೂಲ ಮಾಡಿಕೊಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದನ್ನು ತೆಗೆದುಕೊಂಡು ಆಮೇಲೆ ಅವರ ಸಬ್ಜೆಕ್ಟ್ ತೆಗೆದು ಕೊಳ್ಳೋಣ.

ಶ್ರೀ ಬಿ. ಸೋಮಶೇಖರ್,—ಯುನಿವರ್ಸಿಟಿ ಬಿಲ್ ನಿನ್ನೆ ಬರಬೇಕಾಗಿತ್ತು. ಈಗ ತೆಗೆದು ಕೊಳ್ಳೋಣ ಹತ್ತು ನಿಮಿಷದಲ್ಲಿ ಮುಗಿಸಬಹುದು.

(ಗೊಂದಲ)

ಅಧ್ಯಕ್ಷರು.—ವಿಧಾನ ಪರಿಷತ್ತಿನಿಂದ ಬಂದಿದೆ ನೀವು ಇದರ ಮೇಲೆ ಮಾತನಾಡಿ. ಮಾಜಿ ಶಿಕ್ಷಣ ಮಂತ್ರಿಗಳು ನೀವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಇರಲಿ ಅಟ್ರಾಸಿಟಿ ಮೇಲೆ ನಾಳೆ ೧೨ ಗಂಟೆಗೆ ತೆಗೆದು ಕೊಳ್ಳೋಣ ಅಂದರೆ ಮಾತನಾಡುತ್ತೇನೆ,

ಅಧ್ಯಕ್ಷರು.—ಇದು ಮುಗಿಸಿದ ಕೂಡಲೇ ಅದಕ್ಕೆ ಹೋಗೋಣ. ನಿನ್ನೆ ೮ರ ತನಕ ನಡೆದಿತ್ತು. ಇವತ್ತು ಇದನ್ನು ಮುಗಿಸೋಣ ಇಲ್ಲದೇ ಹೋದರೆ ನಾನು ಓಟಿಗೆ ಹಾಕುತ್ತೇನೆ.